# ಆಟಿಕೆ

## ಅನುಬಂಧ

---

## ಆಟದ ದೋಣಿ [4+]

ಚಟುವಟಿಕಾ ಕಾರ್ಡುಗಳ ವಿನಿಮಯ ಸಹಾಯಿ

ಕೇರಳ ಸರಕಾರ

ಶಿಕ್ಷಣ ಇಲಾಖೆ

ತಯಾರಿಸಿದವರು

**ರಾಜ್ಯ ವಿದ್ಯಾಭ್ಯಾಸ ಸಂಶೋಧನೆ ಮತ್ತು ತರಬೇತಿ ಸಂಸ್ಥೆ [SCERT]**

ವಿದ್ಯಾಭವನ್, ಪೂಜಪ್ಪುರ, ತಿರುವನಂತಪುರ – 695012

**Phone : 0471-2341883, 2340323, E-Mail – scertkerala@gmail.com**

Prepared by :
State Council of Educational Research & Training [SCERT]
Poojappura, Thiruvananthapuram – 12, Kerala.
E-Mail : scertkerala@gmail.com

Type Setting by :
SCERT Computer Lab

Copy right :
Government of Kerala
Education Department
**2018**

**ಅಧ್ಯಾಪಕರಲ್ಲಿ,**

ಆಟಗಳ ಮೂಲಕವೂ, ಮೂರ್ತ ಹಾಗೂ ಪರಿಚಿತವಾದ ವಸ್ತುಗಳ ಮತ್ತು ಘಟನೆಗಳ ಆಧಾರದಲ್ಲಿ ಲಭಿಸುವ ಅನುಭವಗಳ ಮೂಲಕ ಸಾಮರ್ಥ್ಯ ಹಾಗೂ ಮೌಲ್ಯಗಳನ್ನು ಬೆಳೆಸುವುದಕ್ಕೆ ಪ್ರಿ ಸ್ಕೂಲ್ ಗಳಲ್ಲಿ ಪ್ರಾಧಾನ್ಯತೆಯನ್ನು ನೀಡಬೇಕಾಗಿದೆ.

ಮಕ್ಕಳಲ್ಲಿರುವ ವ್ಯಕ್ತಿ ವ್ಯತ್ಯಾಸಗಳು, ಸಾಮಾಜಿಕ, ಸಾಂಸ್ಕೃತಿಕ ಪರಿಸರದ ಅಂತರಗಳು ಸಮಾಜದಲ್ಲಿ ಸಂಭವಿಸುತ್ತಿರುವ ಕಾಲೋಚಿತ ಬದಲಾವಣೆಗಳು, ಮೊದಲಾದುವುಗಳನ್ನು ಪರಿಗಣಿಸಿಕೊಂಡು ರಾಜ್ಯ ವಿದ್ಯಾಭ್ಯಾಸ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯು ಪ್ರಿ ಸ್ಕೂಲ್ ಪಠ್ಯಕ್ರಮ, ಪ್ರಿ ಸ್ಕೂಲ್ ಅಧ್ಯಾಪಕ ಕೈಪಿಡಿಯಾದ **'ಆಟಿಕೆ'** ಯನ್ನು ತಯಾರಿಸಿದೆ.

ದೈಹಿಕ ಚಲನಾತ್ಮಕ ವಿಕಾಸ, ಭಾಷಾ ವಿಕಾಸ, ವೈಜ್ಞಾನಿಕ ವಿಕಾಸ, ಸಾಮಾಜಿಕ ಭಾವನಾತ್ಮಕ ವಿಕಾಸ, ಸೃಜನಾತ್ಮಕ – ಸೌಂದರ್ಯಾತ್ಮಕ ವಿಕಾಸ ಮೊದಲಾದ ಐದು ವಿಕಾಸ ಮಂಡಲಗಳಲ್ಲಾಗಿ 87 ಸಾಮರ್ಥ್ಯಗಳನ್ನು 4 ವರ್ಷ ಪ್ರಾಯವಾಗುವುದರೊಳಗಾಗಿ ಮಗುವು ಗಳಿಸಿರಬೇಕು ಎಂಬ ಗುರಿಯೊಂದಿಗೆ ಪ್ರಿ ಸ್ಕೂಲ್ ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ಸಾಮರ್ಥ್ಯಗಳನ್ನು ಬೆಳೆಸುವುದಕ್ಕಾಗಿ ಮಗುವಿನ ಪರಿಚಿತ ಪರಿಸರಕ್ಕೆ ಸಂಬಂಧಿಸಿದ ಮೂವತ್ತು ಥೀಂಗಳನ್ನು ಆಧಾರವಾಗಿರಿಸಿ, ಚಟುವಟಿಕಾನುಭವಗಳನ್ನು ಅಧ್ಯಾಪಿಕೆ ಸಿದ್ಧಪಡಿಸಬೇಕಾಗಿದೆ. ತರಗತಿ ಚಟುವಟಿಕೆಗಳನ್ನು ಆಯೋಜಿಸಲಿರುವ ಸಹಾಯಕ ಸಾಮಗ್ರಿಯಾಗಿ **'ಆಟಿಕೆ'** ಎಂಬ ಪ್ರಿ ಸ್ಕೂಲ್ ಅಧ್ಯಾಪಕ ಕೈಪಿಡಿಯನ್ನು ತಯಾರಿಸಲಾಗಿದೆ.

ಪ್ರಿ ಸ್ಕೂಲ್ ಪಠ್ಯಕ್ರಮದ ಹಾಗೂ ಅಧ್ಯಾಪಕ ಕೈಪಿಡಿಯಾದ **'ಆಟಿಕೆ'**ಯ ಆಧಾರದಲ್ಲಿ, ಪ್ರಿ ಸ್ಕೂಲ್ ಮಕ್ಕಳಿಗಾಗಿ [3+,4+] ಆಟದ ದೋಣಿ ಎಂಬ ಹೆಸರಿನಲ್ಲಿ ಚಟುವಟಿಕಾ ಕಾರ್ಡುಗಳನ್ನು ತಯಾರಿಸಲಾಗಿದೆ. ಕೈಪಿಡಿಯು ತರಗತಿಯಲ್ಲಿ ಈ ಕಾರ್ಡುಗಳನ್ನು ವಿನಿಮಯ ಮಾಡುವುದಕ್ಕಿರುವ ಸಹಾಯಕ ಸಾಮಗ್ರಿಯಾಗಿದೆ. ಸ್ವಂತವಾಗಿ ಚಟುವಟಿಕೆಗಳನ್ನು ರೂಪೀಕರಿಸುವುದಕ್ಕೂ, ಚಟುವಟಿಕಾ ಕಾರ್ಡುಗಳನ್ನು ತಯಾರಿಸುವುದಕ್ಕೂ ಅಧ್ಯಾಪಿಕೆಗೆ ಸ್ವಾತಂತ್ರ್ಯವಿದೆ. ಈ ಕೈಪಿಡಿಯನ್ನು ಫಲಪ್ರದವಾಗಿ ಉಪಯೋಗಿಸುವಿರಲ್ಲವೇ?

ಶುಭಾಶಯಗಳೊಂದಿಗೆ,

**ಡಾ. ಜೆ. ಪ್ರಸಾದ್**

**ಡೈರೆಕ್ಟರ್**

# ಆಟದ ದೋಣಿ

## ವರ್ಕ್ ಶೀಟುಗಳನ್ನುಪಯೋಗಿಸುವಾಗ

ಥೀಂಗಳ ಆಶಯಗಳನ್ನು ವಿನಿಮಯದ ಪ್ರಾರಂಭದಲ್ಲೋ, ಮಗುವಿನ ಚಿಂತನಾ ಸಾಮರ್ಥ್ಯ, ಸೃಜನಾತ್ಮಕತೆ ಎಂಬಿವುಗಳನ್ನು ಚುರುಕುಗೊಳಿಸುವುದಕ್ಕಾಗಿಯೋ, ಥೀಂಗಳ ವಿನಿಮಯದ ನಂತರ ಮಕ್ಕಳ ತಿಳುವಳಿಕೆಯನ್ನು ಪ್ರಕಟಪಡಿಸಲೋ, ವರ್ಕ್ ಶೀಟುಗಳನ್ನು ಉಪಯೋಗಿಸಬಹುದಾಗಿದೆ. ವಿವಿಧ ಥೀಂಗಳಿಗೆ ಸಂಬಂಧಿಸಿದ ನಿರ್ದಿಷ್ಟ ನೈಪುಣ್ಯಗಳನ್ನು ಬೆಳೆಸಲು ನೀಡುವ ಅನುಭವ ಚಟುವಟಿಕೆಗಳ ಮುಂದುವರಿಕೆಯಾಗಿಯೋ, ಪೂರ್ತೀಕರಣವಾಗಿಯೋ, ಮೌಲ್ಯಮಾಪನಕ್ಕಾಗಿಯೋ ವರ್ಕ್ ಶೀಟುಗಳನ್ನು ಉಪಯೋಗಿಸಬಹುದು. ಇಂತಹ ಕೆಲವು ಸಾಧ್ಯತೆಗಳನ್ನು ಕೆಳಗೆ ನೀಡಲಾಗಿದೆ.

- **ಥೀಂ ಚಟುವಟಿಕೆಗಳು ⇨ ವರ್ಕ್ ಶೀಟು ⇨ ಥೀಂ ಚಟುವಟಿಕೆಗಳು**

ಥೀಂಗೆ ಸಂಬಂಧಿಸಿದ ಅನುಭವಗಳನ್ನು ನೀಡುವುದರೊಂದಿಗೆ ಸಹಜವಾಗಿ ವರ್ಕ್ ಶೀಟುಗಳನ್ನು ನೀಡಿ, ಮುಂದುವರಿದ ಚಟುವಟಿಕೆಗಳನ್ನು ಆಯೋಜಿಸಬಹುದು.

- **ವರ್ಕ್ ಶೀಟು + ಥೀಂ ಚಟುವಟಿಕೆಗಳು ⇨ ಥೀಂ ಚಟುವಟಿಕೆಗಳು ⇨ ವರ್ಕ್ ಶೀಟು ⇨ ಥೀಂ ಚಟುವಟಿಕೆಗಳು**

ವರ್ಕ್ ಶೀಟು ಚಟುವಟಿಕೆಯನ್ನು ನೀಡುವುದರೊಂದಿಗೆ ಸಹಜವಾಗಿ ಇತರ ಚಟುವಟಿಕೆಗಳನ್ನು ಹೊಂದಿಸಿಕೊಂಡು ಮಾಡಬಹುದು.

- ಒಂದು ಅನುಭವ ಸಾಮಗ್ರಿಯಾಗಿ ವರ್ಕ್ ಶೀಟುಗಳ ಪ್ರಯೋಜನವನ್ನು ಪಡೆಯಬಹುದು.
- ಮಗುವಿನ ವರ್ಕ್ ಶೀಟುಗಳನ್ನು ಪರಸ್ಪರ ಹೊಂದಿಸಿಕೊಂಡು ವಿಶ್ಲೇಷಿಸುವುದಕ್ಕೂ ವಿಕಾಸ ಮಂಡಲಗಳ ಬೆಳವಣಿಗೆಯನ್ನು ಗುರುತಿಸುವುದಕ್ಕೂ ಸಾಧ್ಯವಾಗುವಂತೆ ವರ್ಕ್ ಶೀಟುಗಳನ್ನು ಉಪಯೋಗಿಸಬಹುದು. ಒಂದು ಮಗುವಿನ ನಿರಂತರವಾದ ಚಟುವಟಿಕೆಗಳಲ್ಲಿರುವ ಬದಲಾವಣೆಯನ್ನಾಗಿದೆ ಮೌಲ್ಯಮಾಪನ ಮಾಡಬೇಕಾದುದು.
- ಮಗುವು ಭಾಗವಹಿಸುವ ಚಟುವಟಿಕೆಗಳ ಪ್ರಕ್ರಿಯೆಯನ್ನು ಅಧ್ಯಾಪಿಕೆ ಗಮನಿಸುತ್ತಾ ಇರಬೇಕು.
- ಬೇರೆ ಬೇರೆ ಮಕ್ಕಳ ವರ್ಕ್ ಶೀಟುಗಳನ್ನು ಪರಸ್ಪರ ಹೋಲಿಸಬಾರದು.
- ಪ್ರತಿ ಮಗುವಿನ ವಿಕಾಸ ಹಂತದಲ್ಲಿರುವ ವೇಗವು ವ್ಯತ್ಯಸ್ತವಾಗಿದೆ. ಆದುದರಿಂದ ಮಕ್ಕಳ ಸಾಮರ್ಥ್ಯಗಳನ್ನು ತಮ್ಮೊಳಗೆ ಹೋಲಿಸಬಾರದು.
- ಲಭ್ಯವಾದ ವರ್ಕ್ ಶೀಟುಗಳ ಮುಂದುವರಿಕೆಯಾಗಿ ಅಥವಾ ಅದರ ಅನುಬಂಧವಾಗಿ ಹೊಸ ವರ್ಕ್ ಶೀಟುಗಳನ್ನು ತಯಾರಿಸಲು ಅಧ್ಯಾಪಿಕೆಗೆ ಸ್ವಾತಂತ್ರ್ಯವಿದೆ.
- ಮಗು ವರ್ಕ್ ಶೀಟುಗಳನ್ನು ಪೂರ್ತಿಗೊಳಿಸಿದರೆ ಅದರ ಸಂಗ್ರಹ, ಪುನರುಪಯೋಗ ಎಂಬಿವುಗಳ ಕುರಿತು ಅಧ್ಯಾಪಿಕೆಗೆ ಸ್ಪಷ್ಟವಾದ ತಿಳುವಳಿಕೆ ಇರಬೇಕು. ಪೂರ್ತಿಗೊಳಿಸಿದ ವರ್ಕ್ ಶೀಟುಗಳನ್ನು ಪೋರ್ಟ್ ಫೋಲಿಯೋದಲ್ಲಿ ಸಂಗ್ರಹಿಸಿಡಬೇಕು. ವರ್ಕ್ ಶೀಟನ್ನು ಔಪಚಾರಿಕ ಕಲಿಕೆ ಎಂಬ ರೀತಿಯಲ್ಲಿ ಕಾಣಬಾರದು.

## ವರ್ಕ್ ಶೀಟುಗಳು - ಚಟುವಟಿಕೆಗಳು

**ವಿವಿಧ ವಿಕಾಸ ಮಂಡಲಗಳಿಗೆ ಪ್ರಾಧಾನ್ಯತೆ ನೀಡುವ ವರ್ಕ್ ಶೀಟುಗಳನ್ನು ಕೊಡಲಾಗಿದೆ. ವಿವರಗಳನ್ನು ಕೆಳಗೆ ಕೊಡಲಾಗಿದೆ.**

### 1. ದೈಹಿಕ ಚಲನಾತ್ಮಕ ವಿಕಾಸ

ಸೂಕ್ಷ್ಮ ಪೇಶಿ ವಿಕಾಸಕ್ಕಾಗಿ ಹೆಚ್ಚಿನ ಎಲ್ಲಾ ವರ್ಕ್ ಶೀಟುಗಳಲ್ಲಿ ಅವಕಾಶವನ್ನು ನೀಡಲಾಗಿದೆ. ಚಿತ್ರ ರಚನೆ, ಬಣ್ಣ ಹಚ್ಚುವುದು, ನಿರ್ಮಾಣ ಎಂಬಿವುಗಳು ಈ ವಿಕಾಸ ಮಂಡಲಗಳಿಗೆ ಒತ್ತು ನೀಡುವವುಗಳಾಗಿವೆ. ಗೆರೆ ಎಳೆದು ಜೋಡಿಸುವುದು. ಉರುಟು ಹಾಕುವುದು, ಪೂರ್ವ ಲೇಖನ ಚಟುವಟಿಕೆಗಳು ಎಂಬಿವುಗಳನ್ನು ಮಾಡುವಾಗಲೂ ಪೇಶಿಚಲನೆ ಉಂಟಾಗುವುದು. ಹರಿಯುವುದು, ಕತ್ತರಿಸುವುದು, ಅಂಟಿಸುವುದು ಮೊದಲಾದ ಅನುಭವಗಳ ಮೂಲಕವೂ ಸೂಕ್ಷ್ಮ ಪೇಶಿಗಳ ವಿಕಾಸವು ಉಂಟಾಗುವುದು.

3+ ಪ್ರಾಯದ ಮಕ್ಕಳಿಗೆ ಸೂಕ್ಷ್ಮಪೇಶಿಗಳ ಚಲನಾ ಸಾಮರ್ಥ್ಯ ಕಡಿಮೆಯಾಗಿರಬಹುದು. ಆದುದರಿಂದ **'ಆಟದ ದೋಣಿ'**ಯಲ್ಲಿ ಅವರಿಗೆ ಮಾಡಲು ಸಾಧ್ಯವಿರುವ ಚಿಕ್ಕ ಚಿಕ್ಕ ಚಟುವಟಿಕೆಗಳನ್ನು ನೀಡಲಾಗಿದೆ. ಇದಲ್ಲದೇ ಸ್ಥೂಲಪೇಶೀ ವಿಕಾಸಕ್ಕಾಗಿ ಓಡುವುದು, ಜಿಗಿಯುವುದು, ಮೆಟ್ಟಲೇರಿ ಇಳಿಯುವುದು, ತೆವಳುವುದು ಮೊದಲಾದ ಹಲವಾರು ಅನುಭವ ಚಟುವಟಿಕೆಗಳನ್ನು ತರಗತಿಗಳಲ್ಲಿ ನೀಡಬೇಕಾಗಿದೆ.

4+ ಮಕ್ಕಳಿಗೆ ಇನ್ನಷ್ಟು ಸೂಕ್ಷ್ಮತೆ ಅಗತ್ಯವಿರುವ ಚಟುವಟಿಕೆಗಳನ್ನು ನೀಡಲಾಗಿದೆ. ಉದಾಹರಣೆಗೆ ಕತ್ತರಿ ಉಪಯೋಗಿಸಿ ನಿಖರವಾಗಿ ಕತ್ತರಿಸಲಿರುವ ತರಬೇತಿ. ಇದಕ್ಕಾಗಿ ಮಕ್ಕಳಿಗೆ ಉಪಯೋಗಿಸಲು ಸಾಧ್ಯವಿರುವ [Child Safe] ಕತ್ತರಿಗಳನ್ನುಪಯೋಗಿಸುವುದು ಉತ್ತಮ. ಚುಕ್ಕೆಗಳನ್ನು ಸೇರಿಸಿ ಚಿತ್ರವನ್ನು ಪೂರ್ತಿಗೊಳಿಸುವುದು ಇನ್ನೊಂದು ಚಟುವಟಿಕೆಯಾಗಿದೆ. ಒಂದನೇ ತರಗತಿಯಲ್ಲಿ ಮಗು ಅಕ್ಷರಗಳನ್ನೂ ಪದಗಳನ್ನೂ ವಾಕ್ಯಗಳನ್ನೂ ಬರೆಯಬೇಕಾಗಿದೆ. ಆದುದರಿಂದ 4+ ನಲ್ಲಿ ಪೂರ್ವಲೇಖನ ಚಟುವಟಿಕೆಗಳನ್ನು ಧಾರಾಳವಾಗಿ ನೀಡಬೇಕು.

### 2. ಭಾಷಾ ವಿಕಾಸ

ಪ್ರಿಸ್ಕೂಲ್ ಹಂತದಲ್ಲಿ ಮಾತುಗಾರಿಕೆಗೆ ಅತ್ಯಂತ ಪ್ರಾಧಾನ್ಯತೆಯಿದೆ. ಸಂಕೋಚ ಹಾಗೂ ಭಯವಿಲ್ಲದೆ ಮಾತನಾಡುವುದಕ್ಕೆ ಮಗುವನ್ನು ಪ್ರಾಪ್ತಗೊಳಿಸಲು ನಾವು ಪ್ರಯತ್ನಿಸಬೇಕು. ಇದಕ್ಕೆ ಎಲ್ಲ ವರ್ಕ್ ಶೀಟುಗಳಲ್ಲೂ ಅವಕಾಶವಿದೆ.

ಚಿತ್ರ ನೋಡಿ ತಿಳಿಯುವುದು, ಬಯಲು ಪ್ರವಾಸ, ಬೊಂಬೆಯಾಟ, ರೋಲ್ ಪ್ಲೇ ಆಟಗಳು, ಇತರ ಅನುಭವ ಚಟುವಟಿಕೆಗಳು ಎಂಬಿವುಗಳಲ್ಲೆಲ್ಲ ಪ್ರತಿ ಮಗುವಿಗೂ ಮಾತನಾಡಲು ಅವಕಾಶವನ್ನು ಒದಗಿಸಬೇಕಾಗಿದೆ. ಚಿತ್ರಗಳಲ್ಲಿ ಕಾಣುವ ವಿಷಯಗಳ ಕುರಿತು ಹೇಳುವುದು, ರಚಿಸಿದ ಅಥವಾ ಬಣ್ಣ ಹಚ್ಚಿದ ಚಿತ್ರಗಳ ಕುರಿತು ಹೇಳುವುದು, ಇತರರ ಚಿತ್ರಗಳ ಕುರಿತು ಅಭಿಪ್ರಾಯಗಳನ್ನು ಹೇಳುವುದು, ಮಾಡಿದ ಕಾರ್ಯಗಳ ಯುಕ್ತಿಯನ್ನು ಹೇಳುವುದು ಹಾಗೂ ಸಮರ್ಥಿಸುವುದು ಮೊದಲಾದ ಮಾತುಗಾರಿಕೆಗೆ ಇರುವ ಹಲವಾರು ಸಾಧ್ಯತೆಗಳನ್ನು ವರ್ಕ್ ಶೀಟು ಚಟುವಟಿಕೆಗಳೊಂದಿಗೆ ಹೊಂದಿಸಲಾಗಿದೆ.

3+ ಪ್ರಾಯದಲ್ಲಿ ಮಕ್ಕಳು ಆಶಯ ವಿನಿಮಯವನ್ನು ನಡೆಸುವುದು ಸ್ವಂತ ಮನೆಭಾಷೆಯಲ್ಲಿ ಆಗಿರಬಹುದು. ಈ ಸಂದರ್ಭದಲ್ಲಿ ತಮಾಷೆ ಮಾಡುವುದು, ತಡೆ ಒಡ್ಡುವುದು, ಅವಗಣನೆ ಎಂಬಿವುಗಳು ಅಧ್ಯಾಪಿಕೆಯಿಂದ ಉಂಟಾಗಬಾರದು. ಅದು ಆತ್ಮವಿಶ್ವಾಸವನ್ನು ಕುಗ್ಗಿಸಬಹುದು. ಮಾತನಾಡುವುದಕ್ಕಿರುವ ಪ್ರೋತ್ಸಾಹದ ಅಗತ್ಯವಿದೆ.

4+ ಆಗುವಾಗ ಮನೆಭಾಷೆಯಿಂದ ಮಾನಕ ಭಾಷೆಗೆ ಬೆಳೆಯುವುದಕ್ಕಿರುವ ಮಾದರಿಗಳು ಹಾಗೂ ಅನುಭವಗಳನ್ನು ನೀಡಬೇಕಾಗಿದೆ. ವರ್ಕ್ ಶೀಟುಗಳನ್ನು ಮಂಡಿಸುವ ಹಂತದಲ್ಲಿ ಇಂತಹ ಸಾಧ್ಯತೆಗಳನ್ನು ಉದ್ದೇಶಪೂರ್ವಕವಾಗಿ ಅಳವಡಿಸಬೇಕು. ಈ ಹಂತದಲ್ಲಿ ಪೂರ್ವಲೇಖನ ಚಟುವಟಿಕೆಗಳನ್ನು ನೀಡುವ ರೀತಿಯಲ್ಲಿ **'ಆಟದ ದೋಣಿ'**ಯ ವರ್ಕ್ ಶೀಟುಗಳನ್ನು ಕ್ರಮೀಕರಿಸಲಾಗಿದೆ.

## 3. ವೈಜ್ಞಾನಿಕ ವಿಕಾಸ ಮಂಡಲ

ವಿಜ್ಞಾನ ಹಾಗೂ ಗಣಿತಕ್ಕಿರುವ ಅನುಭವ ಚಟುವಟಿಕೆಗಳನ್ನು ಈ ಮಂಡಲದಲ್ಲಿ ಅಳವಡಿಸಲಾಗಿದೆ. ದೊಡ್ಡದು/ಸಣ್ಣದು, ಹೆಚ್ಚು/ಕಡಿಮೆ, ಹತ್ತಿರ/ದೂರ, ಉದ್ದ ಹೆಚ್ಚು/ಕಡಿಮೆ, ಎತ್ತರ ಹೆಚ್ಚು/ಕಡಿಮೆ, ವಸ್ತುಗಳನ್ನು ಎಣಿಸುವುದು, ಹೊಂದಿಸುವುದು ಮೊದಲಾದ ಪೂರ್ವ ಗಣಿತಾಶಯ ಚಟುವಟಿಕೆಗಳನ್ನು ಅಳವಡಿಸಲಾಗಿದೆ. ತರಗತಿಗಳಲ್ಲಿ ಧಾರಾಳ ಚಟುವಟಿಕೆಗಳನ್ನು ನೀಡಿದ ನಂತರ ವರ್ಕ್ ಶೀಟುಗಳನ್ನು ಉಪಯೋಗಿಸಬೇಕು.

ನಿರೀಕ್ಷಣೆ, ಹೋಲಿಸುವುದು, ಸಾಮ್ಯವ್ಯತ್ಯಾಸಗಳನ್ನು ಕಂಡುಕೊಳ್ಳುವುದು, ವರ್ಗೀಕರಿಸುವುದು, ಕಂಡುಕೊಂಡವುಗಳನ್ನು ಮಂಡಿಸುವುದು ಮೊದಲಾದ ಪ್ರಕ್ರಿಯಾ ಸಾಮರ್ಥ್ಯಗಳಿಗೆ ಸಂಬಂಧಿಸಿದ ಹಲವಾರು ಚಟುವಟಿಕೆಗಳನ್ನು **'ಆಟದ ದೋಣಿ'**ಯಲ್ಲಿ ಅಳವಡಿಸಲಾಗಿದೆ.

ವರ್ಕ್ ಶೀಟುಗಳಲ್ಲಿ ಚಿತ್ರ ನಿರೀಕ್ಷಣೆಗೆ ಮಾತ್ರ ಸಾಧ್ಯತೆ ಇರುವುದು. ಆದುದರಿಂದ ನೋಡಿ, ಆಲಿಸಿ, ಮೂಸಿ, ರುಚಿಸಿ, ಸ್ಪರ್ಶಿಸಿ ತಿಳಿಯುವುದು ಎಂಬಿವುಗಳ ಮೂಲಕ ನಿರೀಕ್ಷಣೆ ಮಾಡುವುದಕ್ಕೆ ಅವಕಾಶ ಲಭಿಸುವಂತೆ ಕಲಿಕಾನುಭವಗಳ ಯೋಜನೆ ಮಾಡಬೇಕಾಗಿದೆ. ಯುಕ್ತಿ ಚಿಂತನೆ, ಕಾರ್ಯಕಾರಣ ಸಂಬಂಧಗಳನ್ನು ಕಂಡುಹಿಡಿದು ಹೇಳುವುದು, ನಮೂನೆಗಳನ್ನು ರಚಿಸುವುದು, ವಿವಿಧ ರೀತಿಯ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗುವುದು, ನೆನಪಿಸಿ ಹೇಳುವುದು ಮೊದಲಾದ ಅನುಭವಗಳು ಮಗುವಿಗೆ ಲಭಿಸಬೇಕಾಗಿದೆ.

ಮೂರು ವರ್ಷ ಪ್ರಾಯದವರಿಗೆ ಸರಳವಾದ ಪೂರ್ವ ಗಣಿತಾಶಯಗಳು, ಬಣ್ಣಗಳನ್ನು ಗುರುತಿಸುವುದು, ವ್ಯತ್ಯಾಸ ಕಂಡುಹಿಡಿಯುವುದು, ಚಿತ್ರಗಳನ್ನು ನೋಡಿ ವಿಷಯಗಳನ್ನು ಹೇಳುವುದು, ಒಂದೇ ರೀತಿಯವುಗಳನ್ನು ಕಂಡುಹಿಡಿಯುವುದು, ಗುಂಪಿಗೆ ಸೇರದವುಗಳನ್ನು ಕಂಡುಹಿಡಿದು ಕಾರಣವನ್ನು ಹೇಳುವುದು ಮೊದಲಾದ ಚಟುವಟಿಕೆಗಳನ್ನು ಅಳವಡಿಸಲಾಗಿದೆ.

ನಾಲ್ಕು ವರ್ಷದವರಿಗೆ ಇವುಗಳ ಉನ್ನತ ಮಟ್ಟದ ಚಟುವಟಿಕೆಗಳೊಂದಿಗೆ 1 ರಿಂದ 5 ರವರೆಗಿನ ಸಂಖ್ಯಾಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಅಳವಡಿಸಲಾಗಿದೆ. ಭಿನ್ನ ಮಟ್ಟದ ಮಕ್ಕಳಿಗಾಗಿ ವರ್ಕ್ ಶೀಟುಗಳಲ್ಲಿ ಅನುರೂಪೀಕರಣ ಮಾಡಬಹುದಾಗಿದೆ.

## 4. ಸೃಜನಾತ್ಮಕ – ಸೌಂದರ್ಯಾತ್ಮಕ ವಿಕಾಸ

ಚಿತ್ರ ರಚನೆ, ಬಣ್ಣ ಹಚ್ಚುವುದು, ನಿರ್ಮಾಣ ಎಂಬೀ ಚಟುವಟಿಕೆಗಳನ್ನು ಮುಖ್ಯವಾಗಿ ಈ ಮಂಡಲಕ್ಕೆ ಸಂಬಂಧಿಸಿ **'ಆಟದ ದೋಣಿ'**ಯಲ್ಲಿ ಅಳವಡಿಸಲಾಗಿದೆ. ಭಾಷಾಪರವಾದ ಸೃಜನಾತ್ಮಕತೆಯನ್ನೂ ಪರಿಗಣಿಸಲಾಗಿದೆ.

ಚಿತ್ರ ರಚನೆ [ಸ್ವತಂತ್ರ ಹಾಗೂ ನಿಯಂತ್ರಿತ], ಬಣ್ಣ ನೀಡುವುದು ಎಂಬಿವುಗಳ ಕುರಿತು ಮೊದಲು ಸೂಚಿಸಲಾಗಿದೆಯಲ್ಲವೇ? ವಿವಿಧ ರೀತಿಯಲ್ಲಿರುವ ನಿರ್ಮಾಣಗಳ ಸಾಧ್ಯತೆಗಳನ್ನು ಅಳವಡಿಸಲಾಗಿದೆ. ಹ್ಯೊಗೆ ಚಿತ್ರಗಳು, ಬೆರಳು ಚಿತ್ರಗಳು, ಎಲೆ ಮೃಗಶಾಲೆ ನಿರ್ಮಾಣ, ಹೂಗಳ ನಿರ್ಮಾಣ, ಬ್ಯಾಡ್ಜ್ ನಿರ್ಮಾಣ, ಬಾವುಟ ನಿರ್ಮಾಣ, ತೋರಣಗಳನ್ನು ತಯಾರಿಸುವುದು, ಕೈ ಬೆರಳುಗಳನ್ನಿಟ್ಟು ಚಿತ್ರ ರಚನೆ, ಎಲೆ ಪ್ರಿಂಟಿಂಗ್, ಹತ್ತಿ, ಪೆನ್ಸಿಲ್ ಸ್ಕ್ರೇಪ್ ಮೊದಲಾದವುಗಳನ್ನು ಅಂಟಿಸಿ ಚಿತ್ರ ರಚಿಸುವುದು ಎಂಬಿತ್ಯಾದಿ ವೈವಿಧ್ಯಮಯವಾದ ನಿರ್ಮಾಣ ಸಾಧ್ಯತೆಗಳು **'ಆಟದ ದೋಣಿ'**ಯಲ್ಲಿ ಇವೆ.

3+ ಪ್ರಾಯದವರಿಗೆ ಸರಳವಾದ ನಿರ್ಮಾಣ ರೀತಿಯನ್ನು ನೀಡಲಾಗಿದೆ. ಈ ಚಟುವಟಿಕೆಗಳನ್ನು ನೀಡುವಾಗ ಸೃಜನಾತ್ಮಕ ಹಾಗೂ ಸೌಂದರ್ಯಾತ್ಮಕ ವಿಕಾಸದೊಂದಿಗೆ ಸೂಕ್ಷ್ಮ - ಸ್ಥೂಲ ಪೇಶಿಗಳ ಬಳುಕುವಿಕೆ ಸಾಧ್ಯವಾಗುವುದಲ್ಲವೇ? ಮಾತ್ರವಲ್ಲದೇ ಸಾಮಾಜಿಕ, ಭಾವನಾತ್ಮಕ ವಿಕಾಸಕ್ಕೂ ಇವುಗಳು ಪ್ರಯೋಜನವಾಗುವವು. ಸಹಕಾರ ಮನೋಭಾವ, ನೇತೃತ್ವ ನೀಡುವ ರೀತಿಯ ಭಾಗವಹಿಸುವಿಕೆ ಮೊದಲಾದವುಗಳಿಗೆ ಅವಕಾಶ ಲಭಿಸುವಂತೆ ಗುಂಪು ಚಟುವಟಿಕೆಗಳನ್ನು ಆಯೋಜಿಸಬೇಕಾಗಿದೆ.

4+ ಪ್ರಾಯದಲ್ಲಿರುವ ಮಕ್ಕಳಿಗೆ ಒಂದಷ್ಟು ಉನ್ನತ ಮಟ್ಟದಲ್ಲಿರುವ ಚಟುವಟಿಕೆಗಳನ್ನು ಅಳವಡಿಸಲಾಗಿದೆ. ಕತ್ತರಿ ಉಪಯೋಗಿಸಿ ಕತ್ತರಿಸುವುದಕ್ಕೂ ಅಂಟಿಸುವುದಕ್ಕೂ, ಕಾಗದದಿಂದ ಹೂಗಳು, ಒರಿಗಾಮಿ ಆಕೃತಿಗಳು ಎಂಬಿತ್ಯಾದಿಗಳನ್ನು

ನಿರ್ಮಿಸುವುದಕ್ಕೂ ಅವಕಾಶ ನೀಡಲಾಗಿದೆ. ಪರಿಸರದಿಂದ ಲಭಿಸುವ ವಸ್ತುಗಳು ಮತ್ತು ಉಪಯೋಗಶೂನ್ಯ ವಸ್ತುಗಳನ್ನುಪಯೋಗಿಸಿರುವ ನಿರ್ಮಾಣ ಚಟುವಟಿಕೆಗಳನ್ನು ಮಾಡಿಸಬೇಕು. ಇದರಿಂದ ಮಗುವಿನ ಸಮಗ್ರವಾದ ವಿಕಾಸವು ಸಾಧ್ಯವಾಗುವುದು.

### 5. ಸಾಮಾಜಿಕ ಭಾವನಾತ್ಮಕ ವಿಕಾಸ

**'ಆಟದ ದೋಣಿ'**ಯಲ್ಲಿರುವ ಚಟುವಟಿಕೆಗಳಲ್ಲಿ ಹೆಚ್ಚಿನವುಗಳು ವೈಯಕ್ತಿಕವಾಗಿ ಪೂರ್ತಿಗೊಳಿಸಬೇಕಾದವುಗಳಾಗಿವೆ. ಸಾಧ್ಯವಾದ ಸಂದರ್ಭಗಳಲ್ಲಿ ಪರಸ್ಪರ ಸಹಾಯಕ್ಕಿರುವ ಸಂದರ್ಭಗಳನ್ನು ಒದಗಿಸಬಹುದಾಗಿದೆ. ಬಣ್ಣ ಹಚ್ಚುವುದಕ್ಕಿರುವ ಕ್ರಯೋನುಗಳನ್ನು ಪಡೆಯುವುದಕ್ಕೂ, ನಿರ್ಮಾಣ ಚಟುವಟಿಕೆಗಳನ್ನು ಗುಂಪಾಗಿ ಮಾಡುವುದಕ್ಕೂ ಅವಕಾಶಗಳಿರಬಹುದಲ್ಲವೇ? ಕೆಲವು ಚಟುವಟಿಕೆಗಳಲ್ಲಿ ನಿರ್ದಿಷ್ಟ ಬಣ್ಣದ ಕ್ರಯೋನುಗಳ ಅಗತ್ಯವಿರಬಹುದು. ಉದಾಹರಣೆಗೆ ಎಲೆಗಳಿಗೆ ಹಸುರು ಬಣ್ಣ ಹಚ್ಚುವುದು. ಒಬ್ಬ ಬಣ್ಣ ಹಚ್ಚಿ ಮುಗಿಯುವ ವರೆಗೆ ಸರದಿ ಕಾಯಲು ಮಗುವನ್ನು ಪ್ರೇರೇಪಿಸಲು ಅಧ್ಯಾಪಿಕೆಗೆ ಸಾಧ್ಯವಾಗಬೇಕು. ಕತ್ತರಿಯಿಂದ ಕತ್ತರಿಸುವ ಸಂದರ್ಭಗಳಲ್ಲೂ ಈ ರೀತಿ ಸರದಿ ಕಾಯಬೇಕಾಗಬಹುದು.

ಕಥೆಗಳಲ್ಲಿರುವ ಭಾವನಾತ್ಮಕ ಸಂದರ್ಭಗಳೊಂದಿಗೆ ಸ್ವಂತ ಭಾವನಾತ್ಮಕ ಸ್ಥಿತಿಯನ್ನು ಹೊಂದಿಸುವ ಮೂಲಕ ಸಾಮಾಜಿಕ ಭಾವನಾತ್ಮಕ ವಿಕಾಸವನ್ನು ಸಾಧ್ಯವಾಗಿಸಬಹುದು. ವರ್ಕ್ ಶೀಟು ಮಂಡನೆಯ ಸಂದರ್ಭಗಳಲ್ಲಿ ಆಖ್ಯಾನಗಳು, ತರಗತಿಯಲ್ಲಿ ಮಂಡಿಸುವ ಕಥೆಗಳು, ಕವಿತೆಗಳು, ಕಥಾಗೀತೆಗಳು, ಬೊಂಬೆ ನಾಟಕಗಳು, ರೋಲ್ ಪ್ಲೇ ಎಂಬಿವುಗಳನ್ನು ಸಾಮಾಜಿಕ ಭಾವನಾತ್ಮಕ ವಿಕಾಸಕ್ಕಾಗಿ ಉಪಯೋಗಿಸುವಲ್ಲಿ ಅಧ್ಯಾಪಿಕೆಯು ಯಶಸ್ವಿಯಾಗಬೇಕು.

### ಮೌಲ್ಯಮಾಪನ

ಪ್ರತಿಯೊಂದು ವಿಕಾಸ ಮಂಡಲದಲ್ಲಿಯೂ ಪ್ರತಿ ಮಗುವೂ ಯಾವ ಹಂತದಲ್ಲಿರುವುದೆಂದು ಅಧ್ಯಾಪಿಕೆಗೆ ಗುರುತಿಸಲು ಸಾಧ್ಯವಿರಬೇಕು. ಇದು ಮಗುವಿನ ವೈಯಕ್ತಿಕವಾದ ಸವಿಶೇಷತೆಗಳನ್ನು ಗುರುತಿಸಿ ಅಗತ್ಯವಿರುವ ಸಹಾಯವನ್ನು ನೀಡಲು ಅಧ್ಯಾಪಿಕೆಗೆ ಸಹಾಯ ಮಾಡಬಹುದು. ಅಲ್ಲದೇ ತನ್ನ ಯೋಜನೆಯ ಇತಿಮಿತಿಗಳನ್ನು ಗುರುತಿಸಿ ಉತ್ತಮ ಪಡಿಸುವುದಕ್ಕೂ ಮೌಲ್ಯಮಾಪನ ಚಟುವಟಿಕೆಗಳ ಮೂಲಕ ಸಾಧ್ಯವಾಗುವುದು. ರಕ್ಷಕರಿಂದ ಮಗುವಿಗೆ ಲಭಿಸಬೇಕಾದ ಸಹಾಯಗಳು ಏನೆಂಬುದನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ನಿರಂತರ ಮೌಲ್ಯಮಾಪನದಿಂದ ಲಭಿಸುವ ಮಾಹಿತಿಗಳು ಅಧ್ಯಾಪಿಕೆಗೆ ಸಹಾಯಕವಾಗುವುವು.

ವರ್ಕ್ ಶೀಟುಗಳಿಂದ ಯಾವುದನ್ನೆಲ್ಲ ಮೌಲ್ಯಮಾಪನ ಮಾಡಬೇಕೆಂದು ಕೈಪಿಡಿಯಲ್ಲಿ ಸ್ಪಷ್ಟವಾಗಿ ನೀಡಲಾಗಿದೆ. ಚಟುವಟಿಕೆಯು ನಡೆಯುವಾಗ ಅಧ್ಯಾಪಿಕೆ ನಡೆಸುವ ನಿರೀಕ್ಷಣೆಯಿಂದಲೂ ವರ್ಕ್ ಶೀಟು ಎಂಬ ಉತ್ಪನ್ನದ ಮೌಲ್ಯಮಾಪನದಿಂದಲೂ ನಿರಂತರ ಮೌಲ್ಯಮಾಪನವನ್ನು ನಡೆಸಬೇಕಾಗಿದೆ. ಹೆತ್ತವರೊಂದಿಗಿನ ಆಶಯ ವಿನಿಮಯದಿಂದಲೂ ಕೆಲವು ಮಹತ್ವದ ಮಾಹಿತಿಗಳು ಲಭಿಸಬಹುದು.

ಪ್ರತಿ ವರ್ಕ್ ಶೀಟನ್ನು ಪೂರ್ತಿಗೊಳಿಸಿ ಪ್ರದರ್ಶನದ ನಂತರ ಪ್ರತಿಯೊಂದು ಪೋರ್ಟ್ ಫೋಲಿಯೋ ಬ್ಯಾಗಿನಲ್ಲಿ ಸಂಗ್ರಹಿಸಿಡಬೇಕು. ಅವುಗಳನ್ನು ವಿಶ್ಲೇಷಿಸುವಾಗ ವಿಕಾಸ ಮಂಡಲಗಳಲ್ಲಿ ಮಗುವಿಗೆ ಉಂಟಾದ ಕ್ರಮಾನುಗತವಾದ ಬೆಳವಣಿಗೆಯು ಅಧ್ಯಾಪಿಕೆಗೂ ರಕ್ಷಕರಿಗೂ ವೇದ್ಯವಾಗಬಹುದು. ವರ್ಷಾಂತ್ಯದಲ್ಲಿ ಇವುಗಳನ್ನು ಕ್ರೋಡೀಕರಿಸಿ ನಿಖರವಾಗಿ ಮೌಲ್ಯಮಾಪನ ನಡೆಸಬಹುದಲ್ಲವೇ?

ಮಗುವಿಗೂ ರಕ್ಷಕರಿಗೂ ಅಗತ್ಯವಿರುವ ಫೀಡ್ ಬ್ಯಾಕನ್ನು ನೀಡಿ, ಉತ್ತಮಪಡಿಸಲು ಈ ಮೂಲಕ ಅಧ್ಯಾಪಿಕೆಗೆ ಸಾಧ್ಯವಾಗುವುದು.

# ಥೀಂ 1 - ಕುಟುಂಬ

ಆಟಿಕೆ ಚಟುವಟಿಕಾ ಪುಸ್ತಕದಲ್ಲಿ ಪ್ರತಿಯೊಂದು ಥೀಂಗೆ ಸಂಬಂಧಿಸಿದ ವಿಕಾಸ ಮಂಡಲಗಳನ್ನು ಪರಿಗಣಿಸಿ ನೀಡಿರುವ ಚಟುವಟಿಕೆಯ ಸಾಧ್ಯತೆಗಳ ಮಂಡನೆಯ ಕ್ರಮವನ್ನು ನಿಶ್ಚಯಿಸಿ ಸೂಕ್ತವಾದ ಸಂದರ್ಭಗಳಲ್ಲಿ ವರ್ಕ್ ಶೀಟುಗಳ ಪ್ರಯೋಜನವನ್ನು ಪಡೆಯಬೇಕು. ಆಖ್ಯಾನ, ಪದ್ಯ, ಆಟ, ನಿರ್ಮಾಣ, ಬೊಂಬೆ ನಾಟಕ ಮೊದಲಾದ ಸಂಕೇತಗಳ ಮೂಲಕ, ಮಂಡನೆಯ ಬಳಿಕ ಅಥವಾ ಮಂಡನೆಯ ಭಾಗವಾಗಿ ವರ್ಕ್ ಶೀಟುಗಳನ್ನು ಬಳಸಬೇಕು. ಆಖ್ಯಾನದ ಮಂಡನೆಯು ಭಾವನೆ, ಜಿಜ್ಞಾಸೆ ಎಂಬಿವುಗಳನ್ನು ಪ್ರಚೋದಿಸುವಂತರಬೇಕು. ಘಟನೆಯನ್ನು ಹೇಳುವುದು ಆಖ್ಯಾನವಲ್ಲ. ಆಖ್ಯಾನದಲ್ಲಿ ಪೂರ್ಣತೆ ಇರಬೇಕು. ಭಾವನೆ ಇರಬೇಕು. ಮನೋಚಿತ್ರದ ರೂಪೀಕರಣ ಸಾಧ್ಯತೆಯೂ ಇರಬೇಕು. ಕುಟುಂಬಕ್ಕೆ ಸಂಬಂಧಿಸಿದ ಚಟುವಟಿಕೆಯ ಕ್ರಮವನ್ನು ಕೆಳಗೆ ನೀಡಲಾಗಿದೆ. ಅಗತ್ಯವಿದ್ದಲ್ಲಿ ಬದಲಾವಣೆಗಳನ್ನು ಮಾಡಬಹುದಾಗಿದೆ.

## ಚಟುವಟಿಕಾ ಕ್ರಮ

1. 'ಕುಟುಂಬ'ಕ್ಕೆ ಸಂಬಂಧಿಸಿದ ಪದ್ಯಗಳು / ಕಥೆಗಳನ್ನು ಆಲಿಸುವುದು. ಹಾಡುವುದು / ಹೇಳುವುದು.

2. 'ಕುಟುಂಬ'ಕ್ಕೆ ಸಂಬಂಧಿಸಿದ ಚಿತ್ರವನ್ನು ವಿವರಿಸುವುದು.

3. ವರ್ಕ್ ಶೀಟು 1.1 'ನಿಮ್ಮ ಮನೆಯಲ್ಲಿ ಯಾರು ಯಾರು?' - ನೀಡುವುದು.

4. ಕಥೆಯ ಘಟನೆಗಳನ್ನು ಅಭಿನಯಿಸುವುದು.

5. 'ಕುಟುಂಬ'ಕ್ಕೆ ಸಂಬಂಧಿಸಿದ ಪದ್ಯವನ್ನು ಹಾಡುವುದು. (ಸ್ವಂತ ಹೆಸರು ಹೇಳುವುದು, ತಾಯಿಯ ಹೆಸರು ಹೇಳುವುದು.)

6. ಪ್ರಾಣಿಗಳಿಗೆ ಸಂಬಂಧಿಸಿದ ಪದ್ಯಗಳನ್ನು ಹಾಡುವುದು.

7. ಆಖ್ಯಾನ ಮಂಡನೆ - ವರ್ಕ್ ಶೀಟು 1.2 'ತಾಯಿಯ ಬಳಿ ತಲುಪಿಸಬಹುದೇ?' - ನೀಡುವುದು.

8. ಹೆಸರು ಹೇಳುವ ಆಟ, ತಂದೆ ತಾಯಂದಿರು, ಅಣ್ಣ, ಅಕ್ಕಂದಿರ ಹೆಸರು ಹೇಳುವುದು.

9. ಆಖ್ಯಾನ ಮಂಡನೆ - ವರ್ಕ್ ಶೀಟು 1.3 'ವ್ಯತ್ಯಾಸ ಹುಡುಕುವ ಹೇಳುವ' - ನೀಡುವುದು.

10. ಕುಟುಂಬಕ್ಕೆ ಸಂಬಂಧಿಸಿದ ಪದ್ಯ ಹಾಡುವುದು.

11. ದೊಡ್ಡ ಕುಟುಂಬ, ಚಿಕ್ಕ ಕುಟುಂಬ – ಹೇಳುವುದು.

12. ಆಖ್ಯಾನ ಮಂಡನೆ - ವರ್ಕ್ ಶೀಟು 1.4 'ನನ್ನ ಮನೆಯಲ್ಲಿರುವವರು' - ನೀಡುವುದು.

13. ಕುಟುಂಬಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಅಂಟಿಸುವುದು.

14. ಓಡಿ ಓಡಿ ಆಟ - ವರ್ಕ್ ಶೀಟು 1.5 'ದೊಡ್ಡ ಕುಟುಂಬ' - ನೀಡುವುದು.

15. ರೋಲ್ ಪ್ಲೇ - ಆಡುಗೆಯಾಟ

## ವರ್ಕ್ ಶೀಟು 1.1 – 'ನಿಮ್ಮ ಮನೆಯಲ್ಲಿ ಯಾರು ಯಾರು?'

**ವಿಕಾಸ ಮಂಡಲ** : * ದೈಹಿಕ ಚಲನಾತ್ಮಕ ವಿಕಾಸ
* ಭಾಷಾ ವಿಕಾಸ

**ಸಾಮರ್ಥ್ಯಗಳು** : 1. ಸ್ವಂತವಾಗಿ ಚಿತ್ರ ರಚಿಸಿ ಬಣ್ಣ ಹಚ್ಚಲು ಸಾಧ್ಯವಾಗುವುದು. [5]
2. ಚಿತ್ರಗಳನ್ನು ನಿರೀಕ್ಷಣೆ ಮಾಡಿ ವಿವರಣೆಗಳನ್ನು ಮತ್ತು ಕಂಡುಕೊಂಡ ಅಂಶಗಳನ್ನು ಮಂಡಿಸಲು ಸಾಧ್ಯವಾಗುವುದು.[21]

**ಆಶಯ** : ತಂದೆ, ತಾಯಿ ಮಕ್ಕಳು ಸೇರಿರುವುದೇ ಕುಟುಂಬವಾಗಿದೆ. (ಪೂರ್ವಜ್ಞಾನದ ಪುನರನುಭವ)

**ಸಾಮಗ್ರಿಗಳು** : ಪದ್ಯಗಳು, ಕಥೆಗಳು, ಕಟೌಟುಗಳು, ಬಿಗ್ ಸ್ಕ್ರೀನ್, ವರ್ಕ್ ಶೀಟು, ಕ್ರಯೋನ್ಸ್, ಬಣ್ಣಗಳು.

**ಸಂದರ್ಭ** : ಕುಟುಂಬಕ್ಕೆ ಸಂಬಂಧಿಸಿದ ಪದ್ಯಗಳು, ಕಥೆಗಳನ್ನು ಆಲಿಸುವುದು, ಹೇಳುವುದು, ಮಗುವಿನ ಕುಟುಂಬದ ಕುರಿತಾದ ಸೌಹಾರ್ದ ಸಂಭಾಷಣೆ ಮೊದಲಾದುವುಗಳನ್ನು ಪ್ರವೇಶ ಚಟುವಟಿಕೆಯಾಗಿ ಉಪಯೋಗಿಸಬಹುದು.

**ಪ್ರಕ್ರಿಯೆ** :

**ಆಖ್ಯಾನ** : ಕೊಕ್ಕರೆ ಕೋ.. ಕೋ.. ಕೊಕ್ಕರೆ ಕೋ.. ಕೋ.. ಬೆಳಗಾಯಿತು. ಒಳ್ಳೆಯ ಚಳಿ! ಅಚ್ಚು ಹೊದಿಕೆ ಹೊದ್ದು ಮತ್ತೆ ಮುದುಡಿ ಮಲಗಿದನು. "ನನ್ನ ಕೆನ್ನೆಯನ್ನು ಯಾರೋ ಮುಟ್ಟಿದರಲ್ಲಾ. ಯಾರಾಗಿರಬಹುದು?" (ಸ್ವತಂತ್ರ ಪ್ರತಿಕ್ರಿಯೆ) ಅಜ್ಜಿಯ ಸ್ಪರ್ಶ.. ಅಚ್ಚು ಮೆಲ್ಲನೆ ಕಣ್ಣು ತೆರೆದು ನೋಡಿದನು.

"ಅಚ್ಚೂ.. ಎದ್ದೇಳು..." ಅಜ್ಜಿ ಅಚ್ಚುವಿನ ಕೆನ್ನೆಗೆ ಮುತ್ತು ಕೊಟ್ಟಳು. ಅವನನ್ನು ಮಂಚದಿಂದ ಕೆಳಗಿಳಿಸಿದಳು. "ಪೀ.. ಪೀ.. ಪೀ.." ಎಂದು ಶಬ್ದ ಮಾಡುತ್ತಾ ಅಚ್ಚು ಹೊರಗೆ ಓಡಿದನು.

"ಅಜ್ಜಾ.. ನಾನೂ ನೀರೆರೆಯಲೇ?" ಅಚ್ಚು ಅಜ್ಜನಿಗೆ ಸಹಾಯ ಮಾಡಿದನು. ಗಿಡಗಳಿಗೆ ನೀರೆರೆಯಲು ಅವನಿಗೆ ತುಂಬಾ ಇಷ್ಟ. "ಅಚ್ಚೂ.. ಅಚ್ಚೂ" ಕರೆ ಕೇಳಿದೊಡನೆ ಅವನು ಅಕ್ಕನ ಹತ್ತಿರಕ್ಕೆ ಓಡಿದನು. ಅಕ್ಕ ಮತ್ತು ಅಚ್ಚು ಚೆಂಡುಪೇಳು ಗಾಡಿ ಉರುಳಿಸಿ ಆಡಿದರು. ನನಗೆ ಹಸಿವಾಗ್ತಿದೆ. ಅಕ್ಕಾ.. ನಾವು ಆಟ ನಿಲ್ಲಿಸುವ.. ಅಮ್ಮ ದೋಸೆ ಮಾಡುತ್ತಿದ್ದಾರೆ. ಒಳ್ಳೆಯ ಪರಿಮಳ! ಇಬ್ಬರೂ ಹಲ್ಲುಜ್ಜಿದರು. ಅವಳು ಅಡುಗೆ ಕೋಣೆಗೆ ಹೋದಳು. ಅಮ್ಮ ದೋಸೆ ಮಾಡುತ್ತಿದ್ದಾಳೆ. ಹಿಟ್ಟನ್ನು ಕಾವಲಿಯಲ್ಲಿ ಎರೆದು ಹರವಿದಳು. ಮಗುಚಿ ಹಾಕಿದಳು. ಸಟ್ಟುಗದಿಂದ ತೆಗೆದು ಪಾತ್ರೆಗೆ ಹಾಕಿದಳು. (ಇದನ್ನು ಅಭಿನಯಿಸಬೇಕು) ದೋಸೆ ಹಿಟ್ಟು ಎರೆಯುವಾಗ ಶೂ.. ಎಂಬ ಶಬ್ದ ಮಾಡಬೇಕು. ಮನೆಯವರೆಲ್ಲರೂ ಒಟ್ಟಿಗೆ ಕುಳಿತು ಆಹಾರ ಸೇವಿಸಿದರು.

**ಬಿಗ್ ಸ್ಕ್ರೀನ್ ಉಪಯೋಗಿಸಿ ಚಟುವಟಿಕೆಗಳು**

: ಅಚ್ಚು ಮತ್ತು ಅಜ್ಜನ ಕಟೌಟುಗಳನ್ನು ಅಧ್ಯಾಪಿಕೆ ಸ್ಕ್ರೀನಿನಲ್ಲಿ ಇಡುವುದು.

- ಮನೆಯಲ್ಲಿ ಬೇರೆ ಯಾರೆಲ್ಲ ಇದ್ದಾರೆ? ಮಕ್ಕಳು ಹೇಳುವುದಕ್ಕನುಸರಿಸಿ ಕಟೌಟುಗಳನ್ನು ಲಗತ್ತಿಸುವುದು.
- ಇನ್ನು ಯಾರಾದರೂ ಇರಬಹುದೇ? ನೋಡೋಣ.

ವರ್ಕ್ ಶೀಟು 1.1 – 'ನಿಮ್ಮ ಮನೆಯಲ್ಲಿ ಯಾರು ಯಾರು?' - ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಯಾರು ಯಾರು?
- ನಿಮ್ಮ ಮನೆಯಲ್ಲಿ ಯಾರೆಲ್ಲ ಇದ್ದಾರೆ?
- ಅವರ ಹೆಸರುಗಳನ್ನು ಹೇಳಬಹುದೇ?
- ಅಚ್ಚುವಿನ ಮನೆಗೆ ಬಣ್ಣ ಹಚ್ಚುವ
- ನಂತರ ಸ್ವಂತ ಮನೆಯ ಚಿತ್ರ (10) ಬಿಡಿಸಿ ಬಣ್ಣ ಹಚ್ಚುವ

ಚಟುವಟಿಕೆ ನೀಡಬೇಕು.

**ಮೌಲ್ಯಮಾಪನ** : ಕುಟುಂಬದ ಸದಸ್ಯರನ್ನು ಗುರುತಿಸಿ ಹೇಳಲು ಸಾಧ್ಯವಾಗುವುದು.

: ವಿಭಿನ್ನ ಬಣ್ಣಗಳ ಪ್ರಯೋಜನವನ್ನು ಪಡೆಯಲಾಗಿದೆ.

: ಬಣ್ಣ ಹಚ್ಚುವುದರಲ್ಲಿ ಸೂಕ್ಷ್ಮತೆಯನ್ನು ಪಾಲಿಸಲಾಗಿದೆ.

: ಕುಟುಂಬದ ಸದಸ್ಯರ ಕುರಿತು ಹೆಚ್ಚಿನ ವಿವರಗಳನ್ನು ಹೇಳಲು ಸಾಧ್ಯವಾಗುವುದು. (ಹೆಸರು, ಸಂಬಂಧಗಳು)

## ವರ್ಕ್ ಶೀಟ್ 1.2 - ತಾಯಿಯ ಬಳಿ ತಲುಪಿಸಬಹುದೇ?

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

- ಸೃಜನಾತ್ಮಕ ವಿಕಾಸ

**ಸಾಮರ್ಥ್ಯ** : ಆಲಿಸಿದ ಹಾಡುಗಳನ್ನು ತಾಳಾತ್ಮಕವಾಗಿ ಹಾಡಲು ಸಾಧ್ಯವಾಗುವುದು. (64)

- ಹೊಸ ಸಾಲುಗಳನ್ನು ಸೇರಿಸಿ ಹಾಡಲು ಸಾಧ್ಯವಾಗುವುದು.(65)
- ಕಂಡುಕೊಳ್ಳುವ ಚಟುವಟಿಕೆಗಳಲ್ಲಿ ತೊಡಗುವುದಕ್ಕೂ ಅನುಭವದ ಆಧಾರದಲ್ಲಿ ನಿಗಮನಗಳನ್ನು ಮಂಡಿಸುವುದಕ್ಕೂ ಸಾಧ್ಯವಾಗುವುದು(31)

**ಆಶಯ** : ಕುಟುಂಬದಲ್ಲಿ ಪ್ರತಿಯೊಬ್ಬರೂ ಪರಸ್ಪರ ಸಹಕಾರ, ಪ್ರೀತಿ, ಆದರಗಳಿಂದ ವರ್ತಿಸುವರು.

**ಸಾಮಗ್ರಿಗಳು** : ವರ್ಕ್ ಶೀಟ್,ಕ್ರಯೋನ್ಸ್, ಪದ್ಯಗಳು

**ಸಂದರ್ಭ** : ಕುಟುಂಬಕ್ಕೆ ಸಂಬಂಧಿಸಿದ ಸರಳ ಚರ್ಚೆಯ ಬಳಿಕ ಮಂಡಿಸುವುದು.

**ಪ್ರಕ್ರಿಯೆ** :

**ಸೌಹಾರ್ದ ಸಂಭಾಷಣೆ** **:** ನಿಮ್ಮ ಮನೆಯಲ್ಲಿ ಪ್ರಾಣಿಗಳನ್ನು ಸಾಕುತ್ತಾರೆಯೇ?

(ಸ್ವತಂತ್ರ ಪ್ರತಿಕ್ರಿಯೆ)

- ಅಚ್ಚುವಿನ ಮನೆಯಲ್ಲಿ ಪ್ರಾಣಿಗಳನ್ನು ಸಾಕುತ್ತಿರಬಹುದೇ?
- ಅಚ್ಚುವಿನ ಮನೆಯಲ್ಲಿ ಯಾವೆಲ್ಲ ಪ್ರಾಣಿಗಳನ್ನು ಸಾಕುತ್ತಿರಬಹುದು?

**ಪದ್ಯ** **:** "ನಾವು ಒಂದು ಪದ್ಯವನ್ನು ಹಾಡೋಣವೇ?" ಅಧ್ಯಾಪಿಕೆ ಮತ್ತು ಮಕ್ಕಳು ಒಟ್ಟಾಗಿ ಹಾಡುವರು.

ಮನೆಯಲೊಂದು ನಾಯಿ
ಮೀಸೆಗಾರ ನಾಯಿ
ಅಲ್ಲಿ ಹೋದರೂ ಬೌ..
ಇಲ್ಲಿ ಹೋದರೂ ಬೌ..
ಎಲ್ಲೆಲ್ಲಿ ಹೋದರೂ ಬೌ.. ಬೌ.. ಬೌ..
ಮನೆಯಲೊಂದು ಬೆಕ್ಕು
ಕಪ್ಪು ಬಿಳುಪು ಬೆಕ್ಕು
ಅಲ್ಲಿ ಹೋದರೂ ಮ್ಯಾವ್
ಇಲ್ಲಿ ಹೋದರೂ ಮ್ಯಾವ್
ಎಲ್ಲೆಲ್ಲಿ ಹೋದರೂ ಮ್ಯಾವ್.. ಮ್ಯಾವ್.. ಮ್ಯಾವ್
ಮನೆಯಲೊಂದು ಕೋಳಿ
.....................................
.....................................

ಸಾಲುಗಳನ್ನು ಸೇರಿಸಿ ಹಾಡುವುದು.

**ಆಖ್ಯಾನ** : ಚಾ ಕುಡಿದು ಅಚ್ಚು ಮತ್ತು ಅಕ್ಕ ಆಡುತ್ತಿದ್ದರು. ಅವರೊಂದಿಗೆ ಆಡಲು ಬೇರೆಯೂ ಕೆಲವರಿದ್ದರು. ಯಾರೆಂದು ಹೇಳಬಹುದೇ? (ಸ್ವತಂತ್ರ ಪ್ರತಿಕ್ರಿಯೆ)

: ಬೆಕ್ಕಿನ ಮರಿ, ಕೋಳಿ ಮರಿ, ನಾಯಿ ಮರಿ... ಆಡುತ್ತಾ ಇರುವಾಗ ಒಂದು ಶಬ್ದ.. ಧುಂ.. ಧುಧುಂ.. ಮಕ್ಕಳು ಹೆದರಿ ಚೀರಿದರು. (ಶಬ್ದಾನುಕರಣೆ - ಬೆಕ್ಕಿನ ಮರಿ, ನಾಯಿಮರಿ, ಕೋಳಿಮರಿ ಕೂಗುವುದು.) "ಸಿಡಿಲಿನ ಶಬ್ದವಾ.. ಮಕ್ಕಳೇ ಬೇಗ ಬನ್ನಿ.." ಮಳೆ

ಸುರಿಯಲು ತೊಡಗಿತು.

: ಅಚ್ಚು ಮತ್ತು ಅಕ್ಕು ಮನೆಯ ಒಳಗೆ ಓಡಿದರು. ತಾಯಿ ನಾಯಿ ಮರಿಗಳೊಂದಿಗೆ ಓಡಿತು. ತಾಯಿ ಬೆಕ್ಕು ಮಕ್ಕಳನ್ನು ಕಚ್ಚಿಕೊಂಡು ಮನೆಯೊಳಗೆ ಓಡಿತು. ಅಯ್ಯೋ, ಆ ತಾಯಿ ಕೋಳಿ ಮಾತ್ರ ಮಳೆಯಲ್ಲೇ ಕುಳಿತುಕೊಂಡಿದೆ. ಮರಿಗಳನ್ನು ಕಾಣುವುದಿಲ್ಲವಲ್ಲ. ಎಲ್ಲಿ ಹೋದುವು? ಅಚ್ಚು ಮತ್ತು ಅಕ್ಕು ನೋಡಿದರು. ಕಾಣಿಸುವುದಿಲ್ಲ. ಮಳೆ ಹೋಯಿತು. ಕೋಳಿ ಮರಿಗಳು ತಾಯಿಯ ರೆಕ್ಕೆಯ ಅಡಿಯಲ್ಲಿ ಕುಳಿತಿದ್ದುವು. ಅವುಗಳು ಮೆಲ್ಲನೆ ಇಣುಕಿ ನೋಡಿದುವು. ಮಕ್ಕಳು ಮತ್ತೆ ಆಟ ಪ್ರಾರಂಭಿಸಿದರು. ಆಗ ಪುನಃ ಢುಂ.. ಢುಢುಂ.. ಢುಂ.. ಮಕ್ಕಳು ತಾಯಂದಿರ ಬಳಿಗೆ ಓಡಿದರು.

ವರ್ಕ್ ಶೀಟು 1.2 – 'ತಾಯಿಯ ಬಳಿ ತಲುಪಿಸಬಹುದೇ?' - ನೀಡುವುದು.

: ಮಕ್ಕಳನ್ನು ಅವರ ಅಮ್ಮಂದಿರ ಬಳಿಗೆ ತಲುಪಿಸಿರಿ.

- ಗೆರೆ ಎಳೆದು ಜೋಡಿಸುವುದು.
- ಬಣ್ಣ ಹಚ್ಚುವುದು.
- ಪರಸ್ಪರ ಮೌಲ್ಯಮಾಪನ ಮಾಡುವುದು.

**ಪದ್ಯ** : ಅಚ್ಚುವಿನ ಮನೆಯ ಕುರಿತಾದ ಸಾಲುಗಳನ್ನು ಸೇರಿಸಿ ಹಾಡುವುದು.

ಅಚ್ಚುವಿನ ಮನೆ
ಅಂದವಾದ ಮನೆ
ಅಮ್ಮ ಇರುವ ಮನೆ
.........................
.........................

ವೈಯಕ್ತಿಕವಾಗಿ ಸ್ವಂತ ಹೆಸರನ್ನು ಸೇರಿಸಿ ಹಾಡುವುದು.

ಮನೆ ಒಳ್ಳೆಯ ಮನೆ
ಅಂದ ಚಂದದ ಮನೆ
..................................
..................................

**ಆಖ್ಯಾನ** : ಇಬ್ಬರೂ ಮಳೆಯಲ್ಲಿ ನೆನೆದು ಬಂದಿದ್ದೀರಲ್ಲವೇ ? ಜ್ವರ ಬರಬಹುದು. ಬನ್ನಿ ಮಕ್ಕಳೇ... ಅಮ್ಮ ಅವರ ತಲೆ ಒರೆಸಿದಳು. ಶರೀರ ತಣ್ಣಗಾಗಿದೆ. ಅಮ್ಮ ಪ್ರೀತಿಯಿಂದ ಅವರನ್ನು ಸೇರಿಸಿ ಹಿಡಿದಳು. ತಾಯಂದಿರ ಪ್ರೀತಿಯ ಕುರಿತು ಚರ್ಚೆ. ತಾಯಂದಿರಲ್ಲಿ ಮಕ್ಕಳಿಗಿರುವ ಪ್ರೀತಿಯನ್ನು ಚರ್ಚಿಸಬೇಕು.

**ಮೌಲ್ಯಮಾಪನ** : ಸರಿಯಾದವುಗಳನ್ನು ಪರಸ್ಪರ ಗೆರೆ ಎಳೆದು ಜೋಡಿಸಲಾಗಿದೆ.

- ಮಕ್ಕಳ ಮಟ್ಟದಲ್ಲಿ ನಿಗಮನಗಳನ್ನು ಹೇಳಲು ಸಾಧ್ಯವಾಗುವುದು.
- ಆಕರ್ಷಕವಾದ ರೀತಿಯಲ್ಲಿ ಬಣ್ಣ ಹಚ್ಚಲಾಗಿದೆ.

## ವರ್ಕ್ ಶೀಟ್ 1.3 – ವ್ಯತ್ಯಾಸ ಕಂಡುಹಿಡಿಯುವ, ಹೇಳುವ

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

- ಭಾಷಾ ವಿಕಾಸ

**ಸಾಮರ್ಥ್ಯ** : ಚಿತ್ರಗಳನ್ನು ನಿರೀಕ್ಷಣೆ ಮಾಡಿ ಪ್ರತ್ಯೇಕತೆಗಳನ್ನು ಕಂಡುಕೊಳ್ಳುವುದಕ್ಕೂ ಮೌಖಿಕವಾಗಿ ಮಂಡಿಸುವುದಕ್ಕೂ ಸಾಧ್ಯವಾಗುವುದು.(30)

- ಚಿತ್ರಗಳನ್ನು ನಿರೀಕ್ಷಣೆ ಮಾಡಿ ವಿವರಗಳನ್ನು ಹಾಗೂ ಕಂಡುಕೊಂಡ ಅಂಶಗಳನ್ನು ಮಂಡಿಸುವುದಕ್ಕೂ ಸಾಧ್ಯವಾಗುವುದು.(21)

**ಆಶಯ** : ಮನೆಯ ಪ್ರತಿಯೊಬ್ಬ ಸದಸ್ಯನಿಗೂ ತನ್ನದೇ ಆದ ಜವಾಬ್ದಾರಿ ಹಾಗೂ ಕರ್ತವ್ಯಗಳು ಇವೆ.

**ಸಾಮಗ್ರಿಗಳು** : ವರ್ಕ್ ಶೀಟ್, ಕ್ರಯೋನ್ಸ್, ಪದ್ಯಗಳು, ಸೀಟಿ, ಬೆಂಚು.

**ಸಂದರ್ಭ** : ಮನೆಕೆಲಸಗಳಲ್ಲಿ ಮಕ್ಕಳು ಸಹಾಯ ಮಾಡುವ ಸಂದರ್ಭಗಳ

ಕುರಿತು ಚರ್ಚಿಸಿದ ಬಳಿಕ ಮಂಡಿಸಬಹುದು.

**ಪ್ರಕ್ರಿಯೆ** :

**ಹೆಸರು ಹೇಳುವ ಆಟ :** ಮಕ್ಕಳು ವೃತ್ತಾಕಾರದಲ್ಲಿ ನಿಲ್ಲುವುದು. ಅಧ್ಯಾಪಿಕೆ ಸೀಟಿ ಊದಿದಾಗ ಚೆಂಡು ಕೈ ಬದಲಾಯಿಸುವುದು. ಮತ್ತೆ ಸೀಟಿ ಊದುವಾಗ ಚೆಂಡು ಯಾರ ಕೈಯಲ್ಲಿ ಇದೆಯೋ, ಅವರು ತನ್ನ ಹೆಸರು ಮತ್ತು ತಾಯಿಯ ಹೆಸರನ್ನು ಹೇಳುವುದು.

**ಪದ್ಯ** : ಆಟದ ನಂತರ ಅಮ್ಮನ ಕುರಿತು ಒಂದು ಪದ್ಯ

ಅಮ್ಮ ನನ್ನ ಅಮ್ಮ
ಮನೆಯಲಿರುವ ಅಮ್ಮ
ಅಮ್ಮ ಪ್ರೀತಿಯ ಅಮ್ಮ
ಮುತ್ತು ಕೊಡುವಳು ಅಮ್ಮ

**ಸ್ವತಂತ್ರ ಸಂಭಾಷಣೆ :** "ನಿಮ್ಮನ್ನು ಇವತ್ತು ಸ್ನಾನ ಮಾಡಿಸಿದ್ದು ಯಾರು? ಬೊಟ್ಟು ಇಟ್ಟದ್ದು? ಉಡುಪು ಹಾಕಿ ಕೊಟ್ಟದ್ದು ಯಾರು?" (ಸ್ವತಂತ್ರ ಪ್ರತಿಕ್ರಿಯೆ)

- ಅಚ್ಚುವಿನ ಮನೆಯಲ್ಲಿ?

**ವರ್ಕ್ ಶೀಟ್ 1.3 – ವ್ಯತ್ಯಾಸ ಕಂಡುಹಿಡಿಯುವ, ಹೇಳುವ – ನೀಡುವುದು.**

**ಚಿತ್ರ ಓದು** **: ಹೋಲಿಸುವುದು -** ಎಡದಲ್ಲಿಯೂ ಬಲದಲ್ಲಿಯೂ ಇರುವ ಚಿತ್ರಗಳನ್ನು ನೋಡಿರಿ. ನನಗೆ ಒಂದು ಸಂಶಯ. ಎರಡೂ ಒಂದೇ ರೀತಿಯಲ್ಲಿ ಇವೆಯೇ? ಯಾರು ಮೊದಲು ಕಂಡುಹಿಡಿಯುವುದು?

ಮಕ್ಕಳು ಚಿತ್ರವನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡುವರು.

ಅಗತ್ಯವಿದ್ದಲ್ಲಿ ಸೂಚನೆಗಳನ್ನು ನೀಡಬಹುದು.

ಒಂದನೇ ಚಿತ್ರದಲ್ಲಿರುವ ಯಾರೋ ಒಬ್ಬರು ಎರಡನೇ ಚಿತ್ರದಲ್ಲಿ ಇಲ್ಲ.

- ಕಿಟಿಕಿ ಹಾಗೂ ಬಾಗಿಲುಗಳನ್ನು ನೋಡಿ ಗಿಳಿ ಹಾರಿ ಬಂತು. ಹಾರಿ ಹೋಯಿತು.

- ಒಂದನೇ ಚಿತ್ರದಿಂದ ಯಾವುದೆಲ್ಲ ಮಾಯವಾಗಿದೆ?

ಈ ರೀತಿಯಲ್ಲಿ ಕೇಳಬಹುದು.

**ಚರ್ಚೆ** **:** ನಂತರ ಚಿತ್ರದ ಆಧಾರದಲ್ಲಿ ಚರ್ಚೆ.

**ಮೈಮಿಂಗ್** **:** ಮನೆಕೆಲಸಗಳು - ಮಕ್ಕಳು ಒಬ್ಬೊಬ್ಬರಾಗಿ ಬಂದು ಮೈಮ್ ಮಾಡುವುದು.

**ಮೌಲ್ಯಮಾಪನ** : ಚಿತ್ರ ನೋಡಿ ತಿಳಿಯಲಿರುವ ಸಾಮರ್ಥ್ಯ.

- ನಿರೀಕ್ಷಣೆಯಲ್ಲಿ ಕಂಡುಕೊಂಡವುಗಳನ್ನು ಮಂಡಿಸುವುದರ ಹಿರಿಮೆ.
- ನಾಲ್ಕು ವ್ಯತ್ಯಾಸಗಳನ್ನು ಕಂಡುಹಿಡಿಯಲಾಗಿದೆ.
- ಅಭಿನಯ ಸಾಮರ್ಥ್ಯ.

## ವರ್ಕ್ ಶೀಟ್ 1.4 – ನನ್ನ ಮನೆಯಲ್ಲಿರುವವರು

**ವಿಕಾಸ ಮಂಡಲ** : ದೈಹಿಕ ಚಲನಾತ್ಮಕ ವಿಕಾಸ

- ಸೃಜನಾತ್ಮಕ ವಿಕಾಸ

**ಸಾಮರ್ಥ್ಯ** : ಸ್ವಂತವಾಗಿ ಚಿತ್ರಗಳನ್ನು ರಚಿಸಿ ಬಣ್ಣ ಹಚ್ಚಲು ಸಾಧ್ಯವಾಗುವುದು. (5)

**ಆಶಯ** : ಕುಟುಂಬದಲ್ಲಿ ಪ್ರತಿಯೊಬ್ಬರೂ ಪರಸ್ಪರ ಸಹಕಾರ, ಪ್ರೀತಿ, ಆದರದೊಂದಿಗೆ ವರ್ತಿಸುವರು.

**ಸಾಮಗ್ರಿಗಳು** : ವರ್ಕ್ ಶೀಟ್, ಚಿತ್ರಗಳು, ಬಣ್ಣಗಳು, ಬಿಗ್ ಸ್ಕ್ರೀನ್.

**ಸಂದರ್ಭ** : ಕುಟುಂಬದ ಸದಸ್ಯರಿಗೆ ಸಂಬಂಧಿಸಿದ ಕಥೆಗಳನ್ನು ಆಲಿಸುವುದು. (ಹಿರಿಯರನ್ನು ಗೌರವಿಸುವ ಆಶಯವಿರುವುದು.) ಎಂಬ ಚಟುವಟಿಕೆಯ ನಂತರ.

**ಪ್ರಕ್ರಿಯೆ** :

**ಆಖ್ಯಾನ** : ರಾತ್ರೆ ಅಪ್ಪ ಬರುವಾಗ ಒಂದು ಬಹುಮಾನವನ್ನು ತಂದಿದ್ದರು. ಬಹುಮಾನ ಏನಾಗಿರಬಹುದು ? (ಸ್ವತಂತ್ರ ಪ್ರತಿಕ್ರಿಯೆ)

ಅಪ್ಪಾ.. ಅಪ್ಪಾ.. ಲಕೋಟೆಯೊಳಗೆ ಏನಪ್ಪಾ? ಅಪ್ಪ ಲಕೋಟೆಯನ್ನು ಅಚ್ಚುವಿನ ಕೈಯಲ್ಲಿ ಕೊಟ್ಟರು. ಅಚ್ಚು ಲಕೋಟೆಯನ್ನು ತೆರೆದು ನೋಡಿದನು. "ಹಾಯ್, ಪೆನ್ಸಿಲು" ಅಚ್ಚು ಕುಣಿದಾಡಿದನು. ಕೂಡಲೇ ಕೋಣೆಯೊಳಗೆ ಓಡಿದನು. ಪುಸ್ತಕ ತೆಗೆದನು. ಏನು ಮಾಡುವುದು? ಒಂದು ಚಿತ್ರ ಬಿಡಿಸುವುದೇ? ಅಚ್ಚು ಯೋಚಿಸಿದನು. ಯಾವುದರ ಚಿತ್ರ? ಹೇಗೆ ಬಿಡಿಸುವುದು? ಅಚ್ಚುವಿಗೆ ಬೇಸರವಾಯಿತು. "ಏಯ್, ಗೆಳೆಯ ಬೇಸರದಲ್ಲಿರುವೆಯಾ? ಯಾಕೆ?" "ನನಗೆ ಅಮ್ಮನ ಚಿತ್ರ ಬಿಡಿಸಬೇಕು." "ನಾನು ಸಹಾಯ ಮಾಡುತ್ತೇನೆ." ಪೆನ್ಸಿಲು ಹೇಳಿತು. ಪೆನ್ಸಿಲು ಒಂದು ದೊಡ್ಡ ವೃತ್ತವನ್ನು ರಚಿಸಿತು. ಎರಡು ಕಣ್ಣುಗಳು, ಮೂಗು, ಬಾಯಿ..ಆಹಾ... ಅಮ್ಮನ ಚಿತ್ರ... "ನನಗೂ ಚಿತ್ರ ಬಿಡಿಸಬೇಕು. ಇದರಂತೆ ವೃತ್ತ ಬಿಡಿಸಿ ನಾನು ಚಿತ್ರ ಮಾಡುತ್ತೇನೆ." ಅಚ್ಚು ಹೇಳಿದನು. ಹಾಗಾದರೆ ಚಿತ್ರ ಬಿಡಿಸು.

- ನಿಮಗೂ ಅಮ್ಮನ ಚಿತ್ರ ಬಿಡಿಸಬೇಡವೇ? ಬಿಡಿಸೋಣವೇ?

ವರ್ಕ್ ಶೀಟ್ 1.4 – ನನ್ನ ಮನೆಯಲ್ಲಿರುವವರು - ನೀಡುವುದು.

: ಅಗತ್ಯವಿರುವ ಸೂಚನೆಗಳನ್ನು ಅಧ್ಯಾಪಿಕೆ ನೀಡುವರು.

ಪ್ರತಿಯೊಬ್ಬರೂ ಅವರವರ ಮನೆಯ ಸದಸ್ಯರ ಚಿತ್ರವನ್ನು ಬಿಡಿಸುವುದು.

- ಬಣ್ಣ ಹಚ್ಚುವುದು.
- ಬಿಡಿಸಿದ ಚಿತ್ರವನ್ನು ಪ್ರದರ್ಶಿಸಿ ಮಾತನಾಡುವುದು.
- ಎಲ್ಲರೂ ಪ್ರದರ್ಶಿಸುವುದು.
- ಸ್ವತಹ / ಪರಸ್ಪರ ಮೌಲ್ಯಮಾಪನ ಮಾಡಿ ಅಭಿಪ್ರಾಯಗಳನ್ನು ಹೇಳುವುದು.

: ಚಿಕ್ಕ ಕುಟುಂಬ ದೊಡ್ಡ ಕುಟುಂಬ

- ಮಕ್ಕಳು ರಚಿಸಿದ ಕುಟುಂಬ ಚಿತ್ರಗಳನ್ನು ಗುಂಪಿನಲ್ಲಿ ಪ್ರದರ್ಶಿಸುವುದು. ಅಧ್ಯಾಪಿಕೆ ಪ್ರಶ್ನೆಗಳನ್ನು ಕೇಳುವುದು.
- ಹೆಚ್ಚು ಮಂದಿ ಇರುವುದು ಯಾರ ಮನೆಯಲ್ಲಿ?
- ದೊಡ್ಡ ಕುಟುಂಬ, ಚಿಕ್ಕ ಕುಟುಂಬ – ಗುಂಪಿನಲ್ಲಿ ಕಂಡುಕೊಳ್ಳುವುದು.
- ದೊಡ್ಡ ಕುಟುಂಬ – ಚಿಕ್ಕ ಕುಟುಂಬಗಳನ್ನು ಎಲ್ಲಾ ಗುಂಪಿನವರು ಬಿಗ್ ಸ್ಕ್ರೀನಿನಲ್ಲಿ ಪ್ರದರ್ಶಿಸುವುದು.
- ಕುಟುಂಬಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಅಂಟಿಸುವುದು.

**ಮೌಲ್ಯಮಾಪನ** : ಚಿತ್ರ ರಚಿಸಲು ಸಾಧ್ಯವಾಗುವುದು.

- ಪ್ರಕೃತಿಯ ವಸ್ತುಗಳನ್ನುಪಯೋಗಿಸಿ ಬಣ್ಣ ಹಚ್ಚುವುದು.
- ರಚಿಸಿದ ಚಿತ್ರಗಳ ಕುರಿತು ಸಂಕೋಚವಿಲ್ಲದೆ ಮಾತನಾಡಲು ಸಾಧ್ಯವಾಗುವುದು.

## ವರ್ಕ್ ಶೀಟ್ 1.5 – ದೊಡ್ಡ ಕುಟುಂಬ

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ವಸ್ತುಗಳನ್ನು / ಚಿತ್ರಗಳನ್ನು ಹೋಲಿಸುವುದಕ್ಕೆ ಗಣಿತ ಭಾಷೆಯನ್ನು ಬಳಸಲು ಸಾಧ್ಯವಾಗುವುದು. (39)

**ಆಶಯ** : ಕುಟುಂಬದ ಸದಸ್ಯರೆಲ್ಲರೂ ಒಟ್ಟಾಗಿ ಒಂದು ಮನೆಯಲ್ಲಿ ವಾಸಿಸುವರು. (ಪೂರ್ವಾನುಭವದ ಪುನರನುಭವ)

**ಸಾಮಗ್ರಿಗಳು** : ಚಿತ್ರಗಳು, ಪದ್ಯಗಳು.

**ಸಂದರ್ಭ** : ವಸ್ತುಗಳನ್ನು ಚಿಕ್ಕದು ದೊಡ್ಡದು ಎಂಬ ರೀತಿಯಲ್ಲಿ ಕ್ರಮೀಕರಿಸುವ ಚಟುವಟಿಕೆಯ ನಂತರ

**ಪ್ರಕ್ರಿಯೆ** :

**ಆಟ** : ಓಡಿ.. ಓಡಿ.. - ಮಕ್ಕಳು ವೃತ್ತಾಕಾರದಲ್ಲಿ ನಿಲ್ಲುವರು. ವೃತ್ತದೊಳಗೆ ಮೂರು ವಿಭಿನ್ನ ವೃತ್ತಗಳನ್ನು ರಚಿಸುವುದು.

ಓಡಿರಿ ಓಡಿರಿ ಮಕ್ಕಳೇ

ವೃತ್ತದಲ್ಲೋಡಿರಿ ಮಕ್ಕಳೇ

ಜಿಗಿಯಿರಿ ಜಿಗಿಯಿರಿ ಮಕ್ಕಳೇ

ಹೊಂಡಕೆ ಜಿಗಿಯಿರಿ ಮಕ್ಕಳೇ

: ಯಾವ ಹೊಂಡದಲ್ಲಿ (ವೃತ್ತದಲ್ಲಿ) ಹೆಚ್ಚು ಮಕ್ಕಳು ?

- ಯಾವ ಹೊಂಡದಲ್ಲಿ (ವೃತ್ತದಲ್ಲಿ) ಕಡಿಮೆ ಮಕ್ಕಳು ?

- ಆಟ ಮುಂದುವರಿಸುವುದು.

- ದೊಡ್ಡ ಗುಂಪು ಯಾವುದು ? ಚಿಕ್ಕ ಗುಂಪು ಯಾವುದು ?

**ಆಖ್ಯಾನ** : ಅಚ್ಚುವಿನ ಮನೆಯವರೂ ಚಿನ್ನುವಿನ ಮನೆಯವರೂ ಫೋಟೊ ತೆಗೆಯಲು ತೀರ್ಮಾನಿಸಿದರು. ಫೋಟೊ ತೆಗೆಯುವುದು ಹೇಗೆ ? (ಮೊಬೈಲ್ ಫೋನಿನಿಂದ ಮಕ್ಕಳ ಫೋಟೊ ತೆಗೆಯುವುದು. ಮಕ್ಕಳನ್ನು ಕುರ್ಚಿಗಳಲ್ಲಿ ಕುಳ್ಳಿರಿಸಿ ತೆಗೆಯಬೇಕು. ಫೋಟೊ ಅವರಿಗೆ ತೋರಿಸಬೇಕು.) ಮನೆಯವರಿಗಾಗಿ ಫೋಟೊಗ್ರಾಫರ್ ಆರು ಕುರ್ಚಿಗಳನ್ನು ತಂದಿಟ್ಟನು. (ಅಧ್ಯಾಪಿಕೆ ಆರು ಕುರ್ಚಿಗಳನ್ನು ಕ್ರಮೀಕರಿಸುವರು.) ಆ ಮನೆಯಲ್ಲಿ ಯಾರೆಲ್ಲ ಇರಬಹುದು ? ಒಂದನೇ ಕುರ್ಚಿಯಲ್ಲಿ ಅಮ್ಮ, ಎರಡನೇ ಕುರ್ಚಿಯಲ್ಲಿ ಅಪ್ಪ, ಮೂರನೇ ಕುರ್ಚಿಯಲ್ಲಿ ..... ಹೀಗೆ ಅಜ್ಜ ಅಜ್ಜಿಯವರೆಗೆ ಹೇಳಿಸಬೇಕು. ತರಗತಿಯಲ್ಲಿ ಪ್ರದರ್ಶಿಸಿದ ಕುಟುಂಬದ ಚಿತ್ರಗಳನ್ನು ಪುನಃ ತೋರಿಸುವುದು. ದೊಡ್ಡ ಕುಟುಂಬ, ಚಿಕ್ಕ ಕುಟುಂಬವನ್ನು ಕಂಡುಕೊಳ್ಳುವುದು.

ವರ್ಕ್ ಶೀಟ್ 1.5 – ದೊಡ್ಡ ಕುಟುಂಬ – ನೀಡುವುದು.

ಒಂದು ಚಿನ್ನುವಿನ ಕುಟುಂಬ. ಇನ್ನೊಂದು ಅಚ್ಚುವಿನ ಕುಟುಂಬ. ಯಾರ ಕುಟುಂಬದಲ್ಲಿ ಹೆಚ್ಚು ಜನರಿರುವುದು ?

(ಒಂದೇ ನೋಟದಲ್ಲಿ ಗುರುತಿಸಲು ಸಾಧ್ಯವಿಲ್ಲದವರು ಇದ್ದರೆ, ಚಿತ್ರಗಳನ್ನು ಪರಸ್ಪರ ಜೋಡಿಸಿ ಹೆಚ್ಚಿನವರನ್ನು ಕಂಡುಹಿಡಿಯುವ ಪ್ರಕ್ರಿಯೆಯನ್ನು ಅವಲಂಬಿಸಬೇಕು.)

ಹೆಚ್ಚು ಸದಸ್ಯರಿರುವುದು ದೊಡ್ಡ ಕುಟುಂಬವಾಗಿದೆ. ಅದರ ಸುತ್ತಲೂ ಉರುಟು ಹಾಕಲಿ.

ಚಿತ್ರಗಳನ್ನು ಪರಸ್ಪರ ಕೈ ಬದಲಾಯಿಸಿ ಮೌಲ್ಯಮಾಪನ ಮಾಡುವುದು.

**ಮೌಲ್ಯಮಾಪನ** : ದೊಡ್ಡ ಕುಟುಂಬವನ್ನು ಕಂಡುಕೊಂಡು ಗುರುತು ಹಾಕಲು ಸಾಧ್ಯವಾಗುವುದು.

# ಥೀಂ 2 – ಮನೆ ಮತ್ತು ಪರಿಸರ

ವರ್ಕ್ ಶೀಟುಗಳನ್ನು ನೀಡುವಾಗ ಸಾಮರ್ಥ್ಯಗಳು ಮತ್ತು ರೂಪೀಕರಿಸಬೇಕಾದ ಆಶಯಗಳನ್ನು ಮನಸ್ಸಿನಲ್ಲಿ ನಿಖರಗೊಳಿಸಬೇಕು. ಆ ಆಶಯಗಳನ್ನು ಮಕ್ಕಳ ಅನುಭವಗಳಿಂದ ಹೊರಹೊಮ್ಮಿಸಬೇಕಾಗಿದೆ. ಅಲ್ಲದೇ ನೇರವಾಗಿ ಹೇಳಿಕೊಡುವುದಲ್ಲ. ಒಂದು ವರ್ಕ್ ಶೀಟಿನಲ್ಲಿ ಒಂದೋ ಎರಡೋ ಸಾಮರ್ಥ್ಯಗಳು ಹಾಗೂ ಕೆಲವು ಆಶಯಗಳೂ ಇರಬಹುದು. ಥೀಮಿಗೆ ಸಂಬಂಧಿಸಿದ ಇತರ ಚಟುವಟಿಕೆಗಳ ಮೂಲಕ ಹಾದುಹೋದಾಗ ಮಗುವಿನ ಮನಸ್ಸಿನಲ್ಲಿ ಸಮಗ್ರವಾದ ಚಿತ್ರಣವು ಮೂಡಿಬರುವುದು.

## ಚಟುವಟಿಕಾ ಕ್ರಮ

1. ನನ್ನ ಮನೆ (ಆಟಿಕೆಯ ಪುಟ ಸಂಖ್ಯೆ 99) ಪದ್ಯ ಹಾಡುವುದು.

↓

2. ಆಖ್ಯಾನ ಮಂಡನೆ - ವರ್ಕ್ ಶೀಟು 2.1 "ಚಿತ್ರ ನೋಡಿ ಹೇಳಿರಿ, ಬಣ್ಣ ನೀಡಿರಿ"

↓

3. ಚಿಕ್ಕ ಆಟಿಕೆಗಳನ್ನು ನಿರ್ಮಿಸುವುದು. (ಚೆಂಡುಪ್ಲೇ ಗಾಡಿ, ಬೆಂಕಿಪೆಟ್ಟಿಗೆ ಉಗಿಬಂಡಿ ಮೊದಲಾದುವುಗಳು)

↓

4. ಆಖ್ಯಾನ ಮಂಡನೆ - ವರ್ಕ್ ಶೀಟು 2.2 "ಹ್ಯೊಗೆ ಚಿತ್ರ ತಯಾರಿಸಿರಿ"

↓

5. ಬಯಲು ಪ್ರವಾಸದ ವೇಳೆ ಕಂಡ ಮನೆಗಳ ಕುರಿತು ಅಧ್ಯಾಪಿಕೆ ಮಕ್ಕಳಲ್ಲೂ ಹೇಳುವುದು.

↓

6. ಮನೆಗಳು ತಮ್ಮೊಳಗಿರುವ ವ್ಯತ್ಯಾಸಗಳನ್ನು ಗುರುತಿಸಿ ಹೇಳುವುದು.

↓

7. ಕಾಗದ, ಆವೆಮಣ್ಣು, ಎಲೆ, ಕಡ್ಡಿಗಳು ಮೊದಲಾದುವುಗಳನ್ನು ಉಪಯೋಗಿಸಿ ಮನೆಯ ಆಕೃತಿಯನ್ನು ನಿರ್ಮಿಸುವುದು.

↓

8. ಮನೆಯ ಮಾಡನ್ನು ವೀಕ್ಷಿಸಿ, ಹಂಚು, ಮಡಲು, ಕಾಂಕ್ರೀಟು, ಮುಳಿಹುಲ್ಲು ಎಂಬಂತೆ ಹೇಳುವುದು.

↓

9. ವಿವಿಧ ಕೋಣೆಗಳು, ಉಪಕರಣಗಳು ಎಂಬಿವುಗಳ ಉಪಯೋಗವನ್ನು ಹೇಳುವುದು.

↓

10. ಜೈ ಜೈ ಆಟ

↓

11. ಪದ್ಯ – ನನಗಿದೆ ಚಂದದ ಮನೆಯೊಂದು

↓

12. ಆಖ್ಯಾನ – ವರ್ಕ್ ಶೀಟು 2.3 "ಗೆರೆ ಎಳೆದು ಜೋಡಿಸಿರಿ"

↓

13. ಚಿತ್ರಗಳನ್ನು ಬಿಡಿಸಿ, ಕ್ರಯೋನ್, ಪೆನ್ಸಿಲು, ವಾಟರ್ ಕಲರ್ ಎಂಬಿವುಗಳನ್ನುಪಯೋಗಿಸಿ ಬಣ್ಣ ಹಚ್ಚುವುದು. (ಮನೆ ಮತ್ತು ಪರಿಸರ)

↓

14. ಮನೆಯಲ್ಲಿರುವ ಜೀವಿಗಳ ಕುರಿತು ಪದ್ಯವನ್ನು ಹಾಡುವುದು.

↓

15. ವರ್ಕ್ ಶೀಟು 2.4 "ಹೂ ಬಿಡಿಸುವ ಬಣ್ಣ ನೀಡುವ"

↓

16. ಹೂವಿನ ಕುರಿತು ಸಾಲುಗಳನ್ನು ಸೇರಿಸಿ ಹಾಡುವುದು.

↓

17. ಹಕ್ಕಿಗಳ ಮತ್ತು ಪ್ರಾಣಿಗಳ ಚಲನೆಗಳು (ಕಪ್ಪೆ ಜಿಗಿತ, ಮೊಲ)

↓

18. ಆವೆಮಣ್ಣು, ಮೈದ, ಪ್ಲಾಸ್ಟಿಸಿನ್ ಮೊದಲಾದುವುಗಳನ್ನು ಕಲಸಿ ಮನೆ ಮತ್ತು ಪರಿಸರವನ್ನು ನಿರ್ಮಿಸುವುದು. (ಗುಂಪು ಚಟುವಟಿಕೆ)

19. ಚಿತ್ರ ಪಸಲ್ ಗಳನ್ನು ಮಾಡುವುದು.

### ವರ್ಕ್ ಶೀಟ್ 2.1 – ಚಿತ್ರ ನೋಡಿ ಹೇಳಿರಿ...

**ವಿಕಾಸ ಮಂಡಲ** : ಭಾಷಾ ವಿಕಾಸ

- ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಕಂಡು ಕೇಳಿ ತಿಳಿದುಕೊಂಡ ಘಟನೆಗಳು, ಅನುಭವಗಳು ಎಂಬಿವುಗಳನ್ನು ಆಶಯಗಳು ಸೋರಿ ಹೋಗದಂತೆ ಇತರರೊಡನೆ ಹಂಚಿಕೊಳ್ಳಲು ಸಾಧ್ಯವಾಗುವುದು. (16)

- ಚಿತ್ರಗಳಿಗೆ ಬಣ್ಣ ಹಚ್ಚಲು ಸಾಧ್ಯವಾಗುವುದು.
- ವಸ್ತುಗಳನ್ನು ಹೋಲಿಸುವುದಕ್ಕೆ ಗಣಿತ ಭಾಷೆಯನ್ನು ಬಳಸಲು ಸಾಧ್ಯವಾಗುವುದು. (ಹೆಚ್ಚು, ಕಡಿಮೆ) (39)
- ಪ್ರಕೃತಿಯಿಂದ ಲಭಿಸುವ ವಸ್ತುಗಳನ್ನುಪಯೋಗಿಸಿ ಆಟಿಕೆಗಳನ್ನು ನಿರ್ಮಿಸುವುದು.(83)

**ಆಶಯ** : ಅಮ್ಮ, ಅಪ್ಪ, ಅಜ್ಜ, ಅಜ್ಜಿ, ಅಣ್ಣ, ಅಕ್ಕ, ತಮ್ಮ, ತಂಗಿ ಎಂಬಿವರು ಕುಟುಂಬದ ಸದಸ್ಯರಾಗಿದ್ದಾರೆ. ಇವರು ವಿವಿಧ ಕೆಲಸಗಳನ್ನು ಮಾಡುತ್ತಿದ್ದಾರೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್, ಚೆಂಡುಪ್ಲೇ, ನೂಲು

**ಸಂದರ್ಭ** : ಕುಟುಂಬದ ಸದಸ್ಯರ ವಿಶೇಷತೆಗಳನ್ನು ಕೇಳಿದ ನಂತರ ಚಟುವಟಿಕೆ ಮಂಡಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಬಿಲ್ಲು ಬೆಕ್ಕಿಗೆ ಎಚ್ಚರವಾಯಿತು. ಮ್ಯಾವ್.. ಮ್ಯಾವ್.. ಅದು ಮಲಗುವ ಕೋಣೆಗೆ ಹೋಗಿ ಮಂಚದ ಮೇಲೆ ಹತ್ತಿತು. ಏ.. ಚಿನ್ನು ಮತ್ತು ಮಿನ್ನು ಎಲ್ಲಿ ? ಅವರು ಆಗಲೇ ಎದ್ದರೇ ? ಬಿಲ್ಲಿ ವರಾಂಡಕ್ಕೆ ಓಡಿತು. ಅಲ್ಲಿ ಬಿಲ್ಲಿ ಏನೆಲ್ಲ ಕಂಡಿರಬಹುದು ?

ವರ್ಕ್ ಶೀಟ್ 2.1 – ಚಿತ್ರ ನೋಡಿ ಹೇಳಿರಿ, ಬಣ್ಣ ನೀಡಿರಿ. – ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಯಾರೆಲ್ಲ ಇರುವರು?

- ಚಿನ್ನು ಬಿಲ್ಲಿಯೊಡನೆ ಕೇಳಿದ್ದೇನು?
- ಬಿಲ್ಲಿ ಏನು ಹೇಳಿರಬಹುದು?
- ಅಜ್ಜ ಏನು ಮಾಡುತ್ತಿದ್ದಾರೆ?
- ಅಪ್ಪ ಏನು ಮಾಡುತ್ತಿದ್ದಾರೆ?
- ಅಜ್ಜಿಯೋ?
- ನಿಮ್ಮ ಮನೆಯಲ್ಲಿ ಒಬ್ಬೊಬ್ಬರು ಏನು ಮಾಡುತ್ತಾರೆ?

**ಆಖ್ಯಾನ** : ಅಪ್ಪ ಗಿಡಗಳಿಗೆ ನೀರೆರೆಯುತ್ತಿದ್ದರು. “ಅಪ್ಪಾ.. ಬಿಲ್ಲಿ ನಿಮಗೆ ಸಹಾಯ ಮಾಡುತ್ತಾಳಂತೆ.” ಚಿನ್ನು ಹೇಳಿದಳು. ಅಪ್ಪ ತಿರುಗಿದರು. ಆಗ ಪೈಪು ಬಿಲ್ಲಿ ಎದುರಿಗೆ ಬಂತು. ಪೈಪಿನಿಂದ ನೀರು ಚಿಮ್ಮಿತು. ಬೆಕ್ಕು ಒದ್ದೆಯಾಯಿತು. ಮ್ಯಾವ್.. ಅದು ಓಡಿ ಹೋಯಿತು. ಅಪ್ಪ ನಕ್ಕರು. ಪೈಪನ್ನು ಚಿನ್ನು ತೆಗೆದುಕೊಂಡಳು. ಆಗ ಪೈಪು ಅಪ್ಪನ ಎದುರಿಗೆ ಬಂತು. ಅಪ್ಪ ಒದ್ದೆಯಾದರು. ಅದನ್ನು ಕಂಡು ಅಜ್ಜನೂ ಅಜ್ಜಿಯೂ ಗೊಳ್ಳೆಂದು ನಕ್ಕರು. ಮಿನ್ನು ಸಾಬೂನು ತಂದಳು. ಇಲ್ಲೇ ಸ್ನಾನ ಮಾಡಿಬಿಡಿ. ಮಿನ್ನುವಿನ ಮಾತು ಕೇಳಿ ಎಲ್ಲರೂ ಬಿದ್ದು ಬಿದ್ದು ನಕ್ಕರು. (ಇಲ್ಲಿ ಒಬ್ಬರ ಕಥೆಯನ್ನು ಮಾತ್ರ ಹೇಳಲಿಲ್ಲ. ಅದು ಯಾರೆಂದು ಹೇಳಬಹುದೇ?)

- ಮನೆಯ ಸದಸ್ಯರಿಗೆ ಮಾತ್ರ ಬಣ್ಣ ಹಚ್ಚಿರಿ.
- ಇನ್ನೂ ಚಿತ್ರದಲ್ಲಿರುವವರಿಗೆ ಬಣ್ಣ ಹಚ್ಚಿರಿ.

**ಅಧ್ಯಾಪಿಕೆಗೆ** : ಕುಟುಂಬದ ಸದಸ್ಯರ ಸಂಬಂಧವನ್ನು ಹೇಳುವಾಗ ಸ್ಥಳೀಯವಾದ ಭಾಷಾವ್ಯತ್ಯಾಸಗಳನ್ನು ಪರಿಗಣಿಸಬೇಕಾಗಿದೆ. (ಉದಾ - ಅಮ್ಮ, ಉಮ್ಮ, ಅಜ್ಜಿ, ಉಮ್ಮುಮ್ಮ, ಅಜ್ಜ, ಉಪ್ಪಾಪ, ಅಣ್ಣ, ಇಚ್ಚ, ಅಕ್ಕ, ಇಕ್ಕ, ಇತ್ಯಾದಿ...)

**ಚೆಂಡುಪ್ಲೇ ಗಾಡಿ ನಿರ್ಮಿಸುವ** : ಚಿನ್ನು ಮತ್ತು ಮಿನ್ನು ಚೆಂಡುಪ್ಲೇಗಳೊಂದಿಗೆ ಅಜ್ಜಿಯ ಹತ್ತಿರ ಹೋದರು. ಅಜ್ಜಿ.. ಗಾಡಿ ಮಾಡಿ ಕೊಡಿ.. ಅಜ್ಜಿ ಗಾಡಿ ಮಾಡಿ ಕೊಟ್ಟರು. ಚಿನ್ನು ಮತ್ತು ಮಿನ್ನು ಗಾಡಿಯಲ್ಲಿ ಆಟವಾಡಿದರು. ನಿಮಗೂ ಆಡಬೇಡವೇ?

- ಚೆಂಡು ಪೇಳುಗಳನ್ನು ಮೂರು ಗುಂಪಾಗಿ ಇಡುವುದು.
- ಯಾವ ಗುಂಪಿನಲ್ಲಿ ಹೆಚ್ಚು? / ಕಡಿಮೆ?

: ಗಣಿತದ ಸಾಧ್ಯತೆಯ ಪ್ರಯೋಜನ ಪಡೆಯುವುದು. ಅಧ್ಯಾಪಿಕೆಯ ಸೂಚನೆಯ ಪ್ರಕಾರ ಮಕ್ಕಳು ಗಾಡಿ ನಿರ್ಮಾಣ ಮಾಡುವರು.

**ಮೌಲ್ಯಮಾಪನ** : ಚಿತ್ರದಲ್ಲಿರುವ ಆಶಯಗಳನ್ನು ಸಂಕೋಚವಿಲ್ಲದೆ ಇತರರೊಡನೆ ಹಂಚಿಕೊಳ್ಳಲು ಸಾಧ್ಯವಾಗುವುದು.

- ಸೂಚನೆಗಳಿಗನುಸರಿಸಿ ಚಿತ್ರಕ್ಕೆ ಬಣ್ಣ ಹಚ್ಚಲು ಸಾಧ್ಯವಾಗುವುದು.
- ಸೂಚನೆಯ ಪ್ರಕಾರ ಆಟಿಕೆಗಳನ್ನು ನಿರ್ಮಿಸುತ್ತಾರೆ.

## ವರ್ಕ್ ಶೀಟ್ 2.2 – ಹೊಗೆ ಚಿತ್ರ ತಯಾರಿಸುವ

**ವಿಕಾಸ ಮಂಡಲ** : ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ

- ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಪ್ರಕೃತಿಯ ವಸ್ತುಗಳನ್ನು (ಹೊಗೆ, ಮರದ ಹುಡಿ) ಉಪಯೋಗಿಸಿ ಕೊಲೇಶ್ ನಿರ್ಮಿಸುವುದು.(83)

**ಆಶಯ** : ಮನೆಯ ಸುತ್ತಲೂ ಹಲವು ವಿಧದ ಸಸ್ಯಗಳನ್ನು ಬೆಳೆಸಲಾಗುವುದು.

**ಸಾಮಗ್ರಿಗಳು** : ವರ್ಕ್ ಶೀಟು, ಬಣ್ಣವಿರುವ ಹೊಗೆ / ಹುಡಿ, ಗೋಂದು.

**ಸಂದರ್ಭ** : ಮನೆಯ ಸುತ್ತಮುತ್ತಲಿರುವ ಸಸ್ಯಗಳ ಮತ್ತು ಹೂಗಳ ಕುರಿತು ಕೇಳಿದ ನಂತರ ವರ್ಕ್ ಶೀಟು ಮಂಡಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಮಿನ್ನು ಮತ್ತು ಚಿನ್ನು ಹೂದೋಟಕ್ಕೆ ತಲುಪಿದರು. ಏ.. ಮಿನ್ನು.. ಬಿಲ್ಲಿ... ನೋಡಿ ನಮ್ಮ ಗಿಡಗಳಲ್ಲಿ ಹೂವಾಗಿದೆ. ಅಕ್ಕಾ.. ನಾನು ಪರಿಮಳ ನೋಡಲೇ ? ಬಿಲ್ಲಿ ಗಿಡಕ್ಕೆ ತನ್ನ ಮೈಯನ್ನು ಉಜ್ಜಿತು. ಅಕ್ಕಾ.. ಈ ಹೂವನ್ನು ಕೊಯ್ಯಲೇ ? ಅಯ್ಯೋ.. ಹೂವನ್ನು ಕೊಯ್ಯಬಾರದು. ಮಿನ್ನು ಬಾ.. ನಿನಗೆ ನಾನು ಹೂ ಮಾಡಿ ಕೊಡುತ್ತೇನೆ. ಚಿನ್ನು ಕಾಗದದಲ್ಲಿ ಹೂವನ್ನು ಬಿಡಿಸಿದಳು. ಒಂದು ಚಿಟ್ಟೆ ಬಂದು ಹೂವಿನಲ್ಲಿ ಕುಳಿತಿತು. ಚಿಟ್ಟೆ ಅವರನ್ನು ನೋಡಿತು. ಒಳ್ಳೆಯ ಹೂವು.. ನಿಜವಾದ ಹೂವು ಎಂದು ಅಂದುಕೊಂಡೆ. ಚಿಟ್ಟೆ ಹಾರಿಹೋಯಿತು. ಚಿನ್ನು ಮಾಡಿದ ಹೂವಿನ ಚಿತ್ರ ನಿಮಗೂ ಕಾಣಬೇಡವೇ ?

ವರ್ಕ್ ಶೀಟ್ 2.2 – ಹೊಗೆ ಚಿತ್ರ ತಯಾರಿಸುವ – ನೀಡುವುದು.

: ವರ್ಕ್ ಶೀಟಿನಲ್ಲಿ ನೀಡಿದ ಚಿತ್ರದ ಒಳಗೆ ಗೋಂದನ್ನು ಹಚ್ಚುವುದು.

- ಗೋಂದು ಹಚ್ಚಿದ ಭಾಗಕ್ಕೆ ಮಗು ಬಣ್ಣದ ಹೊಗೆಯನ್ನು ಹರಡುವುದು.
- ಒಣಗಿದ ಮೇಲೆ ಪ್ರದರ್ಶಿಸುವುದು.

**ಅಧ್ಯಾಪಿಕೆಗೆ** : ವಿವಿಧ ಬಣ್ಣಗಳನ್ನು ನೀಡಿದ ಹೊಗೆಯನ್ನು ಬಳಸುವುದು. (ಬಣ್ಣದ ಹುಡಿಗಳನ್ನೂ ಬಳಸಬಹುದು.)

**ಮೌಲ್ಯಮಾಪನ** : ಹೊಗೆ ಚಿತ್ರ ಪೂರ್ತಿಗೊಳಿಸಲಾಗಿದೆ.

- ಚಿತ್ರದ ಆಕರ್ಷಣೆ

## ವರ್ಕ್ ಶೀಟ್ 2.3 – ಗೆರೆ ಎಳೆದು ಸೇರಿಸಿರಿ

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ವಸ್ತುಗಳು / ಚಿತ್ರಗಳನ್ನು ನಿರೀಕ್ಷಣೆ ಮಾಡಿ ಗುಂಪಿಗೆ ಸೇರದವುಗಳನ್ನು ಬೇರ್ಪಡಿಸಿ ಕಾರಣ ಹೇಳಲು ಸಾಧ್ಯವಾಗುವುದು. (33)

**ಆಶಯ** : ಮನೆಯಲ್ಲಿ ಮಂಚ, ಮೇಜು, ಕುರ್ಚಿ, ಪಾತ್ರೆಗಳು, ಮೊದಲಾದ ಉಪಕರಣಗಳು ಇವೆ.

**ಸಾಮಗ್ರಿಗಳು** : ವರ್ಕ್ ಶೀಟು, ಪದ್ಯಗಳು

**ಸಂದರ್ಭ** : ಮನೆಯೊಳಗೆ ಹೋಗುವ ಆಟ, ಮನೆ ಉಪಕರಣಗಳ ಉಪಯೋಗ ಎಂಬೀ ಚಟುವಟಿಕೆಗಳ ಮುಂದುವರಿಕೆಯಾಗಿ ವರ್ಕ್ ಶೀಟು ನೀಡಬಹುದು.

**ಪ್ರಕ್ರಿಯೆ** :

**ಆಟ** : ಜೈ ಜೈ ಆಟ

- ಅಡುಗೆ ಕೋಣೆ, ಚಾವಡಿ, ಮಲಗುವ ಕೋಣೆ, ಸ್ನಾನದ ಕೋಣೆ ಎಂಬಿವುಗಳ ನಕ್ಷೆಯನ್ನು ಚೋಕಿನಿಂದ ನೆಲದಲ್ಲಿ ಬಿಡಿಸಬೇಕು. ಮಗುವಿಗೆ ತಿಳಿಯುವುದಕ್ಕಾಗಿ ಅವುಗಳೊಳಗೆ ಒಂದೊಂದು ಉಪಕರಣದ ಚಿತ್ರವನ್ನು ಮಾಡುವುದು. (ಅಡುಗೆಕೋಣೆ-ಮಡಕೆ, ಚಾವಡಿ-ಟಿ.ವಿ, ಮಲಗುವ ಕೋಣೆ-ಮಂಚ, ಸ್ನಾನದ ಕೋಣೆ-ಬಕೆಟ್)

**ಪದ್ಯ** : ಅಧ್ಯಾಪಿಕೆ ಹಾಡುವುದು.

ಕೋಣೆಗೆ ಬನ್ನಿ ಮಕ್ಕಳೇ (2)
ಓಡೋಡಿ ಬನ್ನಿ ಮಕ್ಕಳೇ (3)

ಮಕ್ಕಳು ವೃತ್ತಾಕಾರದಲ್ಲಿ ಓಡುವರು.

: ಅಧ್ಯಾಪಿಕೆ ಪದ್ಯ ನಿಲ್ಲಿಸಿದಾಗ ಮಕ್ಕಳು ಓಡಿಹೋಗಿ ಅವರಿಗೆ ಇಷ್ಟವಿರುವ ಕೋಣೆಯೊಳಗೆ ನಿಲ್ಲುವರು.

- ಕೋಣೆಯಲ್ಲಿ ನಿಂತ ಕೂಡಲೇ ಆ ಕೋಣೆಯಲ್ಲಿರಬಹುದಾದ ಯಾವುದಾದರೂ ಒಂದು ಉಪಕರಣದ ಹೆಸರನ್ನು ಪ್ರತಿಯೊಬ್ಬರೂ ಹೇಳುವುದು.
- ಹೆಸರು ಹೇಳದವರು ಆಟದಿಂದ ಹೊರಗೆ.
- ಉಪಕರಣದ ಹೆಸರು ಹೇಳಿದರೆ ಅವರು ಜೈ ಕರೆಯಬೇಕು. - ಅಡುಗೆ ಕೋಣೆಗೆ ಜೈ
- ನಂತರ ಮಕ್ಕಳು ಮತ್ತು ಅಧ್ಯಾಪಿಕೆ ಸೇರಿ ಹಾಡುವುದು.

ನನಗೊಂದೊಳ್ಳೆಯ ಮನೆಯಿದೆಯಲ್ಲಾ..
ಕೋಣೆಗಳಿರುವುದು ಹಲವಾರು
ಮಲಗಿಕೊಳ್ಳಲು ಮಲಗುವ ಕೋಣೆ
ಅಡುಗೆಗಾಗಿ ಅಡುಗೆಯ ಕೋಣೆ
ಸ್ನಾನವ ಮಾಡಲು ಸ್ನಾನದ ಕೋಣೆ
............................................
ಸಾಲುಗಳನ್ನು ಸೇರಿಸಿ ಹಾಡುವುದು.

**ಆಖ್ಯಾನ** : ಅಪ್ಪು ಬಾ.. ನಾವು ಕಣ್ಣುಮಚ್ಚಾಲೆ ಆಟ ಆಡೋಣ. ಚಿನ್ನು, ಮಿನ್ನು, ಅಪ್ಪು ಮತ್ತು ಬಿಲ್ಲಿ ಕಣ್ಣು ಮುಚ್ಚಾಲೆ ಆಟ ಆರಂಭಿಸಿದರು. "ನಾನು ಎಣಿಸುತ್ತೇನೆ." ಚಿನ್ನು ಹೇಳಿದಳು. ಒಂದು.. ಎರಡು.. ಮೂರು.. ಎಲ್ಲರೂ ಅಡಗಿದಿರಾ.. ಕೂ.. ಎಲ್ಲರೂ ಅಡಗಿದರು. ಚಿನ್ನು ಮೆಲ್ಲಮೆಲ್ಲನೆ ಹೋಗಿ ನೋಡಿದಳು. ಒಬ್ಬೊಬ್ಬರು ಒಂದೊಂದು ಕೋಣೆಯಲ್ಲಿ ಅಡಗಿದ್ದಾರೆ. ಚಿನ್ನು ಮಲಗುವ ಕೋಣೆಗೆ ಹೋದಳು. ಮಂಚದಲ್ಲಿ ಯಾರೋ ಹೊದ್ದುಕೊಂಡು ಮಲಗಿದ್ದಾರೆ. ಅಪ್ಪುವಾಗಿರಬಹುದು. ಅವಳು ಹೊದಿಕೆಯನ್ನು ಎಳೆದಳು. ಎರಡು ತಲೆದಿಂಬುಗಳನ್ನು ಉದ್ದಕ್ಕೆ ಜೋಡಿಸಿ ಇಡಲಾಗಿತ್ತು. ಮಂಚದ

ಅಡಿಯಲ್ಲಿ ಏನೋ ಅಲುಗಾಡಿತು. ಅವಳು, ಕಂಡೇ.. ಎಂದು ಹೇಳುತ್ತಾ ಬಾಗಿ ನೋಡಿದಳು. ಅದು ನಾಯಿಮರಿಯಾಗಿತ್ತು. ಅಪ್ಪುವನ್ನು ಕಾಣುವುದಿಲ್ಲ. ಎಲ್ಲಿ ಅಡಗಿದ್ದಾನೆ?

ಪೋಂ..ಪೋಂ.. ಪೋಂ.. ಪೋಂ.. ಅದೇನು ಶಬ್ದ? ಚಿನ್ನು ಗೇಟಿನ ಬಳಿ ಓಡಿದಳು. ಒಂದು ಟೆಂಪೋ. ಚಿನ್ನು ಗೇಟು ತೆರೆದಳು. ಆಗ ಅಪ್ಪು ಓಡಿ ಬಂದು ಮುಟ್ಟಿದನು. ಚಿನ್ನು ಸೋತಳು... ಎಂದು ಕೂಗಿ ಹೇಳಿದನು. ಅಪ್ಪೂ.. ಟೆಂಪೋದಲ್ಲಿ ಏನೆಲ್ಲ ತಂದಿದ್ದಾರೆ? ನೋಡು.. ಏನೇನು ಇರಬಹುದು? ಮಕ್ಕಳು ಊಹಿಸಿ ಹೇಳುವರು. ಸರಿ ನಾವು ನೋಡೋಣ.

ವರ್ಕ್ ಶೀಟ್ 2.3 – ಗೆರೆ ಎಳೆದು ಜೋಡಿಸಿರಿ – ನೀಡುವುದು.

**ಚಿತ್ರ ಓದು** : ಟೆಂಪೋದಲ್ಲಿ ಯಾವ ಯಾವ ಸಾಮಗ್ರಿಗಳನ್ನು ತಂದಿರಬಹುದು?
- ಚಿತ್ರವನ್ನು ನಿರೀಕ್ಷಣೆ ಮಾಡಿ ಹೇಳುವುದು.
- ಇವುಗಳು ಯಾವೆಲ್ಲ ಕೋಣೆಗಳಾಗಿವೆ?
- ಕೋಣೆಗಳಲ್ಲಿ ಏನೆಲ್ಲ ಇವೆ?
- ಇವು ಪ್ರತಿಯೊಂದು ಯಾವ ಯಾವ ಕೋಣೆಯಲ್ಲಿ ಇರಬೇಕು?
- ಸರಳ ಚರ್ಚೆಯ ನಂತರ ಮಕ್ಕಳು ವಸ್ತುಗಳನ್ನು ಆಯಾ ಕೋಣೆಗಳಿಗೆ ಗೆರೆ ಎಳೆದು ಸೇರಿಸುವರು.

**ಮೌಲ್ಯಮಾಪನ** : ವಸ್ತುಗಳನ್ನು ಆಯಾ ಕೋಣೆಗಳಿಗೆ ಸೇರಿಸಲಾಗಿದೆ.
- ಗೆರೆ ಎಳೆದು ಸೇರಿಸಿದುದರ ಯುಕ್ತಿಯನ್ನು ಹೇಳಲು ಸಾಧ್ಯವಾಗುವುದು.

## ವರ್ಕ್ ಶೀಟ್ 2.4 – ಹೂ ಬಿಡಿಸುವ ಬಣ್ಣ ನೀಡುವ

**ವಿಕಾಸ ಮಂಡಲ** : ಸೃಜನಾತ್ಮಕ-ಸೌಂದರ್ಯಾತ್ಮಕ ವಿಕಾಸ
- ದೈಹಿಕ ಚಲನಾತ್ಮಕ ವಿಕಾಸ
- ಭಾಷಾ ವಿಕಾಸ

**ಸಾಮರ್ಥ್ಯ** : ಪ್ರಕೃತಿಯನ್ನು ಆಸ್ವಾದಿಸುವುದಕ್ಕೂ ಚಿತ್ರದ ಮೂಲಕ ಪ್ರಕಟಪಡಿಸುವುದಕ್ಕೂ ಬಣ್ಣ ಹಚ್ಚುವುದಕ್ಕೂ ಸಾಧ್ಯವಾಗುವುದು.(80)

**ಆಶಯ** : ಮನೆಯ ಸುತ್ತಲೂ ಹಲವು ವಿಧದ ಸಸ್ಯಗಳನ್ನು ನೆಟ್ಟು ಬೆಳೆಸಲಾಗುವುದು.

**ಸಾಮಗ್ರಿಗಳು** : ವರ್ಕ್ ಶೀಟು

**ಸಂದರ್ಭ** : ಹೂದೋಟಕ್ಕೆ ಬಯಲು ಪ್ರವಾಸ ನಡೆಸಿದ ನಂತರ

**ಪ್ರಕ್ರಿಯೆ** :

**ಅನುಭವ ಹೇಳುವ** : ಹೂದೋಟದಲ್ಲಿ ಏನೆಲ್ಲಾ ಕಂಡಿದ್ದೀರಿ? (ಸರಳ ಪ್ರಶ್ನೆಗಳ ಮೂಲಕ ಮಕ್ಕಳು ಕಂಡ ದೃಶ್ಯಗಳನ್ನು ವಿವರಿಸಲು ಆವಕಾಶ ನೀಡಬೇಕು.)

**ಆಖ್ಯಾನ** : ಮಿನ್ನು ಬೆಳಗ್ಗೆ ಬೇಗನೆ ಎದ್ದಳು. ಮುಖ ತೊಳೆದು ನೇರವಾಗಿ ಹೂದೋಟಕ್ಕೆ ಹೋದಳು. ಹಾ.. ಗಿಡದಲ್ಲಿ ನಿನ್ನೆ ಕಂಡ ಮೊಗ್ಗು ಅರಳಿದೆ. ಚಂದದ ಹೂವು. ಒಳ್ಳೆಯ ಬಣ್ಣ. ಪರಿಮಳವೂ ಇದೆ. ನುಣುಪಾದ ಎಸಳುಗಳು. ಮಿನ್ನುವಿಗೆ ಹೂದೋಟದ ಹೂವಿನ ಚಿತ್ರವನ್ನು ಬಿಡಿಸಲು ಆತುರವಾಯಿತು. ತನ್ನ ಗೆಳೆಯರಿಗೆ ತೋರಿಸಬೇಕು. ಮಿನ್ನು ಬಿಡಿಸಿದ ಹೂಗಿಡದ ಚಿತ್ರ ನೋಡಿರಿ.

**ವರ್ಕ್ ಶೀಟ್ 2.4 – ಹೂ ಬಿಡಿಸುವ ಬಣ್ಣ ನೀಡುವ – ನೀಡುವುದು.**

**ಚಿತ್ರ ಓದು** : ಮಿನ್ನು ಚಿತ್ರ ಮಾಡಿದ ಗಿಡದಲ್ಲಿ ಹೂವಿನ ಚಿತ್ರ ಬಿಡಿಸಿ ಬಣ್ಣ ಹಚ್ಚಬಹುದೇ?
- ಗಿಡದಲ್ಲಿ ಹೂವಿನ ಚಿತ್ರ ಬಿಡಿಸಿ ಬಣ್ಣ ಹಚ್ಚುವುದು.

**ಆಖ್ಯಾನ** : ಈ ಪರಿಮಳ ಎಲ್ಲಿಂದಾಗಿರಬಹುದು? ಚಿಂಗು ಜೇನುನೊಣ ಹೊಸತಾಗಿ ಅರಳಿದ ಹೂವನ್ನು ಹುಡುಕುತ್ತಾ ಹೋಯಿತು. ಚಿಂಗು ಬಂದ ದಾರಿಯನ್ನು ಚಿತ್ರ ಮಾಡಬಹುದೇ? "ಜೇನು ನೊಣವನ್ನು

ಹೂವಿನ ಬಳಿ ತಲುಪಿಸುವ" ಪೂರ್ತಿಗೊಳಿಸುವುದು.

(ಲೇಖನ ಪೂರ್ವ ಚಟುವಟಿಕೆ)

**ಮೌಲ್ಯಮಾಪನ** : ಹೂವಿನ ಚಿತ್ರ ಬಿಡಿಸಿ ಬಣ್ಣ ಹಚ್ಚಲು ಸಾಧ್ಯವಾಗುವುದು.

- ಬಣ್ಣ ಹಚ್ಚಿದುದರ ನಿಖರತೆ
- ದಾರಿಯನ್ನು ಚಿತ್ರಿಸಲು ಸಾಧ್ಯವಾಗುವುದು.

**ಮುಂದುವರಿದ ಚಟುವಟಿಕೆ**

ಕೊಕ್ಕಿರುವ ಕಾಗೆ
ಕಾ ಕಾ ಕಾಗೆ
ಕಪ್ಪು ಕಪ್ಪು ಕಾಗೆ
ಅಹಾ ಕಾಗೆ

- ಬಿಲ್ಲಿ ಬೆಕ್ಕಿನ ಕುರಿತು ನಾನು ಒಂದು ಪದ್ಯವನ್ನು ಹಾಡುತ್ತೇನೆ. ಅಜ್ಜಿ ಹೇಳಿದರು.

- ಮೀಸೆಗಾರ ಬೆಕ್ಕು
ಮ್ಯಾಂ ಮ್ಯಾಂ ಬೆಕ್ಕು
ಕಪ್ಪು ಬಿಳುಪು ಬೆಕ್ಕು
ಹಾಯ್ ಹಾಯ್ ಬೆಕ್ಕು
(ಎಲ್ಲರೂ ಸೇರಿ ಹಾಡುವುದು.)

- ಬಾಲವಿರುವ ನಾಯಿ
ಬೌ ಬೌ ನಾಯಿ
ಕಪ್ಪು ಕಪ್ಪು ನಾಯಿ
ಹಾಯ್ ಹಾಯ್ ನಾಯಿ

- ಚಿನ್ನು ಬಿಡಿಸಿದ ಚಿತ್ರದ ಕುರಿತು ಹಾಡುವ.

ಪರಿಮಳದ ಹೂವು
................ ಹೂವು
ಹಾಯ್ ಹಾಯ್ ಹೂವು

# ಥೀಂ 3 – ನಾನು ಮತ್ತು ನನ್ನ ಶರೀರ

**ಪ್ರತಿಯೊಂದು ಹೊಸ ಥೀಂಗಳನ್ನು ಮಂಡಿಸುವಾಗಲೂ ಆ ಮೊದಲು ಮಂಡಿಸಿದ ಥೀಂಗಳ ಆಶಯಗಳು ಪುನಹ ಬರಬಹುದು. ಮನೆ, ಕುಟುಂಬ ಎಂಬಿವುಗಳಲ್ಲಿರುವ ಕೆಲವು ಆಶಯಗಳು ನಾನು ಮತ್ತು ನನ್ನ ಶರೀರ ಎಂಬ ವಿಷಯದಲ್ಲಿಯೂ ಬರಬಹುದು. ಇದು ಚಾಕ್ರಿಕವಾದ ಅನುಭವವಾಗಿದೆ ಎಂಬುದನ್ನು ತಿಳಿದಿರಬೇಕು. ವರ್ಕ್ ಶೀಟುಗಳಲ್ಲಿಯೂ ಸಮಾನವಾದ ಆಶಯಗಳು ಬರಬಹುದು. ಅಂತಹ ಸಂದರ್ಭಗಳಲ್ಲಿ ಚರ್ಚೆ ಹಾಗೂ ಸಂಭಾಷಣೆಯು ಹೆಚ್ಚು ಆಳದಲ್ಲಿ ನಡೆಯಬೇಕಾಗಿದೆ.**

## ಚಟುವಟಿಕಾ ಕ್ರಮ

1. ಶರೀರದ ಅವಯವಗಳು ವಿಷಯವಾಗಿ ಬರುವ ಪದ್ಯಗಳು, ಅಭಿನಯ ಗೀತೆಗಳು.

↓

2. ಶುಚಿತ್ವ ಚಟುವಟಿಕೆಗಳು

↓

3. ಸ್ವತಂತ್ರ ಸಂಭಾಷಣೆ (ವ್ಯಕ್ತಿ ಶುಚಿತ್ವ)

↓

4. ವರ್ಕ್ ಶೀಟು 3.1 "ಒಟ್ಟಿಗೆ ಹಾಡಿರಿ, ವೃತ್ತ ಹಾಕಿರಿ."

↓

5. ಬೊಂಬೆ ಆಟ / ಕಥೆ, ಶೌಚಾಲಯ ಉಪಯೋಗಿಸುವುದರ ಪ್ರಾಧಾನ್ಯತೆ.

↓

6. ಆಖ್ಯಾನ – ವರ್ಕ್ ಶೀಟು 3.2 "ಬದಿಗಿರಿಸಿರಿ, ಶುಚಿಗೊಳಿಸಿರಿ"

↓

7. ಅಭಿನಯ ಆಟಗಳು (ಹಲ್ಲುಜ್ಜುವುದು, ಸ್ನಾನ, ಸಾಬೂನು ಹಾಕುವುದು.)

↓

8. ವರ್ಕ್ ಶೀಟು 3.3 "ನಾನು ಉಪಯೋಗಿಸುವವುಗಳು"

↓

9. ಬಣ್ಣ ನೀಡುವುದು.

↓

10. ಒಟ್ಟು ಮಾಡಿ ಹಾಡುವುದು.

↓

11. ತರಗತಿಯ ಶುಚೀಕರಣ

↓

12. ಕರವಸ್ತ್ರ ತೊಳೆದು ಒಣಗಿಸುವುದು.

↓

13. ಕೈಗಳು ಕೊಳೆಯಾದರೆ - ಪದ್ಯ ಪುನಃ ಹಾಡುವುದು. (ಪ್ರತಿನಿತ್ಯ ಸ್ನಾನ, ಹಲ್ಲುಜ್ಜಬೇಕು, ಒತ್ತು ನೀಡುವ ಸಾಲುಗಳು) ಇದಕ್ಕೆ ಅಗತ್ಯವಿರುವ ಸಾಮಗ್ರಿಗಳು/ಉಪಕರಣಗಳು - ಚರ್ಚೆ

↓

14. ಚೆಂಡು ಪ್ಲೇ ಮನುಷ್ಯನ ನಿರ್ಮಾಣ

↓

15. ಹೆಗ್ಗಳಿಕೆ ಹೇಳುವುದು.

↓

16. ಒಗಟುಗಳು

↓

17. ಪಾತ್ರಾಭಿನಯ

## ವರ್ಕ್ ಶೀಟ್ 3.1 – ಒಟ್ಟಿಗೆ ಹಾಡಿರಿ, ವೃತ್ತ ಹಾಕಿರಿ.

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

- ಭಾಷಾ ವಿಕಾಸ

**ಸಾಮರ್ಥ್ಯ** : ಕಥಾಗೀತೆಗಳಲ್ಲಿರುವ ಸಾಲುಗಳನ್ನು ಚಿತ್ರಗಳೊಂದಿಗೆ ಹೊಂದಿಸಿ ಹೇಳಲು ಸಾಧ್ಯವಾಗುವುದು. (20)

- ಆರೋಗ್ಯ ಅಭ್ಯಾಸಗಳು, ಶುಚಿತ್ವ ಅಭ್ಯಾಸಗಳು ಎಂಬಿವುಗಳ ಕುರಿತು ತಿಳಿಯುವುದು. (36)

**ಆಶಯ** : ಶರೀರವನ್ನು ಶುಚಿಯಾಗಿರಿಸಬೇಕು. (ಸ್ನಾನ ಮಾಡಬೇಕು, ಹಲ್ಲುಜ್ಜಬೇಕು, ಉಗುರು ತೆಗೆಯಬೇಕು, ಶುಚಿಯಾದ ಬಟ್ಟೆಗಳನ್ನು ಧರಿಸಬೇಕು.)

**ಸಾಮಗ್ರಿಗಳು** : ಕಲಸಿದ ಮಣ್ಣು, ಬಕೆಟ್, ನೀರು, ನ್ಯೂಸ್ ಪೇಪರ್, ಬಟ್ಟೆ ಚೂರುಗಳು, ಕ್ರಯೋನ್ಸ್, ಪೆನ್ಸಿಲು.

**ಸಂದರ್ಭ** : ಆಟಿಕೆ ಪುಟ ಸಂಖ್ಯೆ 200 ರಲ್ಲಿರುವ ಕೈ ಬಾಯಿ ಎಂಬ ಪದ್ಯವನ್ನು ಮಂಡಿಸುವ ಸಂದರ್ಭ.

**ಪ್ರಕ್ರಿಯೆ** :

**ಬೊಂಬೆ ನಾಟಕ** : ಕೆಳಗೆ ನೀಡಿರುವ ಕಥೆಯನ್ನು ಬೊಂಬೆ ನಾಟಕವನ್ನಾಗಿ ಅಭಿನಯಿಸುವುದು. (ಸ್ಕ್ರಿಪ್ಟ್ ತಯಾರಿಸಬೇಕು.)

: ಮೀನ ಮತ್ತು ಜೋಜಿ ಮಣ್ಣಿನ ವಡೆ ತಯಾರಿಸಿದರು. ಮಣ್ಣು ಕಲಸಿ ಗೆರಟೆಯಲ್ಲಿ ತುಂಬಿಸಿದರು. ಮೀನ ಮೂರು ವಡೆ ಮಾಡಿದಳು. "ಜೋಜಿ ನೀನು ಎಷ್ಟು ವಡೆ ಮಾಡಿದೆ?" ನೀನೆ ಎಣಿಸಿ ನೋಡು. ಒಂದು, ಎರಡು, ಮೂರು, ನಾಲ್ಕು. ನಾಲ್ಕು ವಡೆ ಮಾಡಿದೆ. ಆಗ ಅಮ್ಮ ಊಟ ಮಾಡಲು ಕರೆದರು. ಅವರು ಊಟಕ್ಕೆ ಹೋದರು. ಅಮ್ಮ ಅನ್ನ ಬಡಿಸಿದರು. ಸಾಂಬಾರು ಎರೆದರು. ಇಬ್ಬರೂ ಊಟ ಆರಂಭಿಸಿದರು. ನಿಲ್ಲಿ.. ನಿಲ್ಲಿ.. ಏನಮ್ಮಾ.. ? ಇಬ್ಬರೂ ಕೈ ತೋರಿಸಿ.. ಕೈ ಶುಚಿಯಾಗಿದೆಯೇ? ನಾನು ಚೆನ್ನಾಗಿ ಕೈ ತೊಳೆದಿದ್ದೇನೆ. ಮೀನ ಹೇಳಿದಳು. ನಾನು ಚೆನ್ನಾಗಿ ಕೈ ಉಜ್ಜಿದ್ದೇನೆ. ಕೈಯಲ್ಲಿ ಕೊಳೆಯೇ ಇಲ್ಲ. ಜೋಜಿ ಹೇಳಿದನು. ಯಾರ ಕೈಗಳು ಶುಚಿಯಾಗಿವೆ? (ಸ್ವತಂತ್ರ ಪ್ರತಿಕ್ರಿಯೆ) ಜೋಜಿ ಕೈಗಳನ್ನು ಮಗುಚಿ ಇಡು. ಜೋಜಿ ಕೈಗಳನ್ನು ಮಗುಚಿ ಇಟ್ಟನು. ಇಕೋ... ನೋಡು. ಮೂವರೂ ನೋಡಿದರು. ಉಗುರುಗಳ ಎಡೆಯಲ್ಲಿ ಕಪ್ಪಾದ ಯಾವುದೋ ವಸ್ತು ಇದೆ. ಮಣ್ಣು! ಅಮ್ಮಾ.. ನಾನು ಕೈ ತೊಳೆದು ಬರುತ್ತೇನೆ. ಮೀನ ನಿನ್ನ ಕೈ ತೋರಿಸು. ಮೀನ ಕೈಗಳನ್ನು ಮಗುಚಿ ಇಟ್ಟಳು. ಉಗುರುಗಳೆಡೆಯಲ್ಲಿ ಮಣ್ಣಿದೆ ನೋಡು.. ನಾನು ಕೈ ತೊಳೆದಿದ್ದೇನೆ. ಮೀನ ಹೇಳಿದಳು. ನೀರಿನಲ್ಲಿ ಮುಳುಗಿಸಿ ತೆಗೆಯುವುದನ್ನು ಕೈ ತೊಳೆಯುವುದೆಂದು ಹೇಳಲು ಸಾಧ್ಯವಿಲ್ಲ. ನೀನು ಮಣ್ಣಿನಲ್ಲಿ ಆಡಲಿಲ್ಲವೇ? ಕೈಯನ್ನು ಚೆನ್ನಾಗಿ ತೊಳೆಯಬೇಕು. ಉಗುರುಗಳನ್ನು ಕತ್ತರಿಸಬೇಕು.

: ಅಮ್ಮ ಒಂದು ಪದ್ಯ ಹಾಡುತ್ತಾರೆ.

- (ಶುಚಿತ್ವಕ್ಕೆ ಸಂಬಂಧಿಸಿದ ಹಾಡು)

ವರ್ಕ್ ಶೀಟ್ 3.1 – ಒಟ್ಟಿಗೆ ಹಾಡಿರಿ, ವೃತ್ತ ಹಾಕಿರಿ. – ನೀಡುವುದು.

**ಅಭಿನಯ** : ಹಾಡಿನ ದೃಶ್ಯಗಳನ್ನು ಹೇಳುವುದಕ್ಕನುಸರಿಸಿ ಅಭಿನಯಿಸುವುದು.

- ಮೀನ ಮತ್ತು ಜೋಜಿ ಏನೇನು ಮಾಡುತ್ತಿದ್ದಾರೆಂಬುದನ್ನು ಮಕ್ಕಳು ಚಿತ್ರ ನೋಡಿ ಹೇಳುವುದು.

**ವೃತ್ತ ಹಾಕುವ** : ಅಧ್ಯಾಪಿಕೆ ಎರಡು ಸಾಲು ಹಾಡುವಾಗ ಆಶಯವಿರುವ ಚಿತ್ರಕ್ಕೆ ವೃತ್ತ ಹಾಕುವುದು.

**ನಿರ್ಮಾಣ** : ಅಧ್ಯಾಪಿಕೆ ಎಲ್ಲರಿಗೂ ಕಲಸಿದ ಮಣ್ಣಿನ ಸಣ್ಣ ಉಂಡೆಯನ್ನು ಕೊಡುತ್ತಾರೆ.

- ಕೈಗಳೆಡೆಯಲ್ಲಿ ಇಟ್ಟು ಒತ್ತಿ ವಡೆ ತಯಾರಿಸುವುದು.
- ಒಂದು ಕಾಗದದಲ್ಲಿ 4 ರಂತೆ ಗುಂಪುಗಳಾಗಿ ಇರಿಸಿ ಪ್ರದರ್ಶಿಸುವುದು. (ಗಣಿತಪರವಾದ ಸಾಧ್ಯತೆಗಳ ಪ್ರಯೋಜನವನ್ನು ಪಡೆಯಬಹುದು.)

- ಬಟ್ಟೆ ತುಂಡಿನಿಂದ ಕೈಗಳನ್ನು ಶುಚಿ ಮಾಡುವುದು.

- ನಂತರ ಪ್ರತಿಯೊಬ್ಬರೂ ಒಂದೊಂದು ಬಟ್ಟಲು ನೀರಿನಲ್ಲಿ ಕೈ ಮುಳುಗಿಸಿ ತೊಳೆಯುವುದು.

- ಶುಚಿಗೊಳಿಸಿದ ಕೈಗಳಲ್ಲೂ ಕೊಳೆ ಇದೆ ಎಂದು ಖಚಿತಪಡಿಸುವುದು.

**ಮೌಲ್ಯಮಾಪನ** : ಪದ್ಯದ ಆಶಯಗಳನ್ನು ಚಿತ್ರಗಳೊಂದಿಗೆ ಹೊಂದಿಸಲು ಸಾಧ್ಯವಾಗುವುದು.

- ಆರೋಗ್ಯ ಅಭ್ಯಾಸಗಳು / ಶುಚಿತ್ವ ಅಭ್ಯಾಸಗಳನ್ನು ಗುರುತಿಸಿ ಹೇಳಲು ಸಾಧ್ಯವಾಗುವುದು.

## ವರ್ಕ್ ಶೀಟ್ 3.2 – ಬದಿಗಿರಿಸಿರಿ ಶುಚಿಗೊಳಿಸಿರಿ

**ವಿಕಾಸ ಮಂಡಲ** : ಸಾಮಾಜಿಕ ಭಾವನಾತ್ಮಕ ವಿಕಾಸ

- ಭಾಷಾ ವಿಕಾಸ

**ಸಾಮರ್ಥ್ಯ** : ಆರೋಗ್ಯ ಶುಚಿತ್ವ ಅಭ್ಯಾಸಗಳ ಕುರಿತು ತಿಳಿಯುವುದು. (47)

- ವಸ್ತುಗಳ ಹಾಗೂ ಘಟನೆಗಳ ಚಿತ್ರಗಳನ್ನು ನಿರೀಕ್ಷಣೆ ಮಾಡಿ ವಿವರಗಳನ್ನೂ ಕಂಡುಕೊಂಡ ಅಂಶಗಳನ್ನೂ ಮಂಡಿಸಲು ಸಾಧ್ಯವಾಗುವುದು. (21)

**ಆಶಯ** : ಮನೆ, ಪರಿಸರ ಮತ್ತು ತರಗತಿಗಳನ್ನು ಶುಚಿಯಾಗಿ ಇರಿಸಬೇಕು.

**ಸಾಮಗ್ರಿಗಳು** : ತರಗತಿಯನ್ನು ಶುಚಿಗೊಳಿಸಲಿರುವ ಉಪಕರಣಗಳು.

**ಸಂದರ್ಭ** : ಶುಚೀಕರಣ ಚಟುವಟಿಕೆಗಳು ಎಂಬ ಚಟುವಟಿಕೆಯ ನಂತರ

**ಪ್ರಕ್ರಿಯೆ** :

**ಆಖ್ಯಾನ** : ತರಗತಿಯಲ್ಲಿ ಮಕ್ಕಳು ಆಟವಾಡುವುದನ್ನು ಕಂಡಾಗ ಮೇಜಿಗೂ ಕುರ್ಚಿಗೂ ಬೆಂಚುಗಳಿಗೂ ಆಟವಾಡಲು ಆಸೆಯಾಯಿತು.ಮೇಜು ಮೆಲ್ಲಮೆಲ್ಲನೆ ಜಾರಿ ಜಾರಿ ಒಂದು ಮೂಲೆಯಲ್ಲಿ ನಿಂತಿತು. ಕುರ್ಚಿಗಳು ಮುಟ್ಟಾಟ ಆಡಿದುವು. ಡಸ್ಟರ್ ಕಪ್ಪೆ ಜಿಗಿತ ಮಾಡಿತು. ಕೆಲೆಂಡರ್ ಗಾಳಿಯಲ್ಲಿ ಸುತ್ತಿ ತಿರುಗಿತು. ಕೊಡೆಗಳು ಹಾರಾಡಿದುವು. ಒಟ್ಟಿನಲ್ಲಿ ಬೊಬ್ಬೆ. ಅಧ್ಯಾಪಿಕೆ ಬಂದರು. ಮಕ್ಕಳು ಬಂದರು. ಏನು ಮಾಡುವುದು ? ಅವುಗಳು ಅಲ್ಲಲ್ಲೇ ಅಲುಗಾಡದೆ ನಿಂತುಕೊಂಡವು. ಎಲ್ಲರೂ ತರಗತಿಯೊಳಗೆ ಬಂದು ನೋಡಿದಾಗ ಎಲ್ಲವೂ ಚೆಲ್ಲಾಪಿಲ್ಲಿಯಾಗಿ ಬಿದ್ದುಕೊಂಡಿವೆ. ಯಾರು ಹೀಗೆಲ್ಲ ಮಾಡಿದ್ದು ? ಎಲ್ಲವನ್ನೂ ಆಯಾ ಸ್ಥಳದಲ್ಲಿ ಇರಿಸಬಹುದೇ ?

ವರ್ಕ್ ಶೀಟ್ 3.2 – ಬದಿಗಿರಿಸಿರಿ ಶುಚಿಗೊಳಿಸಿರಿ – ನೀಡುವುದು.

: ಪ್ರತಿಯೊಂದು ವಸ್ತುವಿನ ಸ್ಥಾನವನ್ನು ಗುರುತಿಸಿ ಗೆರೆ ಎಳೆದು ಜೋಡಿಸುವುದು.

- ಎಲ್ಲರೂ ಚಿತ್ರಿಸಿದ್ದು ಒಂದೇ ರೀತಿಯಾಗಿದೆಯೇ?

- ಗೆರೆ ಎಳೆದು ಜೋಡಿಸಿದುದರ ಯುಕ್ತಿಯನ್ನು ವಿವರಿಸಲು ಅವಕಾಶ ನೀಡುವುದು.

**ಶುಚೀಕರಣ** : ಹಾಗಾದರೆ ನಾವು ನಮ್ಮ ತರಗತಿಯನ್ನು ಶುಚಿಗೊಳಿಸೋಣವೇ?

- ತರಗತಿಯಲ್ಲಿರುವ ವಸ್ತುಗಳನ್ನು ಆಯಾ ಸ್ಥಳದಲ್ಲಿರಿಸುವುದು.

**ಪದ್ಯ** : ಆಗ ಒಂದು ಪದ್ಯ ಕೇಳಿತು. ಮೇಜು ಕುರ್ಚಿಗಳೆಲ್ಲವೂ ಹಾಡುತ್ತಿವೆ.

ಮುಟ್ಟಾಟವಾಡೋಣ<br>
ಡೊಂಕಾಟವಾಡೋಣ<br>
ಗಾಳೀಲಿ ತೇಲಿ ನಡೆಯೋಣ<br>
ಕಪ್ಪೆಯ ತೆರದಲಿ ಜಿಗಿಯೋಣ<br>
ಹಾಡೋಣ ಆಡಿ ಕುಣಿಯೋಣ

: ಮೇಜು, ಕುರ್ಚಿ, ಕೊಡೆ, ಕೆಲೆಂಡರ್ ಎಲ್ಲವೂ ಒಟ್ಟಾಗಿ ಹಾಡಿದುವು. ಚಿಕ್ಕ ಕುರ್ಚಿಗಳು ಕುಣಿದಾಡಿದುವು. ಮಕ್ಕಳು ಕೈ ತಾಳ ಹಾಕಿ

ಆನಂದಿಸಿದರು.

**ಮೌಲ್ಯಮಾಪನ** : ಸರಿಯಾದ ಸ್ಥಾನವನ್ನು ತಿಳಿದು ಗೆರೆ ಎಳೆದು ಜೋಡಿಸಲಾಗಿದೆ.

- ತರಗತಿಯನ್ನು ಶುಚಿಗೊಳಿಸುವುದರಲ್ಲಿರುವ ಭಾಗವಹಿಸುವಿಕೆ.
- ಗೆರೆ ಎಳೆದು ಜೋಡಿಸಿದುದರ ಕಾರಣವನ್ನು ವಿವರಿಸಲು ಸಾಧ್ಯವಾಗುವುದು.

## ವರ್ಕ್ ಶೀಟ್ 3.3 – ನಾನು ಉಪಯೋಗಿಸುವವುಗಳು

**ವಿಕಾಸ ಮಂಡಲ** : ಭಾಷಾ ವಿಕಾಸ

**ಸಾಮರ್ಥ್ಯ** : ಚಿತ್ರಗಳು, ವಸ್ತುಗಳು, ಪ್ರಕೃತಿ ಎಂಬಿವುಗಳನ್ನು ಕಂಡುಹಿಡಿದು ಆಶಯಗಳನ್ನು ಹೇಳಲು ಸಾಧ್ಯವಾಗುವುದು. (14)

**ಆಶಯ** : ಶರೀರವನ್ನು ಶುಚಿಯಾಗಿ ಇರಿಸಬೇಕು.

**ಸಾಮಗ್ರಿಗಳು** : ಸಾಬೂನಿನ ಪೆಟ್ಟಿಗೆ, ಕವರ್, ರೇಪರ್, ಟೂತ್ ಪೇಸ್ಟಿನ ಕವರುಗಳು, ಕತ್ತರಿಗಳು, ಗೋಂದು.

**ಸಂದರ್ಭ** : ಶುಚಿತ್ವ ಅಭ್ಯಾಸಗಳಿಗೆ ಸಂಬಂಧಿಸಿದ ಚರ್ಚೆ, ಆಟಿಕೆಯ 90 ನೇ ಪುಟದ "ಶರೀರ ಶುಚಿತ್ವ ಪಾಲಿಸಲು" ಎಂಬ ಚಟುವಟಿಕೆಯ ಚರ್ಚೆ.

**ಪ್ರಕ್ರಿಯೆ** :

**ಹೆಸರು ಹೇಳುವ** : ಶರೀರ ಶುಚಿತ್ವಕ್ಕೆ ಉಪಯೋಗಿಸುವ ವಸ್ತುಗಳ ಪ್ರದರ್ಶನ (ಸೋಪು, ಪೇಸ್ಟ್, ಬ್ರಶ್, ಚಪ್ಪಲಿ ಕವರುಗಳು, ಲೇಬಲ್, ರಾಪರ್ ಮೊದಲಾದುವುಗಳನ್ನು ಅಧ್ಯಾಪಿಕೆ ಪ್ರದರ್ಶಿಸುವುದು.)

- ಪ್ರತಿಯೊಂದರ ಹೆಸರನ್ನು ಅಧ್ಯಾಪಿಕೆ ಮತ್ತು ಮಕ್ಕಳು ಒಟ್ಟಾಗಿ ಓದುವುದು.

ವರ್ಕ್ ಶೀಟ್ 3.3 – ನಾನು ಉಪಯೋಗಿಸುವವುಗಳು – ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಮಕ್ಕಳು ಏನು ಮಾಡುತ್ತಿದ್ದಾರೆ?

- ಸ್ನಾನ ಮಾಡುವ ಮಗುವಿಗೆ ಅಗತ್ಯವಿರುವ ವಸ್ತುವಿನ ರಾಪರ್ / ಕವರ್ ಎಲ್ಲರೂ ತೆಗೆಯುವರು.
- ಕೆಳಗಿರುವ ಮಗು ಏನು ಮಾಡುತ್ತಿದೆ? ಆ ಮಗುವಿಗೆ ಬೇಕಾದ ವಸ್ತುವಿನ ಕವರ್ ಯಾವುದು?

**ಅಂಟಿಸುವ** : ಮಕ್ಕಳು ಸಂಗ್ರಹಿಸಿ ತಂದ ಲೇಬಲ್, ಕವರುಗಳು ಅಗತ್ಯವಿರುವ ಗಾತ್ರದಲ್ಲಿ ಕತ್ತರಿಸಿ ವರ್ಕ್ ಶೀಟುಗಳಲ್ಲಿ ಸೂಕ್ತವಾದ ಕೋಣೆಯಲ್ಲಿ ಅಂಟಿಸುವುದು.

- ಸ್ವತಹ ಹಾಗೂ ಪರಸ್ಪರ ಲೇಬಲುಗಳನ್ನು ಕೈ ಬದಲಾಯಿಸಿ ಊಹಿಸಿ ಹೇಳುವುದು.

**ಮೌಲ್ಯಮಾಪನ** : ಕವರುಗಳನ್ನೂ ರಾಪರುಗಳನ್ನೂ ಸಂಗ್ರಹಿಸಲಾಗಿದೆ.

- ಓದಿನ ಪೂರ್ವ ಚಟುವಟಿಕೆಯಲ್ಲಿ ತೊಡಗಲು ಸಾಧ್ಯವಾಗಿದೆ.
- ಚಿತ್ರಕ್ಕೆ ಯೋಗ್ಯವಾದವುಗಳನ್ನೇ ಅಂಟಿಸಲಾಗಿದೆ.

## ವರ್ಕ್ ಶೀಟ್ 3.4 – ಯಾವ ದಾರಿಯಲ್ಲಿ ಹೋಗಬೇಕು?

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಆರೋಗ್ಯ ಶುಚಿತ್ವ ಅಭ್ಯಾಸಗಳ ಕುರಿತು ತಿಳಿಯುವುದು.(36)

**ಆಶಯ** : ಶರೀರವನ್ನು ಶುಚಿಯಾಗಿ ಇರಿಸಬೇಕು.

- ಶುಚಿತ್ವವನ್ನು ಕಾಪಾಡದಿದ್ದರೆ ರೋಗಗಳು ಬರಬಹುದು.

**ಸಾಮಗ್ರಿಗಳು** : ವರ್ಕ್ ಶೀಟು

**ಸಂದರ್ಭ** : ಥೀಮಿನ ಮೌಲ್ಯಮಾಪನ ಚಟುವಟಿಕೆಯಾಗಿ ಮಂಡಿಸಬಹುದು

**ಪ್ರಕ್ರಿಯೆ** :

ವರ್ಕ್ ಶೀಟ್ 3.4 – ಯಾವ ದಾರಿಯಲ್ಲಿ ಹೋಗಬೇಕು? – ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಏನೇನಿದೆ?

- ಪ್ರತಿಯೊಂದು ಮಗು ಯಾವ ಯಾವ ಕಾರ್ಯವನ್ನು ಮಾಡುತ್ತಿದೆ?

- ವರ್ಕ್ ಶೀಟಿನ ದಾರಿಯನ್ನು ಪರಿಚಯಿಸುವುದು.

- ಯಾವ ದಾರಿಯಿಂದಾಗಿ ನಿಮಗೆ ಇಷ್ಟ?

- ಆಯ್ಕೆ ಮಾಡಿದ ದಾರಿಗೆ ಬಣ್ಣ ಹಚ್ಚುವುದು.

- ಬಣ್ಣ ಹಚ್ಚಿದ ದಾರಿ, ಆಯ್ಕೆ ಮಾಡಲು ಕಾರಣವೇನು ಎಂಬುದನ್ನು ವಿವರಿಸುವುದು.

**ಮೌಲ್ಯಮಾಪನ** : ಸರಿಯಾದ ದಾರಿಯನ್ನು ಆಯ್ಕೆ ಮಾಡಲಾಗಿದೆ.

- ಯಾಕಾಗಿ ಎಂಬುದನ್ನು ವಿವರಿಸಲು ಸಾಧ್ಯವಾಗಿದೆ.

- ದಾರಿಗೆ ನಿಖರವಾಗಿ ಬಣ್ಣ ಹಚ್ಚಲು ಸಾಧ್ಯವಾಗಿದೆ.

# ಥೀಂ 4 – ಮಳೆ ಮತ್ತು ಹವಾಮಾನ

ನಿರ್ಮಾಣ ಚಟುವಟಿಕೆಗಳಿಗೆ ಸಂಬಂಧಿಸಿದ ವರ್ಕ್ ಶೀಟುಗಳನ್ನು ನೀಡುವಾಗ ಮಕ್ಕಳಿಗೆ ಹೆಚ್ಚಿನ ಬೆಂಬಲದ ಅಗತ್ಯವಿದೆ. ಅವರ ವೇಗವು ಕಡಿಮೆಯಾಗಿರಬಹುದು. ಒಂದೊಂದೇ ಸೂಚನೆಯನ್ನು ನೀಡಿ ಅದನ್ನು ಎಲ್ಲರೂ ಪೂರ್ತಿಗೊಳಿಸಿದರು ಎಂದು ಖಚಿತಪಡಿಸಿದ ನಂತರ ಮುಂದಿನದ್ದಕ್ಕೆ ಹೋಗಬೇಕು. ಕೆಲವೊಮ್ಮೆ ಮಾದರಿಗಳನ್ನು ತೋರಿಸಬೇಕಾಗಿ ಬರಬಹುದು. ಸಮಸ್ಯೆಯನ್ನು ಎದುರಿಸುವ ಮಕ್ಕಳಿಗೆ ಬೆಂಬಲದ ಅಗತ್ಯವಿದೆ. ಅಲ್ಲದೆ ಉತ್ಪನ್ನಗಳನ್ನು ಅಧ್ಯಾಪಿಕೆಯು ಮಾಡಿಕೊಡುವುದಲ್ಲ. ಸಾಮರ್ಥ್ಯವು ವಿಕಾಸ ಹೊಂದಬೇಕಾದುದು ಮಗುವಿನದ್ದು ಎಂಬ ವಿಚಾರವನ್ನು ಮರೆಯಬಾರದು. ಕೆಲವು ಹೊಸ ಚಟುವಟಿಕಾ ಸೂಚನೆಗಳನ್ನು ಇಲ್ಲಿ ಕೊಡಲಾಗಿದೆ. ಇದು ಎಲ್ಲಾ ವಿಕಾಸ ಮಂಡಲಗಳಿಗೂ ಪರಿಗಣನೆ ಲಭಿಸುವುದಕ್ಕಾಗಿದೆ. ಯೋಗ್ಯವಾದವುಗಳ ಪ್ರಯೋಜನವನ್ನು ಪಡೆಯಬೇಕು.

### ಚಟುವಟಿಕಾ ಕ್ರಮ

1. ಬೇಸಗೆ ಕಾಲ - ಕಥೆ
2. ವರ್ಕ್ ಶೀಟು 4.1 "ದಾರಿ ಕಂಡುಹಿಡಿಯುವ" (ಹತ್ತಿರ / ದೂರ)
3. ಮಳೆ ಹಾಡು - 1
4. ಕೊಡೆಯ ಚಿತ್ರ ರಚನೆ (ಸ್ಟೆನ್ಸಿಲ್) ಬಣ್ಣ ನೀಡುವುದು.
5. ಕೊಡೆಗಳೆಷ್ಟು? ಎಣಿಸುವುದು, ಗುಂಪು ಮಾಡುವುದು.
6. ಕೊಡೆಯಲ್ಲಿ ಮಳೆ ಚಿತ್ರ ಬಿಡಿಸುವುದು.
7. ಕೊಲೇಷ್ ಕೊಡೆ - ವರ್ಕ್ ಶೀಟು 4.2 "ಚಿತ್ರ ಬಿಡಿಸುವ, ಅಂಟಿಸುವ"
8. ಕೊಡೆಯೊಳಗೆ ಸೇರುವ ಆಟ
9. ಮಳೆ ಹಾಡು - 2
10. ಮಳೆ ಯಾತ್ರೆಯ ಅನುಭವ ಹೇಳುವುದು.
11. ವರ್ಕ್ ಶೀಟು 4.3 "ಆಟದ ದೋಣಿ"
12. ದೋಣಿ ನಿರ್ಮಾಣ (ಒರಿಗಾಮಿ)
13. ದೋಣಿಗಳನ್ನು ಗುಂಪು ಮಾಡುವುದು. (3 ರ ವರೆಗೆ) ಹೆಚ್ಚು / ಕಡಿಮೆ ಕಂಡುಕೊಳ್ಳುವುದು.
14. ಜಿಗ್ಸೋ ಪಸಲ್ (ದೋಣಿ, ಕೊಡೆ, ಮೀನು)
15. ನೆಲದಲ್ಲಿ ಚಿತ್ರ ರಚನೆ. (ದೋಣಿ, ನದಿ, ಮೀನು)
16. ಕಥೆ - ಮಣ್ಣಿನ ಹೇಂಟೆ ಮತ್ತು ತರಗೆಲೆ
17. ಬಿಸಿ ಮತ್ತು ತಂಪು ಮುಟ್ಟಿ ತಿಳಿಯುವ (ಬಿಸಿನೀರು, ತಣ್ಣೀರು, ಐಸ್ ನೀರು)

18. ಮಳೆಗಾಲದ ದೃಶ್ಯಗಳು, ಅನುಭವಗಳನ್ನು ಹೇಳುವುದು.

19. ವರ್ಕ್ ಶೀಟು 4.4 "ಆಹಾ..ಮಳೆ"

20. ಮಳೆ ಹಾಡು - 3

21. ಮಳೆನೀರಿನಲ್ಲಿ ಬಿದ್ದ ಇರುವೆ. ಕಥೆ ಕಂಡುಹಿಡಿಯುವುದು. ವರ್ಕ್ ಶೀಟು 4.5 "ಕಥೆ ಹೇಳಬಹುದೇ?"

22. ಮಳೆ ನೃತ್ಯ / ಏರೋಬಿಕ್ಸ್ ಹೆಜ್ಜೆಗಳನ್ನಿಡುವುದು.

23. ಕೊಡೆಯಿಲ್ಲದವರಿಗೆ ಕೊಡೆ ನೀಡುವುದು - ನಿರ್ಮಾಣ. (ಬಟಾಟೆ / ನೀರುಳ್ಳಿ / ಕೇರೆಟ್ / ಕೊಡಯ ಆಕೃತಿಯಲ್ಲಿ ಕತ್ತರಿಸಿ ಬಣ್ಣದಲ್ಲಿ ಮುಳುಗಿಸಿ ಪ್ರಿಂಟ್ ಮಾಡುವುದು.)

24. ಚಿತ್ರ (ಕೊಡೆ) ಉಪಯೋಗಿಸಿ ಮೇಲೆ / ಕೆಳಗೆ ಮಂಡನೆ. ಕೊಡೆ, ಟೊಪ್ಪಿ, ಮಳೆ ಅಂಗಿ ಉಪಯೋಗ ಹೇಳುವುದು.

25. ಮಳೆಯಲ್ಲಿ / ನೀರಿನಲ್ಲಿ / ಕೆಸರಿನಲ್ಲಿ ನಡೆಯುವ ಅನುಭವವನ್ನು ಅಭಿನಯಿಸುವುದು.

26. ಪ್ರಶ್ನೋತ್ತರ ಪದ್ಯ

27. ದೋಣಿ ನಡೆಸುವ ಆಟ

28. ಒಗಟುಗಳನ್ನು ಹೇಳಿ ಆಡುವ ಆಟ (ಮೀನು, ಕಪ್ಪೆ, ಕೊಡೆ, ...) ಬಯಲು ಪ್ರವಾಸ (ಮಳೆಗಾಲದ ಬದಲಾವಣೆಗಳು, ಸಸ್ಯಗಳ ಬೆಳವಣಿಗೆ, ಪ್ರಾಣಿಗಳು, ...)

29. ವರ್ಕ್ ಶೀಟು 4.6 "ಮಳೆಗಾಲವೂ.. ಬೇಸಗೆಕಾಲವೂ.." ವ್ಯತ್ಯಾಸ ಕಂಡುಹಿಡಿಯುವುದು.

30. ಚಿತ್ರ ವಿವರಣೆ (ವರ್ಕ್ ಶೀಟು 4.6)

31. ಗುಂಪು ಹಾಡು (ಮಳೆ / ದೋಣಿ ಹಾಡು) ತಾಳ ಬಡಿದು ಹಾಡುವುದು.

32. ಪೇಪರ್ ಕೊಡೆ ನಿರ್ಮಾಣ. (ಕಪ್ಪು ಕಾಗದದಲ್ಲಿ ಕತ್ತರಿಸಿ ತೆಗೆದ ತುಂಡುಗಳನ್ನು ಸೇರಿಸಿ ಅಂಟಿಸಿ)

33. ಕೊಡೆ ಆಲ್ಬಂ (ಹಲವು ಬಗೆಯ ಕೊಡೆಗಳ ಚಿತ್ರಗಳನ್ನು ಸಂಗ್ರಹಿಸುವುದು / ಕತ್ತರಿಯಿಂದ ಕತ್ತರಿಸುವುದು / ಅಂಟಿಸುವುದು)

34. ವರ್ಕ್ ಶೀಟು 4.7 "ಗಾಳಿಯ ತುಂಟತನ" ಕಥೆ ಹೇಳಿ ಬಾಕಿ ಪೂರ್ತಿಗೊಳಿಸುವುದು.

## ವರ್ಕ್ ಶೀಟ್ 4.1 – ದಾರಿ ಕಂಡುಹಿಡಿಯುವ

**ವಿಕಾಸ ಮಂಡಲ** : ದೈಹಿಕ ಚಲನಾತ್ಮಕ ವಿಕಾಸ
- ಭಾಷಾ ವಿಕಾಸ

**ಸಾಮರ್ಥ್ಯ** : ಲೇಖನ ಪೂರ್ವ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುವುದು. (13)
- ವಸ್ತುಗಳ ಹಾಗೂ ಘಟನೆಗಳ ಚಿತ್ರಗಳನ್ನು ನಿರೀಕ್ಷಣೆ ಮಾಡಿ ವಿವರಗಳನ್ನೂ ಕಂಡುಕೊಂಡ ಅಂಶಗಳನ್ನೂ ಮಂಡಿಸಲು ಸಾಧ್ಯವಾಗುವುದು.(21)

**ಆಶಯ** : ಮಳೆಯಿರುವ ಕಾಲವೂ ಮಳೆಯಿಲ್ಲದ ಕಾಲವೂ ಇವೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್

ಪ್ರಕ್ರಿಯೆ :

ಆಖ್ಯಾನ : ಬೇಸಗೆ ಕಾಲ ಬಂತು. ಕಠಿಣವಾದ ಸೆಕೆ. ಮರಗಳ ಎಲೆಗಳು ಉದುರಿದುವು. ಕೆರೆಗಳು ಬತ್ತಿ ಬರಡಾದುವು. ಇನ್ನು ನೀರು ಸ್ವಲ್ಪವೇ ಇರುವುದು. ಮೀನುಗಳು ಕಂಗಾಲಾದುವು. ಮಕ್ಕಳೇ ನಮಗೆ ಸಾಯುವ ಕಾಲ ಬಂತು. ಏನು ಮಾಡುವುದು ? ಮೀನಮ್ಮ ಹೇಳಿತು. ತನ್ನ ಗೆಳೆಯರಾದ ಮೀನುಗಳ ಸಂಕಟವನ್ನು ಆಮೆಯು ಕಂಡಿತು. ಬತ್ತಿ ಬರಡಾದ ಕೆರೆಯಲ್ಲಿ ಅವರು ಬದುಕುವುದು ಹೇಗೆ ? ಆಮೆ ಒಂದು ದಾರಿ ಕಂಡುಹಿಡಿಯಿತು. ದೂರದಲ್ಲಿರುವ ಕೆರೆಯೊಂದಕ್ಕೆ ಅವರನ್ನು ಕರೆದೊಯ್ಯಿತು. ಮೀನುಗಳಿಗೆ ಸಂತೋಷವಾಯಿತು.

: ಮೀನಮ್ಮ ಮತ್ತು ಮಕ್ಕಳನ್ನು ಕೆರೆಗೆ ತಲುಪಿಸಿರಿ.

ವರ್ಕ್ ಶೀಟ್ 4.1 – ದಾರಿ ಕಂಡುಹಿಡಿಯುವ – ನೀಡುವುದು.

**:** ಕಥೆಯ ಸಂದರ್ಭಗಳಿಗೆ ಸಂಬಂಧಿಸಿ ಮಾತನಾಡುವುದು. ವರ್ಕ್ ಶೀಟಿನಲ್ಲಿ ಕಾಣುವುದನ್ನು ಹೇಳುವುದು.

- ಮೀನುಗಳು ಕೆರೆಗೆ ಹೋದ ದಾರಿ ಗೆರೆಯೆಳೆದು ತೋರಿಸುವುದು.
- ಚಿತ್ರಗಳನ್ನು ಪರಸ್ಪರ ಕಾಣುವುದು ಮತ್ತು ಸ್ವತಂತ್ರವಾಗಿ ಮಾತನಾಡುವುದು.

ಮೌಲ್ಯಮಾಪನ : ಸರಿಯಾದ ದಾರಿಯನ್ನು ಕಂಡುಕೊಳ್ಳಲಾಗಿದೆ.

- ಚಿತ್ರದಲ್ಲಿರುವ ವಿಚಾರಗಳನ್ನು ಸ್ವಂತ ವಾಕ್ಯದಲ್ಲಿ ಹೇಳಲು ಸಾಧ್ಯವಾಗಿದೆ.

## ವರ್ಕ್ ಶೀಟ್ 4.2 – ಚಿತ್ರ ಬಿಡಿಸುವ ಅಂಟಿಸುವ

**ವಿಕಾಸ ಮಂಡಲ** : ಸೃಜನಾತ್ಮಕ - ಸೌಂದರ್ಯಾತ್ಮಕ ವಿಕಾಸ

- ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಉಪಯೋಗ ಶೂನ್ಯ ವಸ್ತುಗಳನ್ನು (ಕಾಗದ) ಉಪಯೋಗಿಸಿ ಕೊಲೇಶ್ ನಿರ್ಮಿಸಲು ಸಾಧ್ಯವಾಗುವುದು. (84)

**ಆಶಯ** : ಮಳೆ ಇರುವ ಕಾಲವೂ ಮಳೆ ಇಲ್ಲದ ಕಾಲವೂ ಇವೆ.

**ಸಾಮಗ್ರಿಗಳು** : ಪೆನ್ಸಿಲು, ಬಣ್ಣದ ಕಾಗದದ ತುಂಡುಗಳು, ಕ್ರಯೋನ್ಸ್, ಗೋಂದು.

**ಸಂದರ್ಭ** : ಕೊಡೆಯಲ್ಲಿ ಮಳೆಯನ್ನು ಚಿತ್ರಿಸುವ ಚಟುವಟಿಕೆಯ ನಂತರ

**ಪ್ರಕ್ರಿಯೆ** :

**ಆಖ್ಯಾನ** : ಷಹ್ಲಳಿಗೆ ಅವಳ ಉಪ್ಪ ಒಂದು ಬಹುಮಾನವನ್ನು ತಂದರು. ಕಾಗದದಲ್ಲಿ ಕಟ್ಟಿರುವ ಉದ್ದದ ಒಂದು ಬಹುಮಾನ. ಅವಳು ಕಟ್ಟನ್ನು ಬಿಚ್ಚಿದಳು. ಸಂತೋಷದಿಂದ ಕುಣಿದಾಡಿದಳು. "ಉಮ್ಮ, ಹಾಯ್.. ಕೊಡೆ. ಹಲವು ಬಣ್ಣಗಳಿರುವ ಕೊಡೆ.."

ವರ್ಕ್ ಶೀಟ್ 4.2 – ಚಿತ್ರ ಬಿಡಿಸುವ ಅಂಟಿಸುವ – ನೀಡುವುದು.

**:** ಷಹ್ಲಳ ಕೊಡೆಯನ್ನು ಬಣ್ಣದ ಕಾಗದಗಳನ್ನು ಅಂಟಿಸಿ ಅಂದಗೊಳಿಸಿರಿ.

- ನಾವೂ ಕೊಡೆಯನ್ನು ಅಲಂಕರಿಸೋಣ. ಅಧ್ಯಾಪಿಕೆ ಬಣ್ಣದ ಕಾಗದಗಳನ್ನು ನೀಡುವರು.
- ಅಧ್ಯಾಪಿಕೆಯ ಸೂಚನೆಯಂತೆ ಮಕ್ಕಳು ಬಣ್ಣದ ಕಾಗದಗಳನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಹರಿಯುವರು.
- ಹರಿದ ಕಾಗದದ ತುಂಡುಗಳನ್ನು ಕೊಡೆಯಲ್ಲಿ ಅಂಟಿಸುವುದು.
- ಚಿತ್ರವನ್ನು ಪ್ರದರ್ಶಿಸುವುದು.
- ತುಂಬಾ ಅಂದವಾದ ಕೊಡೆ ಯಾರದ್ದು?

**ಆಖ್ಯಾನ** **:** "ನಾನು ಮಳೆ ನೆನೆಯುವುದಿಲ್ಲ. ಬಣ್ಣ ಹೋಗಬಹುದು, ಅಂದವೂ ಹೋಗಬಹುದು." ಬಣ್ಣದ ಕೊಡೆ ಹೇಳಿತು. ಕೊಡೆಯ ಅಂದ ಕೆಡದಿರಲು ಷಹ್ಲ ಮಳೆಗಾಲದಲ್ಲಿ ಕೊಡೆಯನ್ನು ತೆಗೆಯಲೇ ಇಲ್ಲ. ಬೇಸಗೆಕಾಲ ಬಂತು ಎಂದು ಕೊಡೆ ಹೇಳಿತು. ನಾನು ಬಿಸಿಲು ತಾಗಲು

ಬರುವುದಿಲ್ಲ. ಬಣ್ಣ ಹೋಗಬಹುದು. ಅಂದ ಕೆಡಬಹುದು. ಷಹ್ಲ ಬೇಸಗೆಯಲ್ಲಿಯೂ ಕೊಡೆಯನ್ನು ತೆಗೆಯಲಿಲ್ಲ. ಕೊಡೆ ಒಂದು ಮೂಲೆಯಲ್ಲಿ ಆರಾಮವಾಗಿ ಕುಳಿತಿತು. ಒಂದು ದಿನ ಅವಳು ಕೊಡೆಯನ್ನು ಬಿಡಿಸಿದಳು. ಕೊಡೆಯ ತುಂಬಾ ತೂತುಗಳು, ಇಲಿ, ಜಿರಳೆಗಳು ತಿಂದದ್ದು. ಕೊಡೆಯು ಗೋಳೋ ಎಂದು ಅತ್ತಿತು. ಮಳೆ ತಾಗದೆ, ಬಿಸಿಲು ತಾಗದೆ ಸೋಮಾರಿಯಾಗಿ ಕುಳಿತು ಈ ಗತಿಯಾಯಿತು... ಅಯ್ಯೋ...

**ಮೌಲ್ಯಮಾಪನ** : ಕಾಗದದ ತುಂಡುಗಳನ್ನು ಸೂಕ್ಷ್ಮವಾಗಿ ಕೊಡೆಯ ಔಟ್ ಲೈನಿನ ಒಳಗೆ ಅಂದವಾಗಿ ಅಂಟಿಸಿ ಕೊಲೇಶ್ ನಿರ್ಮಿಸಲು ಸಾಧ್ಯವಾಗಿದೆ.

## ವರ್ಕ್ ಶೀಟ್ 4.3 – ಆಟದ ದೋಣಿ

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

- ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ

**ಸಾಮರ್ಥ್ಯ** : ಜೀವಿಗಳು, ಶಲಭಗಳು, ಪ್ರಾಣಿಗಳು, ಪಕ್ಷಿಗಳು ಎಂಬಿವುಗಳನ್ನು ಗುರುತಿಸಿ ಹೇಳಲು ಸಾಧ್ಯವಾಗುವುದು. (34)

- ಪ್ರಕೃತಿಯನ್ನು ಆಸ್ವಾದಿಸುವುದಕ್ಕೂ ಚಿತ್ರಗಳಿಗೆ ಬಣ್ಣ ಹಚ್ಚುವುದಕ್ಕೂ ಸಾಧ್ಯವಾಗುವುದು.
- ವಸ್ತುಗಳು ಮತ್ತು ಎಣಿಕೆಯನ್ನು ಹೊಂದಿಸಲು ಸಾಧ್ಯವಾಗುವುದು.(44)

**ಆಶಯ** : ಮಳೆಗಾಲದಲ್ಲಿ ನೀರು ಧಾರಾಳವಾಗಿ ಲಭಿಸುವುದು.

**ಸಾಮಗ್ರಿಗಳು** : ವರ್ಕ್ ಶೀಟುಗಳು, ಕ್ರಯೋನ್ಸ್

**ಸಂದರ್ಭ** : ಕೊಡೆಯಲ್ಲಿ ಸೇರುವ ಆಟ, ಮಳೆಹಾಡು, ಮಳೆಗಾಲದ ಅನುಭವ, ಮಳೆಕಥೆಗಳನ್ನು ಹೇಳುವುದು ಎಂಬಿವುಗಳ ನಂತರ.

**ಪ್ರಕ್ರಿಯೆ** :

**ಆಖ್ಯಾನ** : ಮಳೆ ಸುರಿಯಿತು. ಎಲ್ಲೆಲ್ಲೂ ನೀರು. ಹೊಳೆ, ತೋಡು, ಬಯಲುಗಳಲ್ಲಿ ತುಂಬಿ ಹರಿಯಿತು. ಅಂಗಳ ತುಂಬಾ ನೀರು. ಷಹ್ಲ ಮತ್ತು ಸೋನು ಆಟದ ದೋಣಿಯನ್ನು ನಿರ್ಮಿಸಿದರು. ನೀರಿನಲ್ಲಿ ತೇಲಿಬಿಟ್ಟರು. ದೋಣಿ ತೇಲುತ್ತಾ ಹೋಯಿತು. ಗಾಳಿಗೆ ಸಿಲುಕಿ ದೋಣಿಯು ದಡಕ್ಕೆ ಬಂತು. 'ಹಾಯ್ ದೋಣಿ' "ನಾನು ಇದರಲ್ಲಿ ಕುಳಿತುಕೊಳ್ಳಲೇ?" ಅಳಿಲು ಮರಿ ಕೇಳಿತು. ''ನಾನೂ ಬರುತ್ತೇನೆ'' ಪುಟ್ಟಿರುವೆ ಹೇಳಿತು. ಗಾಳಿ ಬೀಸಿತು. ದೋಣಿ ಮುಂದೆ ಸಾಗಿತು. ಆಟದ ದೋಣಿ ದೊಡ್ಡ ನದಿಗೆ ತಲುಪಿತು. ನದಿಯ ಮೂಲಕ ಒಂದು ಪ್ರಯಾಣ. ಅವರು ಕೆಳಗೆ ನೀರಿನಲ್ಲಿ ನೋಡಿದರು. ಯಾರನ್ನೆಲ್ಲ ಕಂಡಿರಬಹುದು?

ವರ್ಕ್ ಶೀಟ್ 4.3 – ಆಟದ ದೋಣಿ – ನೀಡುವುದು.

**ಚಿತ್ರ ಓದು** : ಹೆಚ್ಚು ಜೀವಿಗಳುಇರುವುದು ದೋಣಿಯಲ್ಲಿಯೋ? ನೀರಿನಲ್ಲಿಯೋ?

**ಬಣ್ಣ ನೀಡುವ** : ದೋಣಿಗೂ ಅದರಲ್ಲಿ ಪ್ರಯಾಣಿಸುವವರಿಗೂ ಬಣ್ಣ ನೀಡಲಿ.

**ಆಖ್ಯಾನ** : ನೀರಿನೆಡೆಗೆ ನೋಡಿದ ಅಳಿಲುಮರಿಗೆ ಭಯವಾಯಿತು. ಒಂದು ಮೊಸಳೆ... ಅದು ದೋಣಿಯ ಹತ್ತಿರಕ್ಕೆ ಬರುತ್ತಿದೆ. ಏನು ಮಾಡುವುದು? ಅವರು ದೋಣಿಯನ್ನು ಬೇಗ ಬೇಗನೆ ನಡೆಸಿದರು. ಮೊಸಳೆಯೂ ವೇಗವಾಗಿ ಈಜಿತು. ಆಗ ಪುಟ್ಟಿರುವೆ ಗಾಳಿಯನ್ನು ಕರೆಯಿತು. ಗಾಳಿ ಬಂತು. ದೋಣಿಯನ್ನು ಎತ್ತಿಕೊಂಡು ಹೋಗಿ ದೂರದ ದಡದ ಸಮೀಪ ಇಟ್ಟಿತು. ಮೀನುಗಳು ಬಂದು ದೋಣಿಯನ್ನು ದೂಡಿ ದಡಕ್ಕೆ ತಲುಪಿಸಿದುವು.

**ಮೌಲ್ಯಮಾಪನ** : ಚಿತ್ರದಲ್ಲಿರುವ ಜೀವಿಗಳನ್ನು ಗುರುತಿಸಲು ಸಾಧ್ಯವಾಗುವುದು.

- ಚಿತ್ರಗಳಿಗೆ ಬಣ್ಣ ಹಚ್ಚಿದುದರ ಹಿರಿಮೆ.
- ಹೆಚ್ಚು / ಕಡಿಮೆ ಕಂಡುಕೊಳ್ಳಲು ಸಾಧ್ಯವಾಗುವುದು.

## ವರ್ಕ್ ಶೀಟ್ 4.4 – ಆಹಾ.. ಮಳೆ

**ವಿಕಾಸ ಮಂಡಲ** : ಭಾಷಾ ವಿಕಾಸ

- ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ

**ಸಾಮರ್ಥ್ಯ** : ಸುತ್ತಮುತ್ತಲಿರುವ ವಸ್ತುಗಳು, ಘಟನೆಗಳು, ತನ್ನ ಅನುಭವಗಳು, ಆವಸ್ಥೆಗಳು ಎಂಬಿವುಗಳ ವಿಶೇಷತೆಗಳನ್ನು ಸ್ವಂತ ಅನುಭವಗಳ ಆಧಾರದಲ್ಲಿ ಪರಸ್ಪರ ಹೊಂದಿಸಿ ಹೇಳಲು ಸಾಧ್ಯವಾಗುವುದು. (36)

- ಪ್ರಕೃತಿಯನ್ನು ಆಸ್ವಾದಿಸುವುದಕ್ಕೂ ಚಿತ್ರಕ್ಕೆ ಬಣ್ಣ ಹಚ್ಚುವುದಕ್ಕೂ ಸಾಧ್ಯವಾಗುವುದು. (80)

**ಆಶಯ** : ಮಳೆ ಇರುವ ಕಾಲವೂ ಮಳೆ ಇಲ್ಲದ ಕಾಲವೂ ಇವೆ.

- ಮಳೆಗಾಲದಲ್ಲಿ ಗಿಡಗಳು ಬೆಳೆಯುತ್ತವೆ, ಚಿಗುರುತ್ತವೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್, ಬಣ್ಣ, ಈಯರ್ ಬಡ್ಸ್

**ಸಂದರ್ಭ** : ಮಳೆಗಾಲದಲ್ಲಿ ಕಾಣುವ ಬದಲಾವಣೆಗಳು, ಅನುಭವಗಳನ್ನು ಹೇಳುವುದು ಎಂಬ ಚಟುವಟಿಕೆಗೆ ಸಂಬಂಧಿಸಿ.

**ಪ್ರಕ್ರಿಯೆ** :

**ಆಖ್ಯಾನ** : ಸೋನು ಮತ್ತು ಷಹ್ಲ ತೋಡಿನ ಬಳಿಗೆ ತಲುಪಿದರು. "ನಿನ್ನೆಗಿಂತ ನೀರು ಹೆಚ್ಚಾಗಿದೆಯಲ್ಲಾ.." ಸೋನು ಹೇಳಿದಳು. "ಹಾಯ್, ಅಕಾಶದಲ್ಲಿ ನೋಡು, ಮಳೆಬಿಲ್ಲು.."

ತೋಡಿನಲ್ಲಿಯೂ ದಡದಲ್ಲಿಯೂ ಯಾವೆಲ್ಲ ಜೀವಿಗಳು ? ಗಿಡಗಳು ? ಒಳ್ಳೆಯ ದೃಶ್ಯ...

ಸೋನು ಮತ್ತು ಷಹ್ಲ ಕಂಡ ದೃಶ್ಯಗಳನ್ನು ಬರೆಯಿರಿ.

ವರ್ಕ್ ಶೀಟ್ 4.4 – ಆಹಾ.. ಮಳೆ – ನೀಡುವುದು.

**ಚಿತ್ರ ಓದು, ಆಟ** : ಚಿತ್ರದಲ್ಲಿರುವ ವಿಚಾರಗಳನ್ನು ಗಮನಕ್ಕೆ ತರುವಂತಹ ಒಂದು ಆಟದಿಂದ ಆರಂಭಿಸುವ.

ಉದಾ - ನಾನು ಇದರಲ್ಲಿದ್ದೇನೆ.

ನನ್ನ ಮೊದಲನೇ ಅಕ್ಷರ 'ಕ'

- ನಂತರ ಮಕ್ಕಳು ಈ ರೀತಿಯ ಪ್ರಶ್ನೆಗಳನ್ನು ಪರಸ್ಪರ ಕೇಳುವುದು.

**ಬಣ್ಣ ನೀಡುವ** : ನಂತರ ಚಿತ್ರಕ್ಕೆ ಬಣ್ಣ ನೀಡಿ ಅಂದಗೊಳಿಸಲಿ.

- ಕ್ರಯೋನ್ಸ್, ಬಣ್ಣ, ಇಯರ್ ಬಡ್ಸ್ ಎಂಬಿವುಗಳನ್ನು ನೀಡುವುದು.

**ಅನುಭವ ಹೇಳುವ** : ಚಿತ್ರದಲ್ಲಿರುವ ದೃಶ್ಯಗಳಿಗೆ ಸಂಬಂಧಿಸಿದ ಅನುಭವಗಳನ್ನು ಹೇಳಲು ಅವಕಾಶ ನೀಡುವುದು. (ಉದಾ - ನೀರಿನಲ್ಲಿ ಮೀನುಗಳನ್ನು ಕಂಡದ್ದು, ಕಪ್ಪೆಗಳೊಂದಿಗೆ ಆಹಾರದ ಆನುಭವ, ಮಳೆಬಿಲ್ಲು ಕಂಡದ್ದು..)

**ಅಧ್ಯಾಪಿಕೆಗೆ** : ಮಕ್ಕಳು ಹೆಚ್ಚು ಹೆಚ್ಚು ವಿಷಯಗಳನ್ನು ಹೇಳುವಂತೆ ಪ್ರೋತ್ಸಾಹಿಸಲು ಅಗತ್ಯವಿರುವ ಪ್ರಶ್ನೆಗಳನ್ನು ಕೇಳಬೇಕು.

**ಮೌಲ್ಯಮಾಪನ** : ಚಿತ್ರದಲ್ಲಿರುವ ವಿಷಯಗಳನ್ನು ಹೇಳಲು ಸಾಧ್ಯವಾಗುವುದು.

- ಸ್ವಂತ ಅನುಭವಗಳೊಂದಿಗೆ ಹೊಂದಿಸಿಕೊಂಡು ಮಾತನಾಡಲು ಸಾಧ್ಯವಾಗುವುದು.
- ಆಕರ್ಷಕವಾಗಿ ಬಣ್ಣ ಹಚ್ಚಲು ಸಾಧ್ಯವಾಗುವುದು.

## ವರ್ಕ್ ಶೀಟ್ 4.5 – ಕಥೆ ಹೇಳಬಹುದೇ?

**ವಿಕಾಸ ಮಂಡಲ** : ಭಾಷಾ ವಿಕಾಸ

**ಸಾಮರ್ಥ್ಯ** : ಚಿತ್ರಕಥೆಗಳನ್ನು ವೀಕ್ಷಿಸಿ ಕಥೆಯನ್ನು ಊಹಿಸಿ ಹೇಳಲು ಸಾಧ್ಯವಾಗುವುದು. (18)

- ತನ್ನ ಚಿಂತನೆಗಳು, ಭಾವನೆಗಳು ಎಂಬಿವುಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗುವುದು. (26)

**ಆಶಯ** : ಮಳೆ ಬರುವಾಗ ಧಾರಾಳ ನೀರು ಲಭಿಸುವುದು.

- ಮಳೆಯೊಂದಿಗೆ ಗಾಳಿ, ಸಿಡಿಲು, ಮಿಂಚು ಎಂಬಿವುಗಳು

ಉಂಟಾಗುವುದಿದೆ.

**ಸಾಮಗ್ರಿಗಳು** : ಮಳೆ ಹಾಡುಗಳು

**ಸಂದರ್ಭ** : ಮಳೆಯ ಅನುಭವಗಳನ್ನು ಹೇಳುವುದು / ಮಳೆ ಹಾಡನ್ನು ಹಾಡುವುದು ಎಂಬಿವುಗಳ ಮಂಡನೆಯ ನಂತರ

**ಪ್ರಕ್ರಿಯೆ** :

**ಆಖ್ಯಾನ** : ಮಳೆ ಹಾಡನ್ನು ಹಾಡುತ್ತಾ, ಮಳೆ ದೃಶ್ಯಗಳನ್ನು ನೋಡುತ್ತಾ ಕಟ್ಟಿರುವೆಯು ಮರದ ಕೊಂಬೆಯಲ್ಲಿ ಕುಳಿತಿದೆ.

ತೋಡಿನಲ್ಲಿ ನೀರು ತುಂಬಿದೆ. ಕಿಚ್ಚು ಕಪ್ಪೆಯು ನೀರಿನಲ್ಲಿ ಮುಳುಗಿ ಎದ್ದು ಆಟವಾಡುತ್ತಿದೆ.

ಇದ್ದಕ್ಕಿದ್ದಂತೆ ಗಾಳಿ ಬೀಸಿತು. ಮರದ ಕೊಂಬೆಗಳು ಆಲುಗಾಡಿದುವು. ಕಟ್ಟಿರುವೆ ಜಾರಿ ತೋಡಿಗೆ ಬಿತ್ತು. ಅಯ್ಯೋ.. ಕಾಪಾಡೀ... ಕಾಪಾಡೀ... ಕಟ್ಟಿರುವೆ ಬೊಬ್ಬೆ ಹಾಕಿತು.

ವರ್ಕ್ ಶೀಟ್ 4.5 – ಕಥೆ ಹೇಳಬಹುದೇ? – ನೀಡುವುದು.

**ಚಿತ್ರ ಓದು** **:** ಚಿತ್ರದಲ್ಲಿ ಏನೇನು ಕಾಣಿಸುತ್ತಿದೆ?

- ನೀರಿನಲ್ಲಿ ಬಿದ್ದರೆ ಇರುವೆಗೆ ಏನು ಸಂಭವಿಸಬಹುದು?

**ಕಥೆ ಕಟ್ಟುವುದು** **:** ಇರುವೆಯನ್ನು ಕಾಪಾಡಿದ್ದು ಯಾರು? ಹೇಗೆ? ಚಿತ್ರ ನೋಡಿ ಕಥೆಯನ್ನು ಊಹಿಸಿ ಹೇಳಲಿ.

**ಗೆರೆ ಎಳೆದು ಜೋಡಿಸುವ :** ಕಥೆಯಲ್ಲಿ ಮೊದಲು ನಡೆದ ಘಟನೆಗಳು ಏನಾಗಿರಬಹುದು? ನಂತರ ಏನು ಸಂಭವಿಸಿರಬಹುದು? ಎಂಬ ಕ್ರಮಕ್ಕನುಸರಿಸಿ ಚಿತ್ರಗಳನ್ನು ಗೆರೆ ಎಳೆದು ಜೋಡಿಸಿರಿ.

**ಮೌಲ್ಯಮಾಪನ** : ಕಥೆಯನ್ನು ಕ್ರಮೀಕರಿಸಿ ಹೇಳಲು ಸಾಧ್ಯವಾಗುವುದು.

- ಕಥಾ ಚಿತ್ರಗಳನ್ನು ಕ್ರಮಪ್ರಕಾರ ಗೆರೆ ಎಳೆದು ಜೋಡಿಸಲಾಗಿದೆ.

## ವರ್ಕ್ ಶೀಟ್ 4.6 – ಮಳೆಗಾಲ ಮತ್ತು ಬೇಸಗೆಕಾಲ

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಚಿತ್ರಗಳನ್ನು ನಿರೀಕ್ಷಣೆ ಮಾಡಿ ಪ್ರತ್ಯೇಕತೆಗಳನ್ನು ಕಂಡುಕೊಳ್ಳುವುದಕ್ಕೂ ಮೌಖಿಕವಾಗಿ ಮಂಡಿಸುವುದಕ್ಕೂ ಸಾಧ್ಯವಾಗುವುದು. (30)

**ಆಶಯ** : ಮಳೆ ಇರುವ ಕಾಲವೂ ಮಳೆ ಇಲ್ಲದ ಕಾಲವೂ ಇವೆ.

**ಸಾಮಗ್ರಿಗಳು** : ಕ್ರಯೋನ್ಸ್

**ಸಂದರ್ಭ** : ಬಯಲು ಪ್ರವಾಸ ಎಂಬ ಚಟುವಟಿಕೆ ಮತ್ತು ಚರ್ಚೆ ನಡೆದ ಬಳಿಕ ವರ್ಕ್ ಶೀಟು ನೀಡಬಹುದು.

**ಪ್ರಕ್ರಿಯೆ** :

**ಆಖ್ಯಾನ** : ಆಮೆಯಣ್ಣ ಮೀನಿನ ಮರಿಗಳಿಗೆ ಕಥೆ ಹೇಳುತ್ತಿದ್ದನು. ಹಿಂದೆ ಒಂದು ಬೇಸಗೆ ಕಾಲದಲ್ಲಿ ಕೆರೆಗಳೆಲ್ಲ ಬತ್ತಿ ಬರಡಾದುವು. ಎಂತಹ ಬಿಸಿಲು.. ಎಂತಹ ಸೆಕೆ.. ನೀರಿನಲ್ಲಿರುವ ಜೀವಿಗಳೆಲ್ಲ ಸತ್ತುಹೋದುವು. ಮರಗಳೆಲ್ಲ ಒಣಗಿದುವು. ಸೂರ್ಯಪ್ರಕಾಶಕ್ಕೆ ಬೆಂಕಿಯ ಬಿಸಿ, ನಾನು ಮತ್ತು ಮಕ್ಕಳು ಮಣ್ಣಿನಲ್ಲಿ ಬಿಲಗಳನ್ನು ತೋಡಿ ಅದರಲ್ಲಿ ಕುಳಿತುಕೊಂಡೆವು. ಒಂದು ದಿನ ಮಳೆ ಬಂತು. ನಾವು ಹೊರಗಿಳಿದೆವು. ಆಹಾ.. ಎಲ್ಲ ಹಚ್ಚಹಸಿರು.. ಪರಿಸರವೇ ಬದಲಾಗಿತ್ತು. ಮಳೆಗಾಲದ ಬದಲಾವಣೆಗಳ ಕುರಿತು ನಿಮಗೇನು ತಿಳಿದಿದೆ? ಹೇಳಿರಿ.

ವರ್ಕ್ ಶೀಟ್ 4.6 – ಮಳೆಗಾಲ ಮತ್ತು ಬೇಸಗೆಕಾಲ – ನೀಡುವುದು.

**ಚಿತ್ರ ಓದು** **:** ಚಿತ್ರಗಳನ್ನು ವೀಕ್ಷಣೆ ಮಾಡುವುದು.

- ಒಂದನೇ ಚಿತ್ರವು ಯಾವ ಕಾಲವನ್ನು ಸೂಚಿಸುವುದು?
- ಎರಡನೇಯದು?
- ಚಿತ್ರಗಳನ್ನು ನೋಡಿ ವ್ಯತ್ಯಾಸಗಳನ್ನು ಹೇಳುವುದು.
- ಮಕ್ಕಳ ಅನುಭವದಲ್ಲಿರುವ ಮಳೆಗಾಲ ಮತ್ತು ಬೇಸಗೆಕಾಲವನ್ನು

ಹೇಳುವುದು.

- ಚಿತ್ರಕ್ಕೆ ಬಣ್ಣ ಹಚ್ಚುವುದು.

**ಮೌಲ್ಯಮಾಪನ** : ಮಳೆಗಾಲ, ಬೇಸಗೆಕಾಲ ಎಂಬಿವುಗಳಲ್ಲಿ ಕಾಣಿಸುವ ಪ್ರತ್ಯೇಕತೆಗಳನ್ನು ಹೇಳಲು ಸಾಧ್ಯವಾಗುವುದು.

- ಚಿತ್ರಗಳಿಗೆ ಸೂಕ್ತವಾದ ಬಣ್ಣಗಳನ್ನು ನೀಡುವುದು.

## ವರ್ಕ್ ಶೀಟ್ 4.7 – ಗಾಳಿಯ ತುಂಟತನ

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

- ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಸಂಖ್ಯೆಗಳನ್ನು ಎಣಿಸುವುದಕ್ಕೂ ವಸ್ತುಗಳ ಸಂಖ್ಯೆಯನ್ನು ಪರಸ್ಪರ ಹೊಂದಿಸುವುದಕ್ಕೂ ಸಾಧ್ಯವಾಗುವುದು.(44)

- ಪ್ರಕೃತಿಯನ್ನು ಆಸ್ವಾದಿಸುವುದಕ್ಕೂ ಚಿತ್ರಗಳಿಗೆ ಬಣ್ಣ ಹಚ್ಚುವುದಕ್ಕೂ ಸಾಧ್ಯವಾಗುವುದು.(79)

**ಆಶಯ** : ಮಳೆಯೊಂದಿಗೆ ಗಾಳಿ, ಮಿಂಚು, ಗುಡುಗು ಎಂಬಿವುಗಳು ಉಂಟಾಗುವುದಿದೆ.

**ಸಾಮಗ್ರಿಗಳು** : ಕ್ರಯೋನ್ಸ್

**ಪ್ರಕ್ರಿಯೆ** :

**ಆಖ್ಯಾನ** : ಮಳೆ ಬಂತು. ಜಡಿಮಳೆ.. ಮಳೆಯೊಂದಿಗೆ ಗಾಳಿಯೂ ಬೀಸಿತು. ಅಂಗಳದಲ್ಲಿರುವ ಮಾವಿನ ಮರದ ಗೆಲ್ಲುಗಳು ಪಟಪಟನೆ ಮುರಿದುವು. ಮಾವಿನ ಹಣ್ಣುಗಳು ಉದುರಿದುವು. ಮಳೆ ಕಡಿಮೆಯಾದಾಗ ಸೋನು ಮಾವಿನ ಬುಡಕ್ಕೆ ಓಡಿದನು. “ಆಹಾ.. ಮಾವಿನ ಹಣ್ಣುಗಳು. ಸಕ್ಕರೆಯಂತೆ ಸಿಹಿ ಸಿಹಿಯಾಗಿರಬಹುದು. ಎಷ್ಟೊಂದು ಮಾವಿನ ಹಣ್ಣುಗಳು. ಷಹ್ಲಳಿಗೂ ಕೊಡಬೇಕು.” ಒಬ್ಬೊಬ್ಬರಿಗೆ ಎಷ್ಟೆಷ್ಟು ಸಿಗಬಹುದು ? ಸೋನುವಿಗೆ ಹೇಳಿಕೊಡಬಹುದೇ ?

**ವರ್ಕ್ ಶೀಟ್ 4.7 – ಗಾಳಿಯ ತುಂಟತನ – ನೀಡುವುದು.**

**ಚಿತ್ರ ಓದು** : (ಅರ್ಧಭಾಗ ಮೊದಲು ತೆರೆಯಬೇಕು.)

- ಗಾಳಿ ಪುನಃ ಬೀಸಿತು. ಮಾವಿನ ಹಣ್ಣುಗಳು ಪುನಃ ಬಿದ್ದುವು. (ಮುಂದಿನ ಅರ್ಧಭಾಗ ತೆರೆಯಬೇಕು.) ಈಗ ಎಷ್ಟು ಹಣ್ಣುಗಳು?

- ಕೆಳಗೆ ಬಿದ್ದು ಮಾವಿನ ಹಣ್ಣುಗಳಿಗೆ ಬಣ್ಣ ಹಚ್ಚಿರಿ.

- ಸೋನುವಿಗೂ ಷಹ್ಲಳಿಗೂ ಎಷ್ಟರಂತೆ ಹಣ್ಣುಗಳನ್ನು ಕೊಡಬಹುದು?

**ಅಧ್ಯಾಪಿಕೆಗೆ** - ವರ್ಕ್ ಶೀಟನ್ನು ಮೂರು ಭಾಗಗಳಾಗಿ ಮಾಡಲಾಗಿದೆ. ಮಧ್ಯದ ಮಾವು ಕಾಣಿಸದಂತೆ ಇಬ್ಬದಿಗಳಲ್ಲಿರುವ ಮಾವುಗಳ ಅರ್ಧಭಾಗವನ್ನು ಮಡಚಿ ವರ್ಕ್ ಶೀಟನ್ನು ಮಕ್ಕಳಿಗೆ ನೀಡಬೇಕು.

**ಮೌಲ್ಯಮಾಪನ** : ಬಣ್ಣ ಹಚ್ಚಿರುವ ನಿಖರತೆ.

- ಮಾವಿನ ಹಣ್ಣುಗಳನ್ನು ಎಣಿಸುವುದು, ಪಾಲು ಮಾಡುವುದು ಎಂಬಿವುಗಳು ಸಾಧ್ಯವಾಗುವುದು.

# ಥೀಂ 5 – ಸಸ್ಯಗಳು ಮತ್ತು ಹಣ್ಣುಗಳು

**ಆಯಾ ಪ್ರದೇಶದ ಪ್ರಕೃತಿಯೇ ಮಕ್ಕಳಿಗೆ ಅಗತ್ಯವಿರುವ ಆಟಿಕೆಗಳನ್ನು ಒದಗಿಸುವುದು. ಪ್ರಕೃತಿಯೇ ಮಕ್ಕಳ ಆಟದ ಮೈದಾನವಾಗಿದೆ. ಚಿಕ್ಕಂದಿನಲ್ಲಿ ಪ್ಲಾಸ್ಟಿಕ್ ಆಟಿಕೆಗಳನ್ನು ನೀಡಿ, ಬಳಿಕ ದೊಡ್ಡದಾದಾಗ ಪ್ಲಾಸ್ಟಿಕನ್ನು ತ್ಯಜಿಸಲು ಹೇಳುವುದಕ್ಕಿಂತ ಪ್ರಕೃತಿ ಸೌಹಾರ್ದಯುತವಾದ ಆಟಿಕೆಗಳ ಮೂಲಕ ಪ್ರಕೃತಿಯನ್ನು ಅನುಭವಿಸುವಂತೆ ಮಾಡುವುದು ಉತ್ತಮವಲ್ಲವೇ? ಪ್ರಕೃತಿಯೊಂದಿಗೆ ಬೆರೆಯುವುದಕ್ಕಿರುವ ದಿಕ್ಸೂಚಿಯಾಗಿ ವರ್ಕ್ ಶೀಟುಗಳನ್ನು ಬಳಸಬೇಕು.**

## ಚಟುವಟಿಕಾ ಕ್ರಮ

1. ಶಾಲಾ ವಠಾರದಲ್ಲಿ ನೆಟ್ಟು ಬೆಳೆಸಿದ ಗಿಡಗಳನ್ನು ನಿರೀಕ್ಷಣೆ ಮಾಡುವುದು. (ಹೆಸರು, ಸಸ್ಯದ ಭಾಗಗಳಲ್ಲಿ ದೊಡ್ಡದು, ಸಣ್ಣದು, ಎಲೆ ಮತ್ತು ಹೂವಿನ ಪರಿಮಳ)

2. ಮನೆಯಲ್ಲಿ ನೆಟ್ಟು ಬೆಳೆಸುವ ಗಿಡಗಳ ಕುರಿತು ಚರ್ಚೆ.

3. ಪರಿಮಳ ಗುರುತಿಸುವ ಆಟ (ಎಲೆ, ಹೂವು)

4. ಸಸ್ಯಗಳ ಕುರಿತಾದ ಹಾಡುಗಳು

5. ಎಲೆಗಳ ಚಿತ್ರ ಮಾಡುವ, ಬಣ್ಣ ಹಚ್ಚುವ

6. ವರ್ಕ್ ಶೀಟು 5.1 "ಎಲೆಯಚ್ಚು" ನೀಡುವುದು.

7. ಎಲೆಯ ಆಟಿಕೆಗಳ ನಿರ್ಮಾಣ

8. ವರ್ಕ್ ಶೀಟು 5.2 "ಎಲೆ ಮೃಗಶಾಲೆ" ನೀಡುವುದು.

9. ಹಲವು ವಿಧದ ಹಣ್ಣುಗಳನ್ನು ಪ್ರತ್ಯಕ್ಷವಾಗಿ ನಿರೀಕ್ಷಣೆ ಮಾಡುವುದು. ವಿಶೇಷತೆಗಳನ್ನು ಹೇಳುವುದು.

10. ಇಷ್ಟವಿರುವ ಹಣ್ಣು ಯಾವುದು? ಇಷ್ಟವಿರುವ ಹಣ್ಣು ತಿನ್ನುವುದು. (ಅಭಿನಯ)

11. ಹಣ್ಣು ತಿಂದ ಅನುಭವವನ್ನು ಹಂಚುವುದು.

12. ಹಣ್ಣುಗಳಿಗೆ ಸಂಬಂಧಿಸಿದ ಪದ್ಯಗಳು

13. ಹಣ್ಣುಗಳನ್ನು ಎಣಿಸಿ ಹೇಳುವ (ಸ್ವಂತ ಅನುಭವ)

14. ವರ್ಕ್ ಶೀಟು 5.3 "ಎಣಿಸಿ ಹೇಳಿರಿ, ಬಣ್ಣ ನೀಡಿರಿ" ನೀಡುವುದು.

15. ಹಣ್ಣುಗಳನ್ನು ಗುಂಪು ಮಾಡುವ (ಪ್ರತ್ಯಕ್ಷಾನುಭವ – 2ರ, 3ರ, 4ರ ಗುಂಪುಗಳಾಗಿ ಮಾಡುವುದು.)

16. ವರ್ಕ್ ಶೀಟು 5.4 "ಒಂಟಿಯನ್ನು ಕಂಡುಹಿಡಿಯಿರಿ" ನೀಡುವುದು.

17. ಹಣ್ಣಿನ ಮುಖವಾಡವನ್ನು ಧರಿಸಿ ಅಭಿನಯ.

18. ವರ್ಕ್ ಶೀಟು 5.5 "ಗೆರೆ ಎಳೆದು ಜೋಡಿಸುವ" ನೀಡುವುದು.

19. ಹೂದೋಟ ನಿರ್ಮಾಣ ಮತ್ತು ಸಂರಕ್ಷಣೆ

20. ಬಯಲು ಪ್ರವಾಸ (ಪ್ರಕೃತಿ ನಡಿಗೆ)

21. ವರ್ಕ್ ಶೀಟು 5.6 "ಎಣಿಕೆಯಲ್ಲಿ ಒಂದೇ ರೀತಿ ಬರುವವುಗಳನ್ನು ಒಟ್ಟು ಸೇರಿಸುವ"

22. ಮಾದರಿ ನೋಡಿ ಗಣಿತ ನಮೂನೆಯನ್ನು ಕ್ರಮೀಕರಿಸುವುದು. (ವೆಜಿಟೇಬಲ್ ಪ್ರಿಂಟಿಂಗ್)

## ವರ್ಕ್ ಶೀಟ್ 5.1 – ಎಲೆಯಚ್ಚು

**ವಿಕಾಸ ಮಂಡಲ** : ಸೌಂದರ್ಯಾತ್ಮಕ-ಸೃಜನಾತ್ಮಕ ವಿಕಾಸ

**ಸಾಮರ್ಥ್ಯ** : ಹಲವು ವಸ್ತುಗಳನ್ನು ಬಳಸಿ ಅಚ್ಚೊತ್ತುವುದಕ್ಕೂ ಸ್ಪ್ರೇ ವರ್ಕ್ ಮಾಡುವುದಕ್ಕೂ ಸಾಧ್ಯವಾಗುವುದು.(81)

**ಆಶಯ** : ಮನೆಯ ಪರಿಸರದಲ್ಲಿ ಹಲವು ವಿಧದ ಗಿಡಗಳನ್ನು / ಸಸ್ಯಗಳನ್ನು ನೆಟ್ಟು ಬೆಳೆಸಲಾಗುವುದು.

-

**ಸಾಮಗ್ರಿಗಳು** : ವರ್ಕ್ ಶೀಟು, ಎಲೆಗಳು, ಕ್ರಯೋನ್ಸ್, ಮಡಲಕಡ್ಡಿಗಳು

**ಸಂದರ್ಭ** : ಹೂವು, ಎಲೆ ಎಂಬಿವುಗಳ ವಿಶೇಷತೆಗಳು ಮತ್ತು ವಿವಿಧ ರೀತಿಯ ಎಲೆಗಳನ್ನು ಗುರುತಿಸುವ ಚಟುವಟಿಕೆಯ ನಂತರ.

**ಪ್ರಕ್ರಿಯೆ** :

**ಆಖ್ಯಾನ** : ಶಿವಾನಿ ಮತ್ತು ಆಮಿನ ಗೆಳೆತಿಯರಾಗಿದ್ದರು. ಒಂದು ದಿನ ಶಿವಾನಿ ಆಮಿನಳ ಮನೆಗೆ ಹೋದಳು. "ಆಹಾ, ಎಷ್ಟೊಂದು ಹೂಗಿಡಗಳು.." ಹಾಯ್!.. ಹೂಗಳು.. ಎಷ್ಟು ಚಂದ?

- ಆಮಿನಳ ಮನೆಯಲ್ಲಿ ಯಾವೆಲ್ಲ ಹೂವಿನ ಗಿಡಗಳಿದ್ದಿರಬಹುದು? (ಊಹಿಸಿ ಹೇಳುವುದು) ಹೂಗಳೋ? ಅವರು ತಿರುಗಾಡುತ್ತಾ ಗಿಡಗಳನ್ನೂ ಹೂಗಳನ್ನೂ ಕಂಡರು. ಶಿವಾನಿ ಮತ್ತು ಆಮಿನ ಎಲೆಗಳ ಹೆಸರುಗಳನ್ನು ಹೇಳಿ ಆಡಿದರು.

- ನಾವೂ ಆಡೋಣವೇ?

- ಆಮಿನಳ ಮನೆಯಿಂದ ತಂದ ಎಲೆಗಳನ್ನು ಕಾಣಬೇಡವೇ?

- ಮಕ್ಕಳಿಗೆ ಪರಿಚಯವಿರುವ ಎಲೆಗಳನ್ನು ತೋರಿಸುವುದು. ಮಕ್ಕಳು ಹೆಸರು ಹೇಳುವರು. ಮಾವಿನೆಲೆಯನ್ನೂ ಹಲಸಿನೆಲೆಯನ್ನೂ ತೋರಿಸುವುದು. ಇವುಗಳು ಪರಸ್ಪರ ಕಂಡರೆ ಏನೆಲ್ಲ ಹೇಳಬಹುದು?

- ನಾವು ಹೇಳಿ ನೋಡೋಣವೇ? ಮಕ್ಕಳು ಹೇಳುತ್ತಾರೆ. ಇನ್ನು ಕೆಸುವಿನ ಎಲೆಯೂ ಬಾಳೆ ಎಲೆಯೂ ಪರಸ್ಪರ ಕಂಡರೆ? ಏನೆಲ್ಲ ಹೇಳಬಹುದು? ಮಕ್ಕಳು ಹೇಳುತ್ತಾರೆ. ಆಮಿನಳ ಮನೆಯಲ್ಲಿದ್ದ ಗಿಡಗಳ ಎಲೆಗಳ ಚಿತ್ರಗಳನ್ನು ಬಿಡಿಸೋಣವೇ?

**ಎಲೆ ಚಿತ್ರ ಬಿಡಿಸುವ :** ಮಕ್ಕಳನ್ನು ಚಿಕ್ಕ ಗುಂಪುಗಳಾಗಿ ಮಾಡಿ ವೃತ್ತದಲ್ಲಿ ಕುಳ್ಳಿರಿಸುವುದು. ಮಧ್ಯದಲ್ಲಿ ಎಲೆಗಳು. ಮಕ್ಕಳು ಕಾಗದದಲ್ಲಿ ಇಷ್ಟವಿರುವ ಎಲೆಗಳ ಚಿತ್ರ ಬಿಡಿಸುವುದು. ಬಣ್ಣ ಹಚ್ಚುವುದು.

- ಚಿತ್ರ ಮಾಡಿ ಬಣ್ಣ ಹಚ್ಚಿದ ಎಲೆಗಳನ್ನು ಪ್ರದರ್ಶಿಸುವುದು.

- ಇನ್ನು ಕಾಗದದಲ್ಲಿ ಎಲೆಯ ಅಚ್ಚು ತೆಗೆಯೋಣವೇ?

ವರ್ಕ್ ಶೀಟ್ 5.1 – ಎಲೆಯಚ್ಚು – ನೀಡುವುದು.

: ಎಲೆ, ಕ್ರಯೋನ್ಸ್ ಎಂಬಿವುಗಳನ್ನು ಎಲ್ಲರೂ ತೆಗೆಯುವರು.

- ವರ್ಕ್ ಶೀಟಿನ ಕೆಳಗಿರುವ ಖಾಲಿ ಕೋಣೆಯ ಅಡಿಯಲ್ಲಿ ಅಚ್ಚು ತೆಗೆಯಬೇಕಾದ ಎಲೆಯನ್ನು ಕವುಚಿ ಇಡಬೇಕು.

- ಕಾಗದದ ಮೇಲೆ ಕ್ರಯೋನಿನಿಂದ ಉಜ್ಜಿ ಅಚ್ಚು ತೆಗೆಯುವುದು. (ಅಧ್ಯಾಪಿಕೆ ಮಾದರಿಯನ್ನು ಪ್ರದರ್ಶಿಸಬೇಕು.)

- ಆಹಾ.. ಎಲೆ ಅಚ್ಚುಗಳು.. ಪ್ರದರ್ಶಿಸೋಣವೇ? ಎಲೆಯಚ್ಚು ಚಿತ್ರ ಪ್ರದರ್ಶನ. "ಆಹಾ.. ಎಷ್ಟು ಚಂದ.."

ನಿರ್ಮಾಣ : ಶಿವಾನಿ ಮತ್ತು ಆಮಿನ ಹಲಸಿನೆಲೆ ಮತ್ತು ಮಡಲಕಡ್ಡಿಗಳಿಂದ ಟೊಪ್ಪಿ, ಮಾಲೆ, ಬಳೆ ಮೊದಲಾದುವುಗಳನ್ನು ನಿರ್ಮಿಸಿ ಆಡಿದರು. ನಾವೂ ಆಡೋಣವೇ?

- ಹಲಸಿನೆಲೆ, ಮಡಲಕಡ್ಡಿಗಳನ್ನುಪಯೋಗಿಸಿ ಟೊಪ್ಪಿ, ಮಾಲೆ, ಬಳೆಗಳನ್ನು ನಿರ್ಮಿಸಿ ಪ್ರದರ್ಶಿಸುವುದು.

ಮೌಲ್ಯಮಾಪನ : ಚಿತ್ರದ ಆಕರ್ಷಣೆ.

- ಎಲೆಯ ಆಕೃತಿ ಚೆನ್ನಾಗಿ ಮೂಡುವಂತೆ ಅಚ್ಚು ತೆಗೆಯಲಾಗಿದೆ.

## ವರ್ಕ್ ಶೀಟ್ 5.2 – ಎಲೆ ಮೃಗಶಾಲೆ

**ವಿಕಾಸ ಮಂಡಲ** : ಸೌಂದರ್ಯಾತ್ಮಕ-ಸೃಜನಾತ್ಮಕ ವಿಕಾಸ

**ಸಾಮರ್ಥ್ಯ** : ಪ್ರಕೃತಿಯಿಂದ ಲಭಿಸುವ ಹಲವು ವಿಧದ ವಸ್ತುಗಳನ್ನು ಬಳಸಿ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಗುವುದು.(83)

**ಆಶಯ** : ಮನೆಯ ಪರಿಸರದಲ್ಲಿ ಹಲವು ವಿಧದ ಸಸ್ಯಗಳಿವೆ.

**ಸಾಮಗ್ರಿಗಳು** : ಎಲೆಗಳು, ಗೋಂದು

**ಸಂದರ್ಭ** : ಬಯಲು ಪ್ರವಾಸದ ನಂತರ

**ಪ್ರಕ್ರಿಯೆ** :

**ಆಖ್ಯಾನ** : ಆನೆ ಮತ್ತು ಅಳಿಲು ಗೆಳೆಯರಾಗಿದ್ದರು. ಇವರಲ್ಲಿ ದೊಡ್ಡವರು ಯಾರು ? ಅಳಿಲೋ ? ಆನೆಯೋ ? ಆನೆ ನಡೆಯುವುದು ಹೇಗೆ ? ಅಳಿಲು ? (ಅಭಿನಯ) ಆನೆ ಪ್ರತಿದಿನ ತುಂಬಾ ದೂರ ನಡೆಯುತ್ತಿತ್ತು. ಅಳಿಲು ಜೊತೆಯಲ್ಲಿ ಹೋಗುತ್ತಿತ್ತು. ವರ್ಕ್ ಶೀಟಿನ ಆನೆ ಮತ್ತು ಆಳಿಲನ್ನು ತೋರಿಸುವುದು. (ಇತರ ಕಥಾಪಾತ್ರಗಳನ್ನು ಮರೆ ಮಾಡಿ)

- ಆನೆಯು ಅಳಿಲನ್ನು ನಡೆದುಕೊಂಡು ಹೋಗಲು ಬಿಡುವುದಿಲ್ಲ. ಮತ್ತೆ ಹೇಗೆ ಕೊಂಡೊಯ್ಯುತ್ತಿರಬಹುದು? (ಸ್ವತಂತ್ರ ಪ್ರತಿಕ್ರಿಯೆ) ಆನೆ ಮೇಲೆ ಕುಳಿತುಕೊಂಡು ಆಳಿಲು ಏನೆಲ್ಲ ಮಾಡುತ್ತಿರಬಹುದು? ಒಂದು ದಿನ ಆಳಿಲು ಆನೆಯ ಮೇಲೆ ಕುಳಿತು ಆಡುತ್ತಾ ಹಾಡುತ್ತಾ ಆನಂದದಿಂದ ಹೋಗುತ್ತಿತ್ತು. "ಹಾಯ್.. ಮಾವಿನ ಹಣ್ಣು.. ಒಳ್ಳೆಯ ಹಣ್ಣು.." ಅಳಿಲು ಕೂಗಿತು. ಗೆಳೆಯ ಮಾವಿನ ಬುಡಕ್ಕೆ ಹೋಗೋಣ.. ಆನೆ ಆಳಿಲಿನೊಂದಿಗೆ ಮಾವಿನ ಬುಡಕ್ಕೆ ತಲುಪಿತು. ಸೊಂಡಿಲನ್ನು ಮೇಲೆತ್ತಿತು.

ಅಳಿಲು ಏನು ಮಾಡಿರಬಹುದು? ಹೇಳಬಹುದೇ? ಸೊಂಡಿಲಿನಿಂದಾಗಿ ಅಳಿಲು ಮೇಲಕ್ಕೆಹೋಯಿತು. ಅಳಿಲು ಮಾವಿನ ಹಣ್ಣುಗಳನ್ನು ಕ್ಯೊದು ಕೆಳಗೆ ಹಾಕಿತು. ಮತ್ತೆ ಕೆಳಗೆ ಇಳಿಯಲು ನೋಡಿತು. ಕೆಳಗೆ ಹೇಗೆ ಇಳಿದಿರಬಹುದು? ಅಯ್ಯೋ.. ಹಣ್ಣುಗಳು ಕಾಣಿಸುವುದಿಲ್ಲವಲ್ಲ.. ಅಳಿಲಿಗೆ ಆಶ್ಚರ್ಯವಾಯಿತು. ಸುತ್ತಲೂ ನೋಡಿತು. ಓಹೋ.. ಇಲಿಯೊಂದು ಮಾವಿನಹಣ್ಣಿನೊಂದಿಗೆ ಬಿಲದೆಡೆಗೆ ಓಡುತ್ತಿದೆ. ಹಿಡಿ ಅವನನ್ನು.. ಆನೆ ಹೇಳಿತು. ಇಲಿ ಗಿಡಗಳೆಡೆಯಿಂದಾಗಿ ಮಾವಿನ ಹಣ್ಣಿನೊಂದಿಗೆ ಓಡಿತು. ಕೆಸುಗಳ ಎಡೆಯಿಂದಾಗಿ, ಮರಗೆಣಸಿನ ಎಡೆಯಿಂದಾಗಿ, ತಗತೆಯೆಡೆಯಿಂದಾಗಿ ಇಲಿ ಓಡಿತು. ಆನೆಯು ಪೇರಳೆ ಮಗುಚಿ, ನೇರಳೆ ಮಗುಚಿ, ನುಗ್ಗೆ ಮಗುಚಿ, ಹಿಂದಿನಿಂದ.. ಅಳಿಲು ದಾಸವಾಳಕ್ಕೆ ಹಾರಿ, ಮಲ್ಲಿಗೆಗೆ ನೆಗೆದು, ಹೊಂಗೆಗೆ ಜಿಗಿದು.. ಹಿಂದಿನಿಂದ.. ಇದನ್ನು ಕಂಡು ಮಂಗ ಹೇಳಿತು. ಯಾಕೆ ಓಡುತ್ತಿರುವಿರಿ? ನಿಮಗೆ ಮಾವಿನ ಹಣ್ಣನ್ನು ನಾನು ಕ್ಯೊದು ಕೊಡುತ್ತೇನೆ. ಎಲ್ಲರೂ ಓಟ ನಿಲ್ಲಿಸಿದರು. ಮಂಗ ಮಾವಿನ ಹಣ್ಣುಗಳನ್ನು ಕ್ಯೊದು ಕೊಟ್ಟಿತು.

ವರ್ಕ್ ಶೀಟ್ 5.2 – ಎಲೆ ಮೃಗಶಾಲೆ – ನೀಡುವುದು.

**ಚಿತ್ರ ಓದು** : ಇದನ್ನೆಲ್ಲಾ ನೋಡಿಕೊಂಡು ಮತ್ತೊಬ್ಬರು ಅಲ್ಲಿ ನಿಂತಿದ್ದರು. ಆ ಗೆಳೆಯ ಯಾರಾಗಿರಬಹುದು? (ಸ್ವತಂತ್ರ ಪ್ರತಿಕ್ರಿಯೆ)

- ಇವುಗಳ ಆಕೃತಿಯನ್ನು ನಿರ್ಮಿಸುವುದು ಹೇಗೆ?

- ಇದರಂತೆ ನಿಮಗೂ ನಿರ್ಮಿಸಬೇಡವೇ?

- ಮಕ್ಕಳು ವರ್ಕ್ ಶೀಟು ನಿರೀಕ್ಷಣೆ ಮಾಡುತ್ತಾರೆ. ಎಲೆಗಳನ್ನು ಅಂಟಿಸಿದ ರೀತಿಯನ್ನು ಅಧ್ಯಾಪಿಕೆ ಕೇಳುವರು. ಅಗತ್ಯವಿರುವ ಎಲೆಗಳನ್ನು ಅಧ್ಯಾಪಿಕೆ ಮಕ್ಕಳಿಗೆ ನೀಡುವರು. ಅವುಗಳನ್ನು ಸೇರಿಸಿಟ್ಟು ವಿವಿಧ ಜೀವಿಗಳ ಚಿತ್ರಗಳನ್ನು ಕ್ರಮೀಕರಿಸುವರು.

- ಅಧ್ಯಾಪಿಕೆಯ ಸಹಾಯದಿಂದ ಗೋಂದು ಉಪಯೋಗಿಸಿ ಎ 4 ಕಾಗದದಲ್ಲಿ / ಚಾರ್ಟು ಪೇಪರಿನಲ್ಲಿ ಅಂಟಿಸುವುದು.

**ಚಿತ್ರ ಪ್ರದರ್ಶನ :** ಇನ್ನು ಚಿತ್ರಗಳನ್ನು ಪ್ರದರ್ಶಿಸೋಣವೇ? ಚಿತ್ರಗಳ ಕುರಿತು ಮಾತನಾಡಲು ಅವಕಾಶ ನೀಡುವುದು.

**ಸ್ವತಂತ್ರ ಮಾತುಗಾರಿಕೆ :** ಅಳಿಲಿಗೆ ಮಾವಿನ ಹಣ್ಣೆಂದರೆ ತುಂಬಾ ಇಷ್ಟ. ಆನೆಗೆ ಇಷ್ಟ ಯಾವುದಾಗಿರಬಹುದು?

**ಮೌಲ್ಯಮಾಪನ** : ಎಲೆಗಳನ್ನು ಸೇರಿಸಿಟ್ಟು ಜೀವಿಗಳ ಆಕೃತಿಯನ್ನು ರಚಿಸಲು ಸಾಧ್ಯವಾಗಿದೆ.

- ಮಾದರಿಗಿಂತ ವಿಭಿನ್ನವಾಗಿ ನಿರ್ಮಿಸಲು ಸಾಧ್ಯವಾಗುವುದು.

## ವರ್ಕ್ ಶೀಟ್ 5.3 – ಎಣಿಸಿ ಹೇಳಿರಿ.. ಬಣ್ಣ ಹಚ್ಚಿರಿ..

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಕ್ರಯೋನ್ಸ್ ಉಪಯೋಗಿಸಿ ಚಿತ್ರಗಳಿಗೆ ಬಣ್ಣ ಹಚ್ಚಲು ಸಾಧ್ಯವಾಗುವುದು.(5)

- ಸಂಖ್ಯೆಗಳನ್ನು ಎಣಿಸುವುದಕ್ಕೂ ವಸ್ತುಗಳನ್ನು ಮತ್ತು ಎಣಿಕೆಯನ್ನು ಪರಸ್ಪರ ಹೊಂದಿಸುವುದಕ್ಕೂ ಸಾಧ್ಯವಾಗುವುದು. (5 ಕ್ಕಿಂತ ಕಡಿಮೆ)(44)

**ಆಶಯ** : ವಿವಿಧ ಬಗೆಯ ಹಣ್ಣುಗಳಿವೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್.

**ಸಂದರ್ಭ** : ವಿವಿದ ಬಗೆಯ ಹಣ್ಣುಗಳನ್ನು ಪರಿಚಯಿಸಿದ ನಂತರ ವರ್ಕ್ ಶೀಟು ನೀಡುವುದು.

**ಪ್ರಕ್ರಿಯೆ** :

**ಆಖ್ಯಾನ** : ಕಿಟ್ಟಪ್ಪನ ಮನೆಯ ಮುಂದೆ ಒಂದುಮಾವು, ಒಂದು ಹಲಸು, ಒಂದು ಪೇರಳೆ, ಎರಡು ಪಪ್ಪಾಯಿ ಗಿಡಗಳು ಇವೆ. ಪ್ರತಿದಿನ ಬೆಳಗ್ಗೆ ಕಿಟ್ಟಪ್ಪ ಆ ಗಿಡಗಳನ್ನು ನೋಡುತ್ತಾನೆ. ನೋಡುವುದು ಯಾಕಾಗಿರಬಹುದು ? ಒಂದು ದಿನ ಕಿಟ್ಟಪ್ಪ ಕೂಗಿ ಹೇಳಿದ. ಹಾಯ್, ಹಲಸಿನಕಾಯಿ ಆಗಿದೆ. ಪಪ್ಪಾಯಿ ಹಣ್ಣಾಯಿತು. ಪೇರಳೆಗಳೂ ಹಿಡಿದಿವೆ. ಆಹಾ ಮಾವಿನಕಾಯಿ. ಕಿಟ್ಟಪ್ಪ ಎಣಿಸಿ ನೋಡಿದನು. ಕಿಟ್ಟಪ್ಪ ಕಂಡ ಹಣ್ಣುಗಳನ್ನು ನೋಡಿರಿ.

ವರ್ಕ್ ಶೀಟ್ 5.3 – ಎಣಿಸಿ ಹೇಳಿರಿ.. ಬಣ್ಣ ಹಚ್ಚಿರಿ.. - ನೀಡುವುದು.

**ಚಿತ್ರ ಓದು** **:** ಯಾವೆಲ್ಲ ಹಣ್ಣುಗಳು? ಕಿಟ್ಟಪ್ಪ ಕಂಡ ಹಣ್ಣುಗಳನ್ನು ಎಣಿಸಿ ಹೇಳಬಹುದೇ?

| | |
|---|---|
| ಹಲಸಿನ ಕಾಯಿ | - 1 |
| ಪಪ್ಪಾಯಿ | - 2 |
| ಮಾವಿನ ಕಾಯಿ | - 3 |
| ಪೇರಳೆಕಾಯಿ | - 4 |

- ಇನ್ನು ಬಣ್ಣ ಹಚ್ಚುವ – ಮಕ್ಕಳು ಬಣ್ಣ ಹಚ್ಚುತ್ತಾರೆ.

**ಮೌಲ್ಯಮಾಪನ** : 1 ರಿಂದ 4 ರವರೆಗೆ ವಸ್ತುಗಳನ್ನು ಹೊಂದಿಸಿಕೊಂಡು ಎಣಿಸಲು ಸಾಧ್ಯವಾಗುವುದು.

- ಸೂಕ್ತವಾದ ಬಣ್ಣ ಕೊಡಲಾಗಿದೆ.

## ವರ್ಕ್ ಶೀಟ್ 5.4 – ಗುಂಪಿಗೆ ಸೇರದ್ದು..

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ
- ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಚಿತ್ರಗಳನ್ನು ನಿರೀಕ್ಷಣೆ ಮಾಡಿ ಗುಂಪಿಗೆ ಸೇರದವುಗಳನ್ನು ಗುರುತಿಸಿ ಹೇಳುವುದಕ್ಕೂ ಗುಂಪಿಗೆ ಸೇರದಿರಲು ಕಾರಣವನ್ನು ಹೇಳಲೂ ಸಾಧ್ಯವಾಗುವುದು. (33)
- ಕೈ ಬೆರಳುಗಳನ್ನುಪಯೋಗಿಸಿ ಸ್ವಂತವಾಗಿ ಚಿತ್ರ ರಚಿಸಲು ಸಾಧ್ಯವಾಗುವುದು. (4)

**ಆಶಯ** : ವಿವಿಧ ಬಗೆಯ ಹಣ್ಣುಗಳಿವೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್, ಬಣ್ಣ.

**ಸಂದರ್ಭ** : ವಿವಿಧ ಬಗೆಯ ಹಣ್ಣುಗಳ ಕುರಿತು ಚರ್ಚೆ.

**ಪ್ರಕ್ರಿಯೆ** :

**ಆಖ್ಯಾನ** : ದಾಮುವಿಗೆ ದ್ರಾಕ್ಷೆ ತಿನ್ನಲು ಆಸೆ. ನನಗೆ ದ್ರಾಕ್ಷೆ ಬೇಕು. ದಾಮು ಅಮ್ಮನಲ್ಲಿ ಹೇಳಿದನು. ಅಮ್ಮ ಮಾರ್ಕೆಟಿಗೆ ಹೋಗಲು ಹೊರಟಳು. ಅಮ್ಮಾ.. ನಾನೂ ಬರುತ್ತೇನೆ.
ಅಮ್ಮ ದಾಮುವಿನೊಂದಿಗೆ ಹಣ್ಣಿನ ಅಂಗಡಿಗೆ ಹೋದಳು. ಬುಟ್ಟಿಗಳಲ್ಲಿ ಹಣ್ಣುಗಳನ್ನು ತುಂಬಿಸಿಡಲಾಗಿದೆ. ಹಾಯ್.. ಎಷ್ಟೊಂದು ಹಣ್ಣುಗಳು. ದಾಮು ಯಾವೆಲ್ಲ ಹಣ್ಣುಗಳನ್ನು ಕಂಡಿರಬಹುದು ? ಮಕ್ಕಳು ಊಹಿಸಿ ಹೇಳುವರು. ದಾಮು ಬುಟ್ಟಿಗಳನ್ನು ದಿಟ್ಟಿಸಿ ನೋಡಿದನು. ಪುನಃ ನೋಡಿದನು. ದಾಮು ಆ ದೃಶ್ಯ ಕಂಡನು. ದಾಮು ಕಂಡ ದೃಶ್ಯ ಏನಾಗಿರಬಹುದು ? ಮಕ್ಕಳು ಊಹಿಸಿ ಹೇಳುವರು. ದಾಮು ತಾಯಿಗೂ ತೋರಿಸಿದನು. ಅಮ್ಮನೂ ನೋಡಿದಳು. ದಾಮು ಕಂಡದ್ದೇನಾಗಿರಬಹುದು ? ತಿಳಿಯಬೇಡವೇ ?

ವರ್ಕ್ ಶೀಟ್ 5.4 – ಗುಂಪಿಗೆ ಸೇರದ್ದು.. – ನೀಡುವುದು.

**ಚಿತ್ರ ಓದು** : ಬುಟ್ಟಿಗಳಲ್ಲಿ ಯಾವೆಲ್ಲ ಹಣ್ಣುಗಳು? ಗುಂಪಿಗೆ ಸೇರದವರು ಇದ್ದಾರೆಯೇ? ಒಂದೊಂದೇ ಬುಟ್ಟಿಯನ್ನು ಅಧ್ಯಾಪಿಕೆ ತೋರಿಸುವರು. ಈ ಬುಟ್ಟಿಯಲ್ಲಿ ಒಂಟಿ ಯಾರು? ಒಂಟಿಯಾದವನನ್ನು ಅದರ ಗುಂಪಿಗೆ ಸೇರಿಸಬೇಡವೇ? ಗೆರೆ ಎಳೆದು ಸೇರಿಸೋಣ.. ಪ್ರತಿಯೊಂದು ಹಣ್ಣನ್ನು ಆಯಾ ಬುಟ್ಟಿಗೆ ಗೆರೆ ಎಳೆದು ಜೋಡಿಸುವುದು.

**ಬಣ್ಣ ಹಚ್ಚುವ** : ಇನ್ನು ನಾವು ಬಣ್ಣ ಹಚ್ಚೋಣ.
- ಮಕ್ಕಳು ಹಣ್ಣುಗಳಿಗೆ ಬಣ್ಣ ಹಚ್ಚುವರು. ಪ್ರದರ್ಶಿಸುವರು. ಹಣ್ಣುಗಳ ಕುರಿತಾದ ಪದ್ಯ ಹಾಡುವುದು.

**ಪದ್ಯ** : ಹಲಸಿನ ಕಾಯಿಗೆ ಬಣ್ಣ ನೀಡುವ
- ತುದಿ ಬೆರಳು ಬಣ್ಣದಲ್ಲಿ ಮುಳುಗಿಸಿ ಕೆಳಗಿನ ಕೋಣೆಯಲ್ಲಿರುವ ಹಲಸಿನಕಾಯಿಯ ಚಿತ್ರದಲ್ಲಿ ಒತ್ತುವುದು.

**ಮೌಲ್ಯಮಾಪನ** : ಗುಂಪಿಗೆ ಸೇರದ ಹಣ್ಣುಗಳನ್ನು ಕಂಡುಹಿಡಿಯಲು ಸಾಧ್ಯವಾಗುವುದು.
- ಪ್ರತಿಯೊಂದು ಹಣ್ಣನ್ನೂ ಅದರ ಬುಟ್ಟಿಗೆ ಗೆರೆ ಎಳೆದು ಜೋಡಿಸಲಾಗಿದೆ.
- ಬಣ್ಣ ಹಚ್ಚಿದುದರ ಹಿರಿಮೆ.

## ವರ್ಕ್ ಶೀಟ್ 5.5 – ಗೆರೆ ಎಳೆದು ಸೇರಿಸುವ

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಕಂಡುಕೊಳ್ಳುವ ಚಟುವಟಿಕೆಗಳಲ್ಲಿ ತೊಡಗುವುದಕ್ಕೂ ಅನುಭವದ ಆಧಾರದಲ್ಲಿ ನಿಗಮನಗಳನ್ನು ಮಂಡಿಸುವುದಕ್ಕೂ ಸಾಧ್ಯವಾಗುವುದು. (31)

**ಆಶಯ** : ಆರೋಗ್ಯಕ್ಕೆ ಹಣ್ಣುಗಳು ಪ್ರಯೋಜನಕಾರಿಯಾಗಿವೆ.

**ಸಾಮಗ್ರಿಗಳು** : ವರ್ಕ್ ಶೀಟು, ಬಾಳೆಹಣ್ಣು, ಪಪ್ಪಾಯಿ ಹಣ್ಣು.

**ಸಂದರ್ಭ** : ವಿವಿಧ ಬಗೆಯ ಹಣ್ಣುಗಳ ಕುರಿತು ಮಕ್ಕಳೊಡನೆ ಮಾತನಾಡುವುದು.

**ಪ್ರಕ್ರಿಯೆ** :

**ಆಖ್ಯಾನ** : ಪಪ್ಪಾಯಿ ಮತ್ತು ಹಲಸಿನಕಾಯಿಗೆ ಜಗಳವಾಯಿತು. ನಾನು ದೊಡ್ಡವ ಎಂದು ಹಲಸು ಹೇಳಿತು. ಅಲ್ಲ ನಾನೇ ದೊಡ್ಡವ ಎಂದು ಪಪ್ಪಾಯಿಯೂ ಹೇಳಿತು. ಮಾತಿಗೆ ಮಾತು ಬೆಳೆದು ತರ್ಕ ಪರಿಹಾರಕ್ಕಾಗಿ ರಾಮುವಿನ ಹತ್ತಿರ ಬಂದುವು. ನಮ್ಮಿಬ್ಬರಲ್ಲಿ ದೊಡ್ಡವರು ಯಾರು ? ಡೆಂಗ್ಯೂ ಜ್ವರ ಬಂದಾಗ ಎಲ್ಲರಿಗೂ ಪಪ್ಪಾಯಿ ಬೇಕಾಗಿತ್ತು. ರಾಮು ಹೇಳಿದ್ದನ್ನು ಕೇಳಿ ಪಪ್ಪಾಯಿ ಬೀಗಿತು. ಆಗ ರಾಮು ಹಲಸಿನ ಕಾಯಿಯ ಕುರಿತು ಹೇಳಿದನು. ಅದನ್ನು ಕೇಳಿ ಹಲಸಿನ ಕಾಯಿ ಹೆಗ್ಗಳಿಕೆ ಹೇಳಲು ಆರಂಭಿಸಿತು. ಏನೆಲ್ಲ ಹೇಳಿರಬಹುದು ? ಪಪ್ಪಾಯಿಯೂ ತನ್ನ ಕುರಿತು ಹೇಳತೊಡಗಿತು. ಆಗ ಅಲ್ಲಿಗೆ ಬೇರೆ ಇಬ್ಬರು ಬಂದರು. ಮಾವಿನ ಹಣ್ಣು ಮತ್ತು ಬಾಳೆಗೊನೆ. ನಾನು ಚಿಕ್ಕವ. ನನಗೆ ಸಿಪ್ಪೆಯಿದೆ. ಹಣ್ಣಾದರೆ ನನಗೆ ಸಿಹಿಯೂ ಪರಿಮಳವೂ ಇದೆ. ಮಾವಿನ ಕಾಯಿ ತಲೆ ಎತ್ತಿ ಹೇಳಿತು. ಬಾಳೆಗೊನೆ ಸುಮ್ಮನೆ ನಿಲ್ಲಬಹುದೇ ? ಬಾಳೆಗೊನೆಯೂ ಕೆಲವು ವಿಷಯಗಳನ್ನು ಹೇಳಿತು. ಬಾಳೆಗೊನೆ ಹೇಳಿದ ವಿಚಾರಗಳನ್ನು ನಿಮಗೆ ಹೇಳಬಹುದೇ ? ಅಮ್ಮ ಕತ್ತಿಯೊಡನೆ ಬಂದರು. ಪಪ್ಪಾಯಿ ಎರಡು ತುಂಡು, ಹಲಸಿನ ಕಾಯಿ ಮೂರು ತುಂಡು, ಬಾಳೆಹಣ್ಣು ಬಾಯಿಗೆ, ಮಾವಿನಕಾಯಿ ಕಚ್ಚಿ ತಿಂದರು. ಹೀಗೆ ಅವರ ಜಗಳ ಮುಗಿಯಿತು. ಎಲ್ಲರಿಗೂ ಹಣ್ಣುಗಳನ್ನು ತುಂಡುಮಾಡಿ ಕೊಡಬೇಕು. ರುಚಿ ನೋಡಿ ಯಾವ ಹಣ್ಣೆಂದು ಹೇಳಬೇಕು.

ವರ್ಕ್ ಶೀಟ್ 5.5 – ಗೆರೆ ಎಳೆದು ಸೇರಿಸುವ – ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಏನೇನು ಕಾಣುತ್ತಿದೆ?

- ಚಿತ್ರದಲ್ಲಿರುವ ಹಣ್ಣುಗಳು ಯಾವುವು?
- ಚಿತ್ರದಲ್ಲಿ ಯಾವೆಲ್ಲ ಮರಗಳು / ಗಿಡಗಳು ಇವೆ?
- ಮಕ್ಕಳು ಮರ, ಗಿಡ, ಹಣ್ಣು ಎಂಬಿವುಗಳನ್ನು ಮುಟ್ಟಿ ತೋರಿಸಿ ಹೆಸರು ಹೇಳುವರು.
- ಸಸ್ಯಗಳೊಂದಿಗೆ ಅವುಗಳ ಹಣ್ಣುಗಳನ್ನು ಗೆರೆ ಎಳೆದು ಸೇರಿಸುವುದು.
- ಪರಸ್ಪರ ಮೌಲ್ಯಮಾಪನ ಮಾಡುವುದು.

**ಮೌಲ್ಯಮಾಪನ** : ಸೂಚನೆಗನುಸರಿಸಿ ಸಸ್ಯಗಳನ್ನೂ ಅವುಗಳ ಹಣ್ಣುಗಳನ್ನೂ ಗೆರೆ ಎಳೆದು ಜೋಡಿಸಲು ಸಾಧ್ಯವಾಗಿದೆ.

## ವರ್ಕ್ ಶೀಟ್ 5.6–ಎಣಿಕೆಯಲ್ಲಿ ಒಂದೇ ರೀತಿ ಬರುವವುಗಳನ್ನು ಸೇರಿಸುವ..

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಸಂಖ್ಯೆಗಳನ್ನು ಎಣಿಸುವುದಕ್ಕೂ ವಸ್ತುಗಳನ್ನು ಸಂಖ್ಯೆಗಳೊಂದಿಗೆ ಹೊಂದಿಸುವುದಕ್ಕೂ ಸಾಧ್ಯವಾಗುವುದು.(44)

**ಆಶಯ** : ವಿವಿಧ ಬಗೆಯ ಹಣ್ಣುಗಳಿವೆ.

**ಸಾಮಗ್ರಿಗಳು** : ವರ್ಕ್ ಶೀಟು, ವಿವಿಧ ರೀತಿಯ ಎಲೆಗಳು.

**ಸಂದರ್ಭ** : ಸುತ್ತಲಿರುವ ಸಸ್ಯಗಳನ್ನು ಮತ್ತು ಹಣ್ಣುಗಳನ್ನು ನಿರೀಕ್ಷಣೆ ಮಾಡಿದ ನಂತರ ವರ್ಕ್ ಶೀಟುಗಳನ್ನು ನೀಡುವುದು.

**ಪ್ರಕ್ರಿಯೆ** :

**ಆಟ** : ಇವತ್ತು ನಾವು ಒಂದು ಆಟ ಆಡೋಣ. ಅಧ್ಯಾಪಿಕೆ ಒಂದು ಎಲೆಯನ್ನು ತೋರಿಸುತ್ತಾರೆ. ಮಕ್ಕಳು ಯಾವ ಎಲೆಯೆಂದು ಹೇಳಬೇಕು. ನಿಮಗೆ ಎಲೆಯನ್ನು ನೋಡಬಹುದು. ಎಲೆಯ ಹೆಸರು ಹೇಳಬೇಕು. ಎಲ್ಲರಿಗೂ ಅವಕಾಶ. ಉತ್ತರ ಹೇಳಿದರೆ ಚಪ್ಪಾಳೆ.

ಒಬ್ಬರು ಎಲೆಯ ಹೆಸರು ಹೇಳುವಾಗ ಇನ್ನೊಬ್ಬರು ಅದರ ಕಾಯಿಯ ಹೆಸರು ಹೇಳಬೇಕು.

- ಅಧ್ಯಾಪಿಕೆ ಮಾವಿನೆಲೆಯನ್ನು ತೋರಿಸುವರು. ಮಾವಿನ ಫಲ ಯಾವುದು ? ಉತ್ತರ ಸರಿಯಾದರೆ ಚಪ್ಪಾಳೆ. ಹಲಸಿನ ಎಲೆ, ಬಾಳೆ ಎಲೆ, ಪಪ್ಪಾಯಿ ಎಲೆ, ಮಡಲು ಮೊದಲಾದ ಫಲವೃಕ್ಷಗಳ ಎಲೆಗಳನ್ನು ತೋರಿಸಿ ಮುಂದುವರಿಸುವುದು. ಫಲವಿಲ್ಲದವುಗಳನ್ನು ತೋರಿಸುವಾಗ ಎಲೆ ಗುರುತಿಸಿದರೆ ಸಾಕು.

- ಇನ್ನು ಇನ್ನೊಂದು ಆಟ ಆಡುವ. ಎಲೆಯನ್ನು ಮತ್ತು ಕಾಯಿಯನ್ನು ನೋಡಿ ಎಣಿಕೆ ಹೇಳಬೇಕು.

ವರ್ಕ್ ಶೀಟ್ 5.6 – ಎಣಿಕೆಯಲ್ಲಿ ಒಂದೇ ರೀತಿ ಬರುವವುಗಳನ್ನು ಸೇರಿಸುವ.. – ನೀಡುವುದು.

**ಚಿತ್ರ ಓದು** **:** ಚಿತ್ರದಲ್ಲಿರುವ ಹಣ್ಣುಗಳನ್ನು ಹೇಳಬಹುದೇ? ಎಲೆಗಳನ್ನು ಹೇಳಬಹುದೇ? ಪ್ರತಿಯೊಂದು ಎಷ್ಟೆಷ್ಟು? ಒಂದೇ ಸಂಖ್ಯೆಯಲ್ಲಿರುವ ಎಲೆಗಳನ್ನು ಮತ್ತು ಹಣ್ಣುಗಳನ್ನು ಸೇರಿಸಿ ಗೆರೆ ಎಳೆಯುವುದು. ಮಕ್ಕಳು ಗೆರೆ ಎಳೆಯುವರು. ಸರಿ ಉತ್ತರದವರಿಗೆ ಚಪ್ಪಾಳೆ.

**ಪದ್ಯ** **:** ಇನ್ನು ಎಲೆ ಪದ್ಯ ಹಾಡುವ.

**ಮೌಲ್ಯಮಾಪನ** : ಒಂದೇ ಸಂಖ್ಯೆಯಲ್ಲಿರುವವುಗಳನ್ನು ಕಂಡುಹಿಡಿದು ಗೆರೆ ಎಳೆದು ಸೇರಿಸಲು ಸಾಧ್ಯವಾಗುವುದು.

# ಥೀಂ 6 – ಆಹಾರ

ವೈಜ್ಞಾನಿಕ ವಿಕಾಸಕ್ಕೆ ಒತ್ತುನೀಡುವ ವರ್ಕ್ ಶೀಟುಗಳು ಈ ಥೀಮಿನಲ್ಲಿರುವುದು. ವಿಶೇಷತೆಗಳನ್ನು ಕಂಡುಹಿಡಿಯುವುದು, ಹೊಂದಿಸುವುದು, ಹೋಲಿಸುವುದು ಮೊದಲಾದ ಪ್ರಕ್ರಿಯಾ ಸಾಮರ್ಥ್ಯಗಳನ್ನು ಆರ್ಜಿಸಲು ಸಾಧ್ಯವಾಗುವ ರೀತಿಯಲ್ಲಿ ಅವುಗಳನ್ನು ತಯಾರಿಸಲಾಗಿದೆ. 'ಆಹಾರ' ಥೀಂ ಆಗಿರುವುದರಿಂದ ರುಚಿಯ ಅನುಭವ ನೀಡುವುದಕ್ಕೆ ಗಮನಿಸಬೇಕು. ಪದ್ಯ, ಕಥೆ, ಆಟ ಎಲ್ಲ ಅನುಭವ ಯೋಗ್ಯವಾದ ರೀತಿಯಲ್ಲಿ ಸೇರಿಸಿಕೊಂಡು ಈ ರೀತಿಯ ವಿಕಾಸ ಮಂಡಲಗಳಿಗೆ ಅವಕಾಶ ಕಂಡುಕೊಳ್ಳಲಾಗಿದೆ. ಈ ಥೀಮಿನ ವಿನಿಮಯದಲ್ಲಿ ಎಲ್ಲ ವಿಕಾಸಮಂಡಲಗಳಿಗೂ ಅನುಪಾತಿಕವಾದ ಪ್ರಾಧಾನ್ಯತೆಯನ್ನು ನೀಡಲಾಗಿದೆಯೆಂದು ಖಾತರಿಪಡಿಸಬೇಕಾಗಿದೆ.

## ಚಟುವಟಿಕಾ ಕ್ರಮ

1. ಶಾಲಾ ವಠಾರದಲ್ಲಿ ನೆಟ್ಟು ಬೆಳೆಸಿದ ಗಿಡಗಳನ್ನು ನಿರೀಕ್ಷಣೆ ಮಾಡುವುದು. (ಹೆಸರು, ಸಸ್ಯದ ಭಾಗಗಳು ದೊಡ್ಡದು, ಸಣ್ಣದು, ಎಲೆ ಮತ್ತು ಹೂವಿನ ಪರಿಮಳ)

↓

2. ಹಸಿವು ಮತ್ತು ಆಹಾರ

↓

3. ಹಸಿವಿನ ಸ್ಥಿತಿ ಅಭಿನಯ (ಮಕ್ಕಳು, ಬೆಕ್ಕು, ಹಸು, ಆಡಿನ ಮರಿಗಳು)

↓

4. ವಿವಿಧ ರೀತಿಯ ಆಹಾರಗಳು

↓

5. ಸಾಕುಪ್ರಾಣಿಗಳ ಆಹಾರ

↓

6. ವಿವಿಧ ರೀತಿಯ ರುಚಿಗಳು - ರುಚಿ ಹೇಳುವ ಆಟ (ಮಿಠಾಯಿ, ಲಿಂಬೆ, ಮೆಣಸು)

7. ವರ್ಕ್ ಶೀಟು 6.1 "ಹಾಯ್ ಎಷ್ಟು ರುಚಿ.." ನೀಡುವುದು.

↓

8. ಅಡುಗೆ ಸಾಮಗ್ರಿಗಳು - ಆಹಾರ ತಯಾರಿ (ಸಲಾಡ್, ಹಣ್ಣು ಸುಲಿದು ತುಂಡು ಮಾಡುವುದು)

↓

9. ಆಹಾರದ ಕುರಿತಾದ ಪದ್ಯಗಳು, ಕಥೆಗಳು.

↓

10. ಇಷ್ಟವಾದ ಆಹಾರ

↓

11. ವರ್ಕ್ ಶೀಟು 6.2 "ಗೆರೆ ಎಳೆದು ಜೋಡಿಸುವುದು" ನೀಡುವುದು.

↓

12. ಮಾದರಿ ನೋಡಿ ಗಣಿತ ನಮೂನೆಯನ್ನು ಕ್ರಮೀಕರಿಸುವುದು. (ವೆಜಿಟೇಬಲ್ ಪ್ರಿಂಟಿಂಗ್, ಹೂ ರಂಗೋಲಿ)

↓

13. ಹಣ್ಣು ಮತ್ತು ತರಕಾರಿ (ಗೊಂಬೆ ನಾಟಕ)

↓

14. ಅಡುಗೆ ಮನೆ ಉಪಕರಣಗಳ ನಿರೀಕ್ಷಣೆ ಮತ್ತು ವರ್ಗೀಕರಣ

↓

15. ವರ್ಕ್ ಶೀಟು 6.3 "ವೃತ್ತದೊಳಗೆ ಹಾಕಿರಿ" ನೀಡುವುದು.

↓

16. ಆಹಾರಕ್ಕೆ ಸಂಬಂಧಿಸಿದ ಪ್ರಶ್ನೋತ್ತರ ಪದ್ಯಗಳು

↓

17. ಕಿಚನ್ ಸೆಟ್ - ಚಟುವಟಿಕೆಗಳು

↓

18. ಆಹಾರ ಯಾವಾಗೆಲ್ಲ?

19. ವರ್ಕ್ ಶೀಟು 6.4 “ಒಳ್ಳೆಯ ಆಹಾರ ಅಭ್ಯಾಸಗಳು ಯಾವುವು? ಚಿತ್ರಕ್ಕೆ ಬಣ್ಣ ಹಚ್ಚಿರಿ” ನೀಡುವುದು.

20. ಆರೋಗ್ಯಕ್ಕೆ ಸಂಬಂಧಿಸಿದ ಪದ್ಯಗಳು

## ವರ್ಕ್ ಶೀಟ್ 6.1 – ಹಾಯ್! ಏನು ರುಚಿ..

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಕಂಡುಹಿಡಿಯುವ ಚಟುವಟಿಕೆಯಲ್ಲಿ ಭಾಗವಹಿಸಲೂ, ಅನುಭವದ ಆಧಾರದಲ್ಲಿ ನಿಗಮನಗಳನ್ನು ಮಂಡಿಸಲೂ ಸಾಧ್ಯವಾಗುವುದು. (31)

**ಆಶಯ** : ಮನುಷ್ಯರು ಮಾತ್ರವಲ್ಲದೆ ಇತರ ಜೀವಿಗಳೂ ಹಸಿವಾದಾಗ ಆಹಾರ ಸೇವಿಸುತ್ತವೆ.

**ಸಾಮಗ್ರಿಗಳು** : ವರ್ಕ್ ಶೀಟು

**ಸಂದರ್ಭ** : ಒಳ್ಳೆಯ ಔತಣ (ಸೇರಕ್ಕಿಯ ಅನ್ನ), ಆಟದ ಫೇನು - ಪುಟ 203 ರ ಪದ್ಯ ಮಂಡಿಸಿದ ನಂತರ

**ಪ್ರಕ್ರಿಯೆ** :

**ಆಖ್ಯಾನ** : **ಬೊಂಬೆ ನಾಟಕ** – ಅಜಿತನು ಹೊರಗೆ ಬಂದು ಓಡಿ ಆಡಿದನು. ಆಗ ಒಂದು ಪಕ್ಷಿ ಚಿಲಿಪಿಲಿಗುಟ್ಟಿತು. ಅಜಿತನು ಹೊರಗೆ ಬಂದು ಯಾರೂ ಕಾಣಿಸುವುದಿಲ್ಲವಲ್ಲ. ಪುನಃ ಅದೇ ಶಬ್ದ. ಹಲೋ, ಹಲೋ ಎಂದು ಕರೆಯುವ ಹಾಗೆ. ಅಜಿತನು ಶಬ್ದ ಬಂದ ಕಡೆಗೆ ನೋಡಿದನು. ಆ ಮರದ ಕೊಂಬೆಯಲ್ಲಿ, ಹಸಿರೆಲೆಗಳ ಮಧ್ಯದಲ್ಲಿ...

"ಕೆಂಪು ಕೊಕ್ಕು
ಕುತ್ತಿಗೆಯಲ್ಲಿ ವೃತ್ತಾಕಾರದ ಮಾಲೆ
ಹಸಿರು ಉಡುಪು
ಹಳದಿ ಪೇರಳೆ ತಿನ್ನುತ್ತಿದೆ.”

ಅದು ಯಾರಾಗಿರಬಹುದು? ಹೇಳಬಹುದೇ? (ಸ್ವತಂತ್ರ ಪ್ರತಿಕ್ರಿಯೆ)

ಅಜಿತ - ಗಿಳಿಯಕ್ಕಾ ಸೌಖ್ಯವೇ?
ಗಿಳಿ - ತುಂಬಾ ಹಸಿವು ಅಜಿತ
ಅಜಿತ - ಬಯಲಲ್ಲಿ ಕೊಯ್ಲು ಆಯಿತೇ?
ಗಿಳಿ - ಹೌದು.. ಹೌದು.. ಹಾಗೇ ಉಪವಾಸ..
ಅಜಿತ - ಹೌದಾ? ನಿನಗೆ ನಾನು ಅನ್ನ ಕೊಡಲೇ?
ಗಿಳಿ - ಬೇಡ ಅಜಿತ. ಅನ್ನ ಇಷ್ಟವಿಲ್ಲ.
ಅಜಿತ - ಹಾಗಾದರೆ ಏನು ಮಾಡೋಣ?
ಗಿಳಿ - ನಾನು ಹಸಿವಿನಿಂದ ಕಂಗಾಲಾಗಿ ಹಾರುತ್ತಿರುವಾಗ ಈ ಪೇರಳೆ ಕಂಡಿತು.
ಅಜಿತ - ಒಂದೇ ಪೇರಳೆ ಅಲ್ಲವೇ ಇರುವುದು?
ಗಿಳಿ - ನನಗೆ ಇದು ಸಾಕು ಅಜಿತ.
ಅಜಿತ - ನೀನು ನನ್ನೊಂದಿಗೆ ಆಡುವೆಯಾ?
ಗಿಳಿ - ಇಲ್ಲ. ನನಗೆ ಹೋಗಬೇಕು.
ಅಜಿತ - ಎಲ್ಲಿಗೆ ಹೋಗುತ್ತೀಯಾ?
ಗಿಳಿ - ಗೂಡಿಗೆ.
ಅಜಿತ - ಅಲ್ಲಿ ನಿನಗೆ ಆಡಲು ಗೆಳೆಯರಿದ್ದಾರೆಯೇ?
ಗಿಳಿ - ತುಂಬಾ ಜನ ಇದ್ದಾರಲ್ಲಾ.. ಆನೆ, ಮೊಲ, ಕೋಗಿಲೆ...
ಅಜಿತ - ನೀನು ನನ್ನನ್ನು ಸೇರಿಸುವೆಯಾ? ಅವರಿಗೆ ಹಸಿವಾಗದೇ?
ಗಿಳಿ - ಅವರಿಗೂ ಹಸಿವಿದೆ
ಅಜಿತ - ಆನೆಗೆ ಏನು ಇಷ್ಟ?
ಗಿಳಿ - ತೆಂಗಿನ ಮಡಲು ಇಷ್ಟ.
ಅಜಿತ - ಮೊಲಕ್ಕೋ?

ಗಿಳಿ - ಕೇರೆಟ್. ಕೋಗಿಲೆಯ ಆಹಾರವೇ ಜೇನು. ಜಿಂಕೆಯ ಆಹಾರವೇನು? ಅಜಿತ್ ಹೇಳು..

ಅಜಿತ - ಹುಲ್ಲು.

ಗಿಳಿ - ಆಹಾ.. ಹೌದಲ್ಲಾ.. ಗಿಳಿ ಜೋರಾಗಿ ನಗಾಡಿತು.

ಗಿಳಿ ನಗಾಡಲು ಕಾರಣವೇನಾಗಿರಬಹುದು?

## ವರ್ಕ್ ಶೀಟ್ 6.2 – ಗೆರೆ ಎಳೆದು ಜೋಡಿಸುವ

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಸಂಖ್ಯೆಗಳನ್ನು ಎಣಿಸುವುದಕ್ಕೂ ವಸ್ತುಗಳನ್ನು ಸಂಖ್ಯೆಗಳೊಂದಿಗೆ ಹೊಂದಿಸುವುದಕ್ಕೂ ಸಾಧ್ಯವಾಗುವುದು.(44)

- ಗಣಿತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದು.(46)

**ಆಶಯ** : ಹಲವು ತರದ ರುಚಿಗಳಿರುವ ಆಹಾರಗಳಿವೆ.

**ಸಾಮಗ್ರಿಗಳು** : ವರ್ಕ್ ಶೀಟು

**ಸಂದರ್ಭ** : ಆಹಾರದ ಬೇರೆ ಬೇರೆ ರುಚಿಗಳ ಕುರಿತು ಚರ್ಚೆ ಮಾಡುವುದು.

**ಪ್ರಕ್ರಿಯೆ** :

**ಆಖ್ಯಾನ** : ಬಿಲ್ಲಿಬೆಕ್ಕು ಮತ್ತು ಮಲ್ಲುಬೆಕ್ಕು ಅಜಿತನ ಮನೆಯ ಮೇಲೆ ವಾಸಿಸುತ್ತಿದ್ದುವು. ಬೆಳಗ್ಗೆ ಬಿಲ್ಲು ಬೆಕ್ಕು ಕರೆಯಿತು. ಮ್ಯಾಂ.. ಮ್ಯಾಂ.. ಟುಮ್ಮಿ.. ಡುಮ್ಮಿ ಓಡಿಬನ್ನಿ.. ಟುಮ್ಮಿ ಮತ್ತು ಡುಮ್ಮಿ ಓಡಿ ಬಂದುವು. ಇಂದು ಟುಮ್ಮಿ ಮತ್ತು ಡುಮ್ಮಿಯ ಹುಟ್ಟುಹಬ್ಬವಾಗಿದೆ.

- ಹುಟ್ಟುಹಬ್ಬದ ಆಚರಣೆಗೆ ಬೇಕಾದ ಸಿದ್ಧತೆಗಳು ನಡೆಯುತ್ತಿವೆ.
- ನೀವು ಹುಟ್ಟುಹಬ್ಬ ಆಚರಿಸಿದ್ದೀರಲ್ಲವೇ ? ಏನೇನು ಮಾಡಿದ್ದೀರಿ ?
- ಬಿಲ್ಲು ಬೆಕ್ಕು ಮತ್ತು ಮಲ್ಲು ಬೆಕ್ಕು ಏನೇನು ತಯಾರಿ ನಡೆಸಿರಬಹುದು ? (ಸ್ವತಂತ್ರ ಪ್ರತಿಕ್ರಿಯೆ)

- ಟುಮ್ಮಿ ಮತ್ತು ಡುಮ್ಮಿ ಕೇಕು ಕೊಯ್ಯಲು ತಯಾರಾದರು. ಅವರು ಪದ್ಯ ಹಾಡಲು ಆರಂಭಿಸಿದರು. ಏನು ಹಾಡಿರಬಹುದು? ನಾವು ಹಾಡೋಣವೇ?

ಹ್ಯಾಪಿ ಬರ್ತ್ ಡೇ ಟುಮ್ಮಿ
ಮ್ಯಾಂ.. ಮ್ಯಾಂ.. ಮ್ಯಾಂ.. ಮ್ಯಾಂ..
ಹ್ಯಾಪಿ ಬರ್ತ್ ಡೇ ಡುಮ್ಮಿ
ಮ್ಯಾಂ.. ಮ್ಯಾಂ.. ಮ್ಯಾಂ.. ಮ್ಯಾಂ.. (ಆವರ್ತಿಸುವುದು)

- ಟುಮ್ಮಿಯೂ ಡುಮ್ಮಿಯೂ ಕೇಕು ಕತ್ತರಿಸಿದರು. ಎಲ್ಲರಿಗೂ ಹಂಚಿದರು. ಅವರು ತಿಂದರು. ಹಾಯ್, ಒಳ್ಳೆಯ ಕೇಕ್.. ಸಿಹಿಯಾದ ಕೇಕ್.. ಅವರು ಗಟ್ಟಿಯಾಗಿ ಹಾಡಿದರು. ಮ್ಯಾಂ.. ಮ್ಯಾಂ.. ಮ್ಯಾಂ.. ಅವರಿಗೆ ಏನೆಲ್ಲ ಉಡುಗೊರೆಗಳು ಸಿಕ್ಕಿರಬಹುದು? ಇನ್ನು ಏನಾದರೂ ಇವೆಯೇ? ಟುಮ್ಮಿ ಕೇಳಿದಳು.

ಇದೆಯಲ್ಲಾ.. ಬಿಲ್ಲು ಬೆಕ್ಕು ಒಂದು ಕಟ್ಟನ್ನು ಬಿಚ್ಚಿತು. ಕಟ್ಟಿನಲ್ಲಿ ಏನೆಲ್ಲ ಇದ್ದಿರಬಹುದು? ಹಾಯ್.. ಬಾಳೆಹಣ್ಣು, ಮಾವು, ಕೇರೆಟ್, ಡುಮ್ಮಿ ಹೇಳಿದಳು. ಎರಡು ಕಟ್ಟುಗಳನ್ನು ಟುಮ್ಮಿ ಮತ್ತು ಡುಮ್ಮಿಯ ಮುಂದಿಟ್ಟರು. ಇಷ್ಟವಿರುವುದು ತೆಗೆಯಬಹುದು. ಆದರೆ ಒಂದು ವಿಷಯ.. ಒಂದನೇ ಕಟ್ಟದಿಂದ ಎಷ್ಟು ವಸ್ತುಗಳನ್ನು ತೆಗೆಯುತ್ತೇವೆಯೋ ಅಷ್ಟೇ ವಸ್ತುಗಳನ್ನು ಎರಡನೇ ಕಟ್ಟದಿಂದಲೂ ತೆಗೆಯಬೇಕು. ಡುಮ್ಮಿ ಆಲೋಚಿಸಿದಳು. ಡುಮ್ಮಿ ಎರಡು ಕಟ್ಟದಿಂದಲೂ ತೆಗೆದಳು. ಮಲ್ಲು ಬೆಕ್ಕು ಎಣಿಸಿ ನೋಡಿತು. ಸರಿಯಾಗಿದೆಯೇ? ಡುಮ್ಮಿ ಬೆಕ್ಕು ಕೇಳಿತು. ಟುಮ್ಮಿಯೂ ಕೇಳಿದಳು. ಸರಿಯಾಗಿದೆಯೇ?

ವರ್ಕ್ ಶೀಟ್ 6.2 – ಗೆರೆ ಎಳೆದು ಜೋಡಿಸುವ – ನೀಡುವುದು.

**ಚಿತ್ರ ಓದು** : ಟುಮ್ಮಿ ಮತ್ತು ಡುಮ್ಮಿ ಏನೆಲ್ಲ ತೆಗೆದಿರಬಹುದು?

- ಪ್ರತಿಯೊಂದು ಎಷ್ಟರಂತೆ ಇವೆ?
- ಗಣಿತ ಸಮಸ್ಯೆಯನ್ನು ಪರಿಹರಿಸಲು ಸರಳ ಪ್ರಶ್ನೆಗಳನ್ನು ಕೇಳುವುದು.
- ಎಷ್ಟು ವಡೆಗಳಿವೆ?
- ಬಲಭಾಗದಲ್ಲಿ ಅಷ್ಟೇ ಸಂಖ್ಯೆಯಲ್ಲಿರುವ ವಸ್ತು ಯಾವುದು?
- ಇದೇ ರೀತಿಯಲ್ಲಿ ಪ್ರತಿಯೊಂದನ್ನೂ ಕಂಡುಹಿಡಿದು ಗೆರೆ ಎಳೆದು ಜೋಡಿಸಬೇಕು.
- ಪರಸ್ಪರ ಮೌಲ್ಯಮಾಪನ ಮಾಡಿ ಅಭಿಪ್ರಾಯ ಹೇಳುವುದು.
- ಒಂದೇ ಸಂಖ್ಯೆಯಲ್ಲಿ ಬರುವವುಗಳನ್ನು ಜೊತೆಗೊಳಿಸಿದರೋ?
- ಸರಿಯಾದವರಿಗೆ ಪ್ರೋತ್ಸಾಹ ನೀಡುವುದು. ಬೆಂಬಲ ಅಗತ್ಯ ಇರುವವರಿಗೆ ಅಧ್ಯಾಪಿಕೆ ಸಹಾಯ ಮಾಡುವುದು. ಹಾಗೆಯೇ ಟುಮ್ಮಿ ಮತ್ತು ಡುಮ್ಮಿ ಗೆದ್ದರು. ಅವರಿಗೆ ಬಹುಮಾನ ನೀಡಲಾಯಿತು. ಏನು ಬಹುಮಾನ? ಸಿಹಿಯಾದ ಮುತ್ತುಗಳು..

**ಮೌಲ್ಯಮಾಪನ** : ಒಂದೇ ಸಂಖ್ಯೆಯಲ್ಲಿರುವವುಗಳನ್ನು ಪರಸ್ಪರ ಗೆರೆ ಎಳೆದು ಜೋಡಿಸಲಾಗಿದೆ.

- ಚಿತ್ರಗಳನ್ನು ಎಣಿಸಿ ನೋಡಿ ಸಂಖ್ಯೆ ಹೇಳಲು ಸಾಧ್ಯವಾಗುವುದು.

## ವರ್ಕ್ ಶೀಟ್ 6.3 – ಆಹಾರಕ್ಕೆ ವೃತ್ತ ಹಾಕಿರಿ.

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಕಂಡುಹಿಡಿಯುವ ಚಟುವಟಿಕೆಯಲ್ಲಿ ಭಾಗವಹಿಸಲೂ, ಅನುಭವದ ಆಧಾರದಲ್ಲಿ ನಿಗಮನಗಳನ್ನು ಮಂಡಿಸಲೂ ಸಾಧ್ಯವಾಗುವುದು. (31)

**ಆಶಯ** : ಹಲವು ತರದ ಆಹಾರಗಳಿವೆ.

**ಸಾಮಗ್ರಿಗಳು** : ವರ್ಕ್ ಶೀಟು

**ಸಂದರ್ಭ** : ಹಸಿವಿನ ಸ್ಥಿತಿ - ಅಭಿನಯಿಸುವ ಚಟುವಟಿಕೆಯ ನಂತರ

**ಪ್ರಕ್ರಿಯೆ** :

**ಆಖ್ಯಾನ** : ಕೇಳು ಮಾವ ವಡೆ ಮಾರಲು ಹೊರಟರು. ಬುಟ್ಟಿಯಲ್ಲಿ ತುಂಬಿಸಿಕೊಂಡು ಕೇಳು ಮಾವ ಹೊರಟರು. ಕೇಳು ಮಾವ ಒಂದು ಬಟ್ಟೆಯಿಂದ ವಡೆಯನ್ನು ಮುಚ್ಚಿದ್ದರು. ವಡೆಯನ್ನು ಬಟ್ಟೆಯಿಂದ ಮುಚ್ಚಲು ಕಾರಣವೇನಾಗಿರಬಹುದು ?

- ಕೇಳು ಮಾವ ಏನೋ ಕೂಗಿ ಹೇಳುತ್ತಿದ್ದಾರೆ. ಕೇಳು ಮಾವ ಹೇಳುತ್ತಿರುವುದು ಏನಾಗಿರಬಹುದು ? (ಸ್ವತಂತ್ರ ಪ್ರತಿಕ್ರಿಯೆ) ವಡೆ ಬೇಕೆ ವಡೆ - ಎಂದು ಕರೆದು ಹೇಳುತ್ತಾ ಕೇಳು ಮಾವ ಹೋಗುತ್ತಿದ್ದರು. ಕೇಳು ಮಾವ ವಡೆ ಮಾರಲು ಹೊರಟದ್ದು.

(ಅಭಿನಯಿಸಿ ತೋರಿಸಬಹುದೇ?)

- ಸುಂದರಿ ಕಾಗೆ ಮತ್ತು ಸುಂದರ ಕಾಗೆ ಇದನ್ನು ನೋಡಿದುವು. ಹಾಯ್ ವಡೆಗಳು, ಅವುಗಳಿಗೆ ಆಸೆಯಾಯಿತು. ನನಗೆ ವಡೆ ತಿನ್ನಬೇಕು. ಸುಂದರಿ ಕಾಗೆ ಹೇಳಿತು. ಏನು ಮಾಡೋಣ? ಒಂದು ಉಪಾಯ.. ಸುಂದರ ಕಾಗೆ ಹೇಳಿತು. ಏನಾಗಿರಬಹುದು ಆ ಉಪಾಯ? ಹೇಳಬಹುದೇ?

(ಊಹಿಸಿ ಹೇಳುವುದು)

- ಸುಂದರ ಕಾಗೆ ಮುಂದೆಯೂ, ಸುಂದರಿ ಕಾಗೆ ಹಿಂದೆಯೂ ಹಾರಿಬಂತು. ಸುಂದರ ಕಾಗೆ ಬಟ್ಟೆಯನ್ನು ಕಚ್ಚಿಕೊಂಡು ಹಾರಿತು. ಹಿಂದೆಯೇ ಇದ್ದ ಸುಂದರಿ ಕಾಗೆ ವಡೆಯನ್ನು ಕಚ್ಚಿಕೊಂಡು ಹಾರಿತು. ಕೇಳು ಮಾವನಿಗೆ ಕಾಗೆಗಳ ಮೇಲೆ ಸಿಟ್ಟು ಬಂತು. ಸಿಟ್ಟಿನಲ್ಲಿ ಕೇಳು ಮಾವ ಏನು ಹೇಳಿರಬಹುದು? (ಮಕ್ಕಳು ಊಹಿಸಿ ಹೇಳುವುದು)
- ಅವುಗಳು ಹಾರಿ ಒಂದು ಮಾವಿನ ಮರದ ಗೆಲ್ಲಿನ ಮೇಲೆ ಕುಳಿತವು. ಆಗ ಗಟ್ಟಿಯಾಗಿ ನಗಾಡುವುದು ಕೇಳಿಸಿತು. ಯಾರಾಗಿರಬಹುದು?

ಮಾವಿನ ಮರದ ಗೆಲ್ಲಿನಲ್ಲಿರುವ ಮಾವಿನ ಹಣ್ಣು ನಗಾಡಿತು. ನೀವು ದೊಡ್ಡ ತಪ್ಪುಗಾರರಲ್ಲವೇ? ನಾನು ಹಣ್ಣಾಗಿ ನಿಂತಿರುವುದು ನೀವು ನೋಡಲಿಲ್ಲವೇ? ಮಾವು ಜೋರಾಗಿ ನಗಾಡಿತು. ಸುಂದರ ಕಾಗೆಗೆ ಸಿಟ್ಟು ಬಂತು. ಮಾವಿನ ಹಣ್ಣಿಗೆ ಕುಕ್ಕಿತು. ಅಯ್ಯೋ.. ಮಾವು ಕೆಳಗೆ ಬಿತ್ತು. ಮಾವಿನ ಅಡಿಯಲ್ಲಿ ಟುಮ್ಮಿಯೂ ಮಲ್ಲು ಬೆಕ್ಕು ಆಡುತ್ತಿದ್ದುವು. ಪ್ಲಿಂಗಾ..ಪ್ಲಿಂಗಾ.. ಶಬ್ದ ಕೇಳಿ ಟುಮ್ಮಿ ನೋಡಿತು. ಹಾಯ್ ಹಣ್ಣಾದ ಮಾವು.. ಟುಮ್ಮಿ ಮಾವಿನ ಹಣ್ಣು ತೆಗೆದುಕೋ.. ಇವತ್ತು ನಿನ್ನ ಹುಟ್ಟುಹಬ್ಬವಲ್ಲವೇ? ಮಲ್ಲು ಬೆಕ್ಕು ಹೇಳಿತು.

ಮಲ್ಲು ಬೆಕ್ಕು ಒಂದೇ ನೆಗೆತ.. ವಡೆ ತೆಗೆದುಕೊಂಡು ಓಡಿ ಹೋಯಿತು.

ಮಲ್ಲು ಬೆಕ್ಕು ವಡೆ ತೆಗೆದುಕೊಂಡು ಓಡಿ ಹೋದದ್ದು ಹೇಗೆ?

(ಅಭಿನಯ)

- ಮಾವಿನ ಹಣ್ಣಿನೊಂದಿಗೆ ಟುಮ್ಮಿ ಬೆಕ್ಕು ಅಡುಗೆ ಮನೆಗೆ ಹೋಯಿತು. ಅಮ್ಮನಿಗೆ ಮಾವು ತೋರಿಸಿತು.
- ಅವರು ಪರಸ್ಪರ ಹೇಗೆ ಮಾತನಾಡಿರಬಹುದು?
- ಟುಮ್ಮಿ ಮೇಜಿನ ಮೇಲೆ ನೋಡಿತು. ತುಂಬಾ ವಸ್ತುಗಳು.
- ಮೇಜಿನ ಮೇಲೆ ಟುಮ್ಮಿ ನೋಡಿದ ವಸ್ತುಗಳನ್ನು ನೋಡಬೇಡವೇ?

ವರ್ಕ್ ಶೀಟ್ 6.3 – ಆಹಾರಕ್ಕೆ ವೃತ್ತ ಹಾಕಿರಿ – ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಏನೆಲ್ಲ ಇವೆ?

- ಇವುಗಳಲ್ಲಿ ಆಹಾರಕ್ಕಾಗಿ ಉಪಯೋಗಿಸುವವುಗಳು ಯಾವುವೆಲ್ಲ? ಅದರ ಸುತ್ತಲೂ ಉರುಟು ಹಾಕಿರಿ.

**ಮೌಲ್ಯಮಾಪನ** : ಆಹಾರ ವಸ್ತುಗಳನ್ನು ತಿಳಿದು ಹೆಸರು ಹೇಳಲು ಸಾಧ್ಯವಾಗುವುದು.

-ಪೆನ್ನು, ಪೆನ್ಸಿಲು ಬಿಟ್ಟು ಉಳಿದವುಗಳ ಸುತ್ತಲೂ ಗೆರೆ ಎಳೆಯಲಾಗಿದೆ.

## ವರ್ಕ್ ಶೀಟ್ 6.4 – ಒಳ್ಳೆಯ ಆಹಾರ ಅಭ್ಯಾಸಗಳು ಯಾವುವು?

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಆರೋಗ್ಯಾಭ್ಯಾಸಗಳು, ಶುಚಿತ್ವಾಭ್ಯಾಸಗಳು ಎಂಬಿವುಗಳ ಕುರಿತು ತಿಳಿಯುವುದು.(36)

**ಆಶಯ** : ಶುಚಿಯಾದ ಆಹಾರ ಸೇವಿಸಬೇಕು.

**ಸಾಮಗ್ರಿಗಳು** : ವರ್ಕ್ ಶೀಟು

**ಸಂದರ್ಭ** : ಒಳ್ಳೆಯ ಅಹಾರಾಭ್ಯಾಸಗಳ ಕುರಿತು ಚರ್ಚೆ ನಡೆಸಿದ ನಂತರ ವರ್ಕ್ ಶೀಟು ಮಂಡಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಊಟ ತಯಾರಾಗಿದೆ. ಟುಮ್ಮಿಯ ಅಮ್ಮ ಕರೆದು ಹೇಳಿದಳು.

- ಟುಮ್ಮಿಯ ಅಮ್ಮ ಒಂದು ಹಾಡು ಹಾಡಿದಳು. ನಾವೂ ಹಾಡೋಣವೇ ?

ತುಪ್ಪದಿ ಹುರಿದ ಹಪ್ಪಳವಿದೆ.
ಪಾಯಸವಿದೆ.. ಹಣ್ಣುಂಟು..
ಹಾಗಲಕಾಯಿ ಪಲ್ಯವಿದೆ.
ಚಟ್ನಿ, ಸಾರು, ಅನ್ನವಿದೆ.
ಪಡುವಲಕಾಯಿ ಸಾಂಬಾರಿದೆ.
ನುಗ್ಗೆಕಾಯಿಯ ಅವಿಲೂ ಇದೆ.
ಬೆಳ್ತಿಗೆ ಅಕ್ಕಿಯ ಅನ್ನವೂ ಬಡಿಸಿದೆ

**ಆಟ** : ಇನ್ನು ನಾವು ಆಡೋಣವೇ ?

- ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡುವುದು. ಒಂದು ಗುಂಪು ಮನೆ ಸಾಮಗ್ರಿಯ ಹೆಸರು ಹೇಳುವುದು. ಅದು ಆಹಾರಕ್ಕಾಗಿ ಉಪಯೋಗಿಸುವುದಾದರೆ 'ಇಂ.. ಇಂ' ಎಂದು ಎರಡನೇ

ಗುಂಪಿನವರು ಹೇಳಬೇಕು. ಆಹಾರವಾಗಿ ಉಪಯೋಗಿಸದಿರುವ ವಸ್ತುವಾದರೆ, ಬೆರಳಿನಲ್ಲಿ ಚಿಟಿಕೆ ಹೊಡೆಯಬೇಕು. ಗುಂಪು ಬದಲಿಸಿ ಆಟ ಆವರ್ತಿಸಬೇಕು.

(ಹೆಚ್ಚು ಅಂಕಗಳನ್ನು ಗಳಿಸಿದ ಗುಂಪನ್ನು ಅಭಿನಂದಿಸುವುದು.)

ವರ್ಕ್ ಶೀಟ್ 6.4 – ಒಳ್ಳೆಯ ಆಹಾರ ಅಭ್ಯಾಸಗಳು ಯಾವುವು? – ನೀಡುವುದು.

**:** ವರ್ಕ್ ಶೀಟು ವಿತರಿಸುವುದು.

- ಚಿತ್ರದಲ್ಲಿ ಕಾಣುವ ವಿಚಾರಗಳನ್ನು ಮಕ್ಕಳು ಹೇಳುವರು.
- ಪ್ರತಿಯೊಂದು ಚಿತ್ರದ ವಿವರಗಳನ್ನು ಹೇಳಬೇಕು.
- ಇದರಲ್ಲಿ ಯಾವುವೆಲ್ಲ ಒಳ್ಳೆಯ ಆಹಾರ ಅಭ್ಯಾಸಗಳಿವೆ?
- ಮಾಡಬಾರದ್ದು ಏನೆಲ್ಲ?
- ಒಳ್ಳೆಯ ಆಹಾರ ಅಭ್ಯಾಸಗಳನ್ನು ತೋರಿಸುವ ಚಿತ್ರದ ಹತ್ತಿರವಿರುವ ಕೋಣೆಗೆ ಬಣ್ಣ ಹಚ್ಚುವುದು.

**ಮೌಲ್ಯಮಾಪನ** : ಒಳ್ಳೆಯ ಅಹಾರ ಅಭ್ಯಾಸಗಳನ್ನು ತಿಳಿದುಕೊಂಡು ಬಣ್ಣ ಹಚ್ಚಲು ಸಾಧ್ಯವಾಗುತ್ತದೆ.

# ಥೀಂ 7 – ಹಬ್ಬಗಳು, ಸ್ವಾತಂತ್ರ್ಯ ದಿನ

ಸ್ವಾತಂತ್ರ್ಯ ಮತ್ತು ರಾಷ್ಟ್ರಧ್ವಜ ಎಂಬುದು ಆಮೂರ್ತವಾದ ಆಶಯವಾಗಿದೆ. ಆದುದರಿಂದ ರಾಷ್ಟ್ರಧ್ವಜಕ್ಕೆ ಬಣ್ಣ ಹಚ್ಚಿ, ಬ್ಯಾಡ್ಜ್ ತಯಾರಿಸಿ, ಹಾಡಿನ ಮೂಲಕ ಅನುಭವ ನೀಡಿದರೆ ಮಾತ್ರ ಸಾಕು.

**ಚಟುವಟಿಕಾ ಕ್ರಮ**

1. ಆನೆಮರಿಯ ಹುಟ್ಟುಹಬ್ಬ (ಕಥಾಪದ್ಯ) + ಬಣ್ಣ ಹಚ್ಚುವ - ವರ್ಕ್ ಶೀಟು 7.1 – "ಆನೆಮರಿಯ ಹುಟ್ಟುಹಬ್ಬ" ನೀಡುವುದು.

↓

2. ತರಗತಿ ಕೋಣೆ ಆಲಂಕರಿಸುವುದು - ತೋರಣ ನಿರ್ಮಿಸುವುದು - ತೋರಣಕ್ಕೆ ಬಣ್ಣ ನೀಡುವುದು - ವರ್ಕ್ ಶೀಟು 7.2 – "ತೋರಣಗಳನ್ನು ತಯಾರಿಸುವ"

↓

3. ಆಟದಲ್ಲಿ ಭಾಗವಹಿಸುವುದು.

↓

4. ಹುಟ್ಟುಹಬ್ಬದ ಹಾಡುಗಳು / ಸ್ವಾತಂತ್ರ್ಯ ದಿನ ಗೀತೆಗಳು

↓

5. ಬಾವುಟ ನಿರ್ಮಾಣ – ಬಣ್ಣ ಹಚ್ಚುವುದು
ವರ್ಕ್ ಶೀಟು 7.3 – "ಬಾವುಟ ನಿರ್ಮಿಸುವ" ನೀಡುವುದು.

↓

6. ಮೆರವಣಿಗೆ - ವರ್ಕ್ ಶೀಟು 7.4 – "ಬ್ಯಾಡ್ಜ್ ತಯಾರಿಸುವ" ನೀಡುವುದು.

↓

7. ಅನುಭವ ಹಂಚುವುದು.

↓

8. ಸ್ವತಂತ್ರ ಆಟಗಳು / ಸ್ವಾತಂತ್ರ್ಯ ದಿನ ಕಾರ್ಯಕ್ರಮಗಳು

## ವರ್ಕ್ ಶೀಟ್ 7.1 – ಆನೆಮರಿಯ ಹುಟ್ಟುಹಬ್ಬ

**ವಿಕಾಸ ಮಂಡಲ** : ಶಾರೀರಿಕ ಚಲನಾತ್ಮಕ ವಿಕಾಸ
- ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಕ್ರಯೋನ್ಸ್ ಉಪಯೋಗಿಸಿ ಸ್ವತಂತ್ರವಾಗಿ ಬಣ್ಣ ಹಚ್ಚಲು ಸಾಧ್ಯವಾಗುವುದು.(4)
- ವಸ್ತುಗಳನ್ನು ಹೋಲಿಸಲು ಗಣಿತ ಭಾಷೆಯನ್ನು ಉಪಯೋಗಿಸುವುದು. ದೊಡ್ಡದು / ಸಣ್ಣದು(39)

**ಆಶಯ** : ಹುಟ್ಟುಹಬ್ಬ, ವಿವಾಹ ಮೊದಲಾದ ಆಚರಣೆಗಳು ಮನೆಯಲ್ಲಿ ನಡೆಸಲಾಗುವುದು.
-

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್, ಕಥೆ, ಪದ್ಯ

**ಸಂದರ್ಭ** : ಹುಟ್ಟುಹಬ್ಬಕ್ಕೆ ಸಂಬಂಧಿಸಿದ ಕಥೆ / ಒಂದು ಮಗುವಿನ ಹುಟ್ಟುಹಬ್ಬದ ದಿನ / ಹುಟ್ಟುಹಬ್ಬದ ಅನುಭವಗಳನ್ನು ಹೇಳುವುದು.

**ಪ್ರಕ್ರಿಯೆ** :

**ಆಖ್ಯಾನ** : ಕಥಾ ಗೀತೆ / ಹರಿಕಥೆ – ಈ ಕಥಾ ಗೀತೆಯನ್ನು / ಹರಿಕಥೆ ರೂಪದಲ್ಲೋ, ಆಖ್ಯಾನ ರೂಪದಲ್ಲೋ ಮಂಡಿಸಿರಿ. ಅಭಿನಯ, ಭಾವಾಭಿನಯ ಎಂಬಿವುಗಳ ಮೂಲಕ ಮಂಡಿಸಬೇಕು.

ಆನೆಮರಿಯ ಜನ್ಮದಿನ
ಈ ದಿನವಲ್ಲವೇ ಜನ್ಮದಿನ
ಅಂದದ ಉಡುಪು ತೆಗೆದಿಲ್ಲ
ಆನೆಮರಿಗೆ ತಿಳಿದಿಲ್ಲ

ಬಾ ಬಾ ಬಾ ಬಾ ಆನೆಮರಿ
ತೋಡಲಿ ಸ್ನಾನವ ಮಾಡೋಣ

ಅಪ್ಪ ಕರೆದನು ಪ್ರೀತಿಯಲಿ

ಸೋಮಾರಿ ಮರಿಯು ಎದ್ದಿಲ್ಲ

ಬಾ ಬಾ ಮರಿಯೇ ಮುದ್ದಿನ ಮರಿಯೇ

ಆಡುವ ನಾವೂ ನೀರಾಟ

ಅಮ್ಮ ಕರೆದಳು ಪ್ರೀತಿಯಲಿ

ಸೋಮಾರಿ ಮರಿಯು ಎದ್ದಿಲ್ಲ

ಸೊಂಡಿಲ ತುಂಬಾ ನೀರನು ತುಂಬಿ

ಬಂದಳು ಅಮ್ಮ.. ನಗುವಿನಲಿ

ಸೊಂಡಿಲ ತುಂಬಾ ನೀರನು ತುಂಬಿ

ಬಂದನು ಅಪ್ಪ ಹರುಷದಲಿ

ಶೂ ಶೂ ಶೂ ಶೂ ಮಳೆ ಬಂತು

ಸೋಮಾರಿ ಆನೆಗೆ ಸ್ನಾನವು ಆಯಿತು

ಅಂಗಿ ಹಾಕಿತು ಮರಿ ಆನೆ

ಪೌಡರು ಹಾಕಿತು ಮರಿ ಆನೆ

ಅಂದದಿ ಹೊರಟಿತು ಹರುಷದಲಿ

ತಿಳಿಯದೆ ವಿಷಯ ಏನೆಂದು

ಮೋಟು ಮೊಲವೂ ಚಿಂಕಿ ಇಲಿಯೂ

ಚುಕ್ಕಿ ಜಿಂಕೆಯೂ ಬಂದಿತಲ್ಲ

ಕಬ್ಬು, ಬೆಲ್ಲ, ಹಲಸಿನಕಾಯಿ

ಸಿಹಿ ಸಿಹಿ ಹಣ್ಣು, ಜೊತೆಗೆ ಮಡಲು

ತಿನ್ನಲು ಬಂತು ಹಲವು

ವಿಷಯ ಏನೆಂದು

ತಿಳಿಯದೆ ಕೇಳಿತು ಆನೆಮರಿ

ಏನಿದೆಯಮ್ಮ ವಿಶೇಷ?

ಏನಿದೆಯಪ್ಪ ವಿಶೇಷ?

ಏನಿದು ಭಾರೀ ಗಮ್ಮತ್ತು?

ಹ್ಯಾಪಿ ಹ್ಯಾಪಿ ಆನೆಮರಿ

ಹ್ಯಾಪಿ ಬರ್ತ್ ಡೇ ಆನೆಮರಿ

ಗೆಳೆಯರು ಜತೆಯಲಿ ಹಾಡಿದರು

ನಾಚಿ ಹೋಯಿತು ಆನೆಮರಿ

ವರ್ಕ್ ಶೀಟ್ 7.1 – ಆನೆಮರಿಯ ಹುಟ್ಟುಹಬ್ಬ – ನೀಡುವುದು.

**ಚಿತ್ರ ಓದು** : ಆನೆಮರಿ ಏನು ಮಾಡುತ್ತಿದೆ?

- ಚಿತ್ರದಲ್ಲಿ ಅತೀ ದೊಡ್ಡ ಜೀವಿ ಯಾವುದು?
- ಅತೀ ಸಣ್ಣ ಜೀವಿ ಯಾವುದು?
- ಎಷ್ಟು ಉಡುಗೊರೆ ಪೆಟ್ಟಿಗೆಯಿದೆ? ಎಣಿಸಿ ನೋಡುವಾ..

**ಬಣ್ಣ ಹಚ್ಚುವ** : ಆನೆಮರಿಗೆ ಇಷ್ಟವಿರುವ ಬಣ್ಣ ಹಚ್ಚಿರಿ. (ಆನೆಗೆ ಮಕ್ಕಳು ಬೇರೆ ಬೇರೆ ಬಣ್ಣ ನೀಡಬಹುದು) ಅವರನ್ನು ಅಂಗೀಕರಿಸಬೇಕು. ಕೆಂಪು ಅಂಗಿ ಹಾಕಿದ ಆನೆ ಚಂದವಿದೆ. ಇದೋ.. ನೀಲಿ ಆನೆ. ಎಷ್ಟು ಚಂದವಿದೆ.

- ಮಕ್ಕಳ ಹುಟ್ಟುಹಬ್ಬದ ವಿಶೇಷಗಳನ್ನು ಚರ್ಚೆ ಮಾಡಬೇಕು.

**ಮೌಲ್ಯಮಾಪನ** : ಆನೆಮರಿಯನ್ನು ಕಂಡುಹಿಡಿದು ಅಂದವಾಗಿ ಬಣ್ಣ ನೀಡಲು ಸಾಧ್ಯವಾಗುವುದು.

- ಬಣ್ಣ ಹಚ್ಚುವಿಕೆಯ ಸೂಕ್ಷ್ಮತೆ
- ಜೀವಿಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.
- ಅತೀ ದೊಡ್ಡ, ಅತೀ ಸಣ್ಣ ಜೀವಿಗಳನ್ನು ಕಂಡುಹಿಡಿದು ಹೇಳಲಾಗಿದೆ.

## ವರ್ಕ್ ಶೀಟ್ 7.2 – ತೋರಣಗಳನ್ನು ತಯಾರಿಸುವ

**ವಿಕಾಸ ಮಂಡಲ** : ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಕ್ರಯೋನ್ಸ್ ಉಪಯೋಗಿಸಿ ಸ್ವತಂತ್ರವಾಗಿ ಚಿತ್ರಗಳಿಗೆ ಬಣ್ಣ ಹಚ್ಚಲು ಸಾಧ್ಯವಾಗುವುದು.(4)

**ಆಶಯ** : ದಿನಾಚರಣೆಯ ಭಾಗವಾಗಿ ಮನೆ ಪರಿಸರ, ಶಾಲೆ ಎಂಬಿವುಗಳನ್ನು ಅಲಂಕರಿಸುತ್ತಾರೆ.

**ಸಾಮಗ್ರಿಗಳು** : ಗೋಣಿ ನೂಲು, ಬಣ್ಣದ ಕಾಗದ, ತಿರಿ ಮಡಲು, ಎಲೆಗಳು, ಅಂಟು, ಮಡಲಿನ ಕಡ್ಡಿ, ಕಟೌಟು.

**ಸಂದರ್ಭ** : ಸ್ವಾತಂತ್ರ್ಯ ದಿನಾಚರಣೆ

**ಪ್ರಕ್ರಿಯೆ** :

**ನಿರ್ಮಾಣ** : ತೋರಣ ನಿರ್ಮಿಸುವುದು

**ಚರ್ಚೆ** : ದಿನಾಚರಣೆಗಳನ್ನು ನಡೆಸುವಾಗ ಅಲಂಕರಿಸುವುದಿಲ್ಲವೇ ? ಹೇಗೆಲ್ಲಾ ಅಲಂಕರಿಸಬಹುದು ?

- ತಿರಿ ಮಡಲುಗಳನ್ನುಪಯೋಗಿಸಿ
- ಎಲೆಗಳನ್ನು ಉಪಯೋಗಿಸಿ, ಬಟ್ಟೆಗಳಿಂದ
- ಬಲ್ಬುಗಳನ್ನು ಬೆಳಗಿಸಿ
- ಬಣ್ಣದ ಕಾಗದದ ತೋರಣ ಮಾಡಿ

**ನಿರ್ಮಾಣ** : ನಾವು ತೋರಣ ನಿರ್ಮಿಸುವ

- ಗೋಣಿನೂಲು, ಅಂಟು, ಬಣ್ಣದ ಕಾಗದ ಎಂಬಿವುಗಳನ್ನು ನೀಡುವುದು. ನೂಲನ್ನು ಗಟ್ಟಿಯಾಗಿ ಎಳೆದು ಕಟ್ಟಬೇಕು. ಅಂಟನ್ನು ಗೆರಟೆಯಲ್ಲಿ ಎರೆದು ಕೊಡಬೇಕು. ಮಡಲಿನ ಕಡ್ಡಿಯನ್ನು ಅಂಟಿನಲ್ಲಿ ಮುಳುಗಿಸಿ, ಬಣ್ಣದ ಕಾಗದದ ಮೇಲ್ಭಾಗದಲ್ಲಿ ಹಚ್ಚಿ ನೂಲಿನಲ್ಲಿ ಅಂಟಿಸುವ ರೀತಿಯನ್ನು ತೋರಿಸಿ ಕೊಡಬೇಕು. ಮಕ್ಕಳು ತೋರಣ ಅಂಟಿಸಲಿ. ಸಹಾಯ ಮಾಡಬೇಕು. ಚಟುವಟಿಕೆ ಪೂರ್ತೀಕರಿಸಿದ ನಂತರ ತೋರಣವನ್ನು ತರಗತಿಯಲ್ಲಿ ಎತ್ತರದಲ್ಲಿ ಎಳೆದು ಕಟ್ಟಬೇಕು. ಜಾತ್ರೆಗೆ ತೂಗು ಹಾಕುವ ಬಟ್ಟೆಯ ತೋರಣದ ಸಣ್ಣ ಮಾದರಿಯನ್ನು ತರಗತಿಯಲ್ಲಿ ಪ್ರದರ್ಶಿಸಬೇಕು. ಪ್ರತ್ಯೇಕತೆಗಳಾದ ಬಣ್ಣ, ಆಕೃತಿ ಎಂಬಿವುಗಳನ್ನು ಚರ್ಚಿಸಬೇಕು. ದೂರದಿಂದ ಬಣ್ಣದಿಂದಲೂ, ಆಕೃತಿಯಿಂದಲೂ, ಹೊಳಪಿನಿಂದಲೂ ಗಮನಿಸುತ್ತಾರೆ.

ವರ್ಕ್ ಶೀಟ್ 7.2 – ತೋರಣಗಳನ್ನು ನಿರ್ಮಿಸಲು – ನೀಡುವುದು.

- ಇದೇ ರೀತಿಯ ಬಣ್ಣವಿರುವ ತೋರಣಗಳನ್ನು ನಿಮಗೆ ನೀಡುತ್ತೇನೆ. ಒಂದಕ್ಕೆ ನೀವೇ ಬಣ್ಣ ಹಚ್ಚಬೇಕು. ಹಳದಿ, ಕೆಂಪು, ನೀಲಿ, ಹಸಿರು ಎಂಬೀ ಬಣ್ಣಗಳ (ಕ್ರಯೋನ್ಸ್, ಬಣ್ಣದ ಪೆನ್ಸಿಲು) ನೀಡಬೇಕು. ಮೊದಲು ಕೆಂಪು, ಮತ್ತೆ ನೀಲಿ, ನಂತರ ಹಸಿರು, ನಂತರ ಹಳದಿ ಎಂಬೀ ರೀತಿಯಲ್ಲಿ ಬಣ್ಣ ಹಚ್ಚಲಿ. (ಇದರೊಂದಿಗಿರುವ ಕಟೌಟುಗಳನ್ನು ನೀಡಿಯೂ ಬಣ್ಣ ಹಚ್ಚಲು ಸೂಚಿಸಬಹುದು.)
- ಪ್ರಕೃತಿ ಸೌಹಾರ್ದ ತೋರಣ ಎಂಬ ನೆಲೆಯಲ್ಲಿ ತಿರಿಮಡಲು / ಎಲೆಗಳಿಂದ ಕೂಡಿದ ತೋರಣ ನಿರ್ಮಿಸಬಹುದು.
- ಬಣ್ಣ ಹಚ್ಚಿದ ತೋರಣಗಳನ್ನು ಕೂಡಾ ನೋಡುತ್ತಾರೆ.
- ಎಷ್ಟು ತೋರಣಗಳು?
- ಬಣ್ಣ ಹಚ್ಚದ ತೋರಣಕ್ಕೆ, ಬಣ್ಣ ಹಚ್ಚಿದ ತೋರಣದಂತೆ ಬಣ್ಣ ಹಚ್ಚಲು ಸೂಚಿಸುವುದು.

**ಮೌಲ್ಯಮಾಪನ** : ಸೂಚನೆಗನುಸರಿಸಿ ಸರಿಯಾಗಿ ಬಣ್ಣ ಹಚ್ಚಲು ಸಾಧ್ಯವಾಗುವುದು.

## ವರ್ಕ್ ಶೀಟ್ 7.3 – ಬಾವುಟ ತಯಾರಿಸುವ

**ವಿಕಾಸ ಮಂಡಲ** : ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಕ್ರಯೋನ್ಸ್ ಉಪಯೋಗಿಸಿ ಚಿತ್ರಕ್ಕೆ ಬಣ್ಣಹಚ್ಚಲು ಸಾಧ್ಯವಾಗುವುದು. (4)

- ಕಾಗದ ಕತ್ತರಿಸಲೂ ಅಂಟಿಸಲೂ ಸಾಧ್ಯವಾಗುವುದು.(6)

- ಕತ್ತರಿ ಉಪಯೋಗಿಸಿ ಕತ್ತರಿಸಲು ಸಾಧ್ಯವಾಗುವುದು. (7)

**ಆಶಯ** : ದಿನಾಚರಣೆಯ ಅಂಗವಾಗಿ ಮನೆ ಪರಿಸರ, ಶಾಲೆ ಎಂಬಿವುಗಳನ್ನು ಅಲಂಕರಿಸುತ್ತಾರೆ.

**ಸಾಮಗ್ರಿಗಳು** : ಅಂಟು, ಮಡಲಕಡ್ಡಿಗಳು, ಸ್ಟ್ರಾ, ಸ್ಟೇಪ್ಲರ್

**ಸಂದರ್ಭ** : ಸ್ವಾತಂತ್ರ್ಯೋತ್ಸವದ ಹಿಂದಿನ ದಿನ ಬಾವುಟ ನಿರ್ಮಾಣ

**ಪ್ರಕ್ರಿಯೆ** :

**ನಿರ್ಮಾಣ** : ಬಾವುಟ ನಿರ್ಮಾಣ

- ಭಾರತದ ಭಾವುಟ ಹಾರಾಡುವ ಚಿತ್ರ.

**ವಿಡಿಯೋ ಪ್ರದರ್ಶನ** : ವಿಡಿಯೋ ಪ್ರದರ್ಶಿಸುವುದು. ಬಾವುಟ ಹಾರಿಸುವಾಗ ಹೇಗೆ ನಿಲ್ಲಬೇಕು. ಒಂದು ಪದ್ಯ ಹಾಡುವ..

**ಪದ್ಯ ಹಾಡುವ** : ಎಲ್ಲರೂ ಎದ್ದು ನಿಲ್ಲುವರು.

ಬನ್ನಿ ಬನ್ನಿ ಗೆಳೆಯರೇ..
ಸಾಲುಗಟ್ಟಿ ನಿಲ್ಲಿರಿ.
ತಲೆಯನ್ನೆತ್ತಿ ನೇರನಿಂತು
ನಾವು ಧ್ವಜಕೆ ನಮಿಸುವಾ
ಕೇಸರಿ ಬಿಳಿ ಹಸಿರು
ಮೂರು ಬಣ್ಣ ಶೋಭಿಸೆ
ಮಧ್ಯದಲ್ಲಿ ಹೊಳೆಯುವಂಥ
ನೀಲಿ ಚಕ್ರ ಕಾಣಿಸೆ
ನಮ್ಮ ನಾಡ ಬಾವುಟ
ನಾವು ಅದಕೆ ನಮಿಸುವಾ

- ಎರಡನೇ ಸಲ ಪದ್ಯ ಹಾಡುವಾಗ ಮಕ್ಕಳು ವಿಡಿಯೋದಲ್ಲಿ ನೋಡಿದ ಪದ್ಯದಲ್ಲಿ ನಿಂತ ಹಾಗೆ ನಿಲ್ಲಬೇಕು. ಬಣ್ಣಗಳು, ಅಶೋಕ ಚಕ್ರ, ತೋರಿಸುತ್ತಾ ಕೇಸರಿ, ಬಿಳಿ, ಹಸಿರು ಎಂದು ಆರಂಭವಾಗುವ ಸಾಲುಗಳನ್ನು ಹಾಡಬೇಕು.

**ವರ್ಕ್ ಶೀಟ್ 7.3 – ಬಾವುಟ ತಯಾರಿಸುವ – ನೀಡುವುದು.**

: ಸೂಚಿಸುವ ರೀತಿಯಲ್ಲಿ ಬಣ್ಣ ಹಚ್ಚುವರು. ಬಣ್ಣ ಹಚ್ಚಿದ ಬಾವುಟಕ್ಕೆ ಕೈಯಿಂದ ಅಂಟು ಹಚ್ಚಿ ಅಂಟಿಸುವುದು. (ಸ್ಟೇಪ್ಲರ್ ಪಿನ್ ಹಾಕಿದರೂ ಸಾಕು.) ಎಲ್ಲರೂ ಬಾವುಟವನ್ನು ಎತ್ತಿ ಹಿಡಿದು ಕೇಸರಿ, ಬಿಳಿ, ಹಸಿರು ಎಂದು ಆರಂಭವಾಗುವ ಗೆರೆಯನ್ನು ಹಾಡುವರು.

- ಸ್ವಾತಂತ್ರ್ಯ ದಿನ ಮೆರವಣಿಗೆಯಲ್ಲಿ ಬಾವುಟ ಉಪಯೋಗಿಸುವರು.

**ಮೌಲ್ಯಮಾಪನ** : ಸರಿಯಾಗಿ ಬಣ್ಣ ಹಚ್ಚಿದ್ದಾರೆ.

- ಕತ್ತರಿ ಉಪಯೋಗಿಸಿ ಸರಿಯಾಗಿ ಕತ್ತರಿಸಲು ಸಾಧ್ಯವಾಗುತ್ತದೆ.

- ಅಂದವಾಗಿ ಅಂಟಿಸಲು ಸಾಧ್ಯವಾಗುತ್ತದೆ.

## ವರ್ಕ್ ಶೀಟ್ 7.4 – ಬ್ಯಾಡ್ಜ್ ತಯಾರಿಸುವ

**ವಿಕಾಸ ಮಂಡಲ** : ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಕ್ರಯೋನ್ಸ್ ಉಪಯೋಗಿಸಿ ಚಿತ್ರಗಳಿಗೆ ಬಣ್ಣ ಹಚ್ಚಲು ಸಾಧ್ಯವಾಗುವುದು. (4)

- ಕತ್ತರಿ ಉಪಯೋಗಿಸಿ ಕತ್ತರಿಸಲು ಸಾಧ್ಯವಾಗುವುದು.(7)

**ಆಶಯ** : ದಿನಾಚರಣೆಯ ಅಂಗವಾಗಿ ಮನೆ ಪರಿಸರ, ಶಾಲೆ ಎಂಬಿವುಗಳನ್ನು ಅಲಂಕರಿಸುವುದು.

ಸಾಮಗ್ರಿಗಳು : ಕತ್ತರಿ, ಕ್ರಯೋನ್ಸ್

ಸಂದರ್ಭ : ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ದಿನ ಮಾಡುವ ಚಟುವಟಿಕೆ

ಪ್ರಕ್ರಿಯೆ :

ಪದ್ಯ ಹಾಡುವ : ಸಂಭಾಷಣಾ ಹಾಡು

ಮಗು - ಮಲ್ಲಿಗೆ ಹೂ ಕೊಡುವೆಯ ನೀನು
ಮಾಲೆ ಮಾಡಲು ಬರುವೆಯ ನೀನು
ಮಲ್ಲಿಗೆ - ಯಾತಕೆ ಮಗುವೇ ಮಲ್ಲಿಗೆ ಹೂ
ನಿನ್ನಯ ತಲೆಯಲ್ಲಿ ಮುಡಿಯಲೋ
ಮಗು - ನನಗೆ ಮುಡಿಯಲು ಅಲ್ಲವೇ ಅಲ್ಲ
ಬೇರೊಂದು ವಿಷಯ ಇದೆಯಲ್ಲಾ
ಮಲ್ಲಿಗೆ - ನನಗೆ ನೀರನು ನೀಡಿದೆ ನೀನು
ನಿನಗೆ ಹೂವನು ನೀಡುವೆನು
ಮಗು - ನೀನು ನೀಡಿದ ಹೂವಿಂದ
ಮಾಲೆಯ ಮಾಡುವೆ ನಾನೀಗ
ಮಲ್ಲಿಗೆ - ಯಾರಿಗೆ ನೀಡಲು ಈ ಮಾಲೆ
ಯಾರಿಗೆ ಹಾಕುವೆ ಈ ಮಾಲೆ
ಮಗು - ಗೋಡೆಯ ಮೇಲೆ ನಗುತಿಹರು
ನಮ್ಮಯ ಹಿರಿಯ ಗಾಂಧಿತಾತ

- ಗಾಂಧೀಜಿಯ ಚಿತ್ರವನ್ನು ಪ್ರದರ್ಶಿಸುವುದು. ಮೆರವಣಿಗೆಗಾಗಿ ನಾವು ಬಾವುಟ ತಯಾರಿಸಿದ್ದೇವಲ್ಲವೇ? ಇನ್ನು ಪ್ರತಿಯೊಬ್ಬರಿಗೂ ಬ್ಯಾಡ್ಜ್ ನೀಡುತ್ತೇನೆ.

ವರ್ಕ್ ಶೀಟ್ 7.4 – ಬ್ಯಾಡ್ಜ್ ತಯಾರಿಸುವ – ನೀಡುವುದು.

: ಬ್ಯಾಡ್ಜ್ ನೀಡುವುದು. ಬ್ಯಾಡ್ಜ್ ಧರಿಸಿದ ನಂತರವೇ ಮೆರವಣಿಗೆ ಹೋಗಬೇಕು. ಬ್ಯಾಡ್ಜ್ ಗೆ ಬಣ್ಣ ಹಚ್ಚಬೇಕು. ಕೆಳಗೆ ನೀಡಲಾದ ರಿಬ್ಬನಿನಲ್ಲಿ ಎಡಭಾಗದಲ್ಲಿ ಹಸಿರು. ಬಲಭಾಗದಲ್ಲಿ ಕೇಸರಿ. ಬಲಭಾಗದಲ್ಲಿ ನೀಲಿಯಾದರೋ? ಇತರ ಬಣ್ಣಗಳನ್ನು ಮಕ್ಕಳು ಸೂಚಿಸಲಿ. ಬಣ್ಣ ಹಚ್ಚಿದ ನಂತರ ಬ್ಯಾಡ್ಜ್ ಕತ್ತರಿಸಿ ಹೆಸರು ಬರೆದು ಮಕ್ಕಳ ಅಂಗಿಗೆ ಅಂಟಿಸಬೇಕು.

ಹಲ್ಲು ಹೋದ ಬಾಯನು ಅಗಲಿಸಿ
ನಗೆಯನು ಬೀರುವ ನಮ್ಮಜ್ಜ
ನಾಡಿನ ಏಳಿಗೆಯನು ಬಯಸಿ
ಹೋರಾಟ ಮಾಡಿದ ನಮ್ಮಜ್ಜ
ಇವರೇ ನಮ್ಮಯ ಹಿರಿಯಜ್ಜ
ನಮ್ಮ ನಾಡಿನ ಗಾಂಧಿಯಜ್ಜ

- ಬ್ಯಾಡ್ಜ್ ಮಧ್ಯೆ ಇರುವ ಚಿತ್ರ ಯಾರದ್ದು?

ಮೌಲ್ಯಮಾಪನ : ಸರಿಯಾಗಿ ಬಣ್ಣ ಹಚ್ಚಲಾಗಿದೆ.
- ಕತ್ತರಿ ಉಪಯೋಗಿಸಿ ಕತ್ತರಿಸಿ ತೆಗೆಯಲು ಸಾಧ್ಯವಾಗುವುದು.

# ಥೀಂ 8 – ಆರೋಗ್ಯ, ರೋಗಗಳು, ಆಸ್ಪತ್ರೆ

**ಕೊಲೇಶ್, ಅಭಿನಯ ಗೀತೆ, ಪಾತ್ರಾಭಿನಯ ಮೊದಲಾದುವುಗಳನ್ನು ಸೇರಿಸಿ, ವರ್ಕ್ ಶೀಟುಗಳನ್ನು ಮಂಡಿಸುವುದು.**

**ಚಟುವಟಿಕಾ ಕ್ರಮ**

1. ಪದ್ಯಗಳು

↓

2. ಶುಚೀಕರಣ ಚಟುವಟಿಕೆಗಳು + ವೇಸ್ಟ್ ಬೋಕ್ಸ್ ನಿರ್ಮಾಣ + ವರ್ಕ್ ಶೀಟು 8.1 ಏನೇನು? ನೀಡುವುದು.

↓

3. ಸ್ವತಂತ್ರ ಸಂಭಾಷಣೆ

↓

4. ಚಿತ್ರ ಓದು

↓

5. ವೈಯಕ್ತಿಕ ಶುಚಿತ್ವ ಪಾಲಿಸುವುದು (ಹಲ್ಲುಜ್ಜುವುದು, ಕೈ ತೊಳೆಯುವುದು)

↓

6. ಸ್ವತಂತ್ರ ಚಟುವಟಿಕೆಗಳು (ಚಪ್ಪಲಿ ಹಾಕುವುದು, ತಲೆ ಬಾಚುವುದು, ಬಟ್ಟೆ ಧರಿಸುವುದು.)

↓

7. ಚಿತ್ರ ಓದು - ವರ್ಕ್ ಶೀಟು 8.2 "ಯಾರು ಸರಿ?"

↓

8. ರೋಲ್ ಪ್ಲೇ - ಆಸ್ಪತ್ರೆ - ವರ್ಕ್ ಶೀಟು 8.3 "ಆಸ್ಪತ್ರೆಗಿರುವ ದಾರಿ?"

↓

9. ಡಾಕ್ಟರ್ ನರ್ಸ್ - ಪಾತ್ರಾಭಿನಯ

↓

10. ವರ್ಕ್ ಶೀಟು 8.4 "ಚಿತ್ರ ನೋಡಿ ಹೇಳುವ" ನೀಡುವುದು.

↓

11. ಡಾಕ್ಟರ್ ಸೆಟ್ - ಆಟದ ಸಾಮಗ್ರಿಗಳನ್ನು ಉಪಯೋಗಿಸಿರುವ ಆಟ

## ವರ್ಕ್ ಶೀಟ್ 8.1 – ಏನೇನು?

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಚಿತ್ರ ನೋಡಿ ಗುಂಪಿಗೆ ಸೇರದವರನ್ನು ಕಂಡುಹಿಡಿದು ಹೇಳಲೂ ಗುಂಪಿಗೆ ಸೇರದಿರಲು ಕಾರಣ ಹೇಳಲೂ ಸಾಧ್ಯವಾಗುವುದು (33)

**ಆಶಯ** : ವ್ಯಕ್ತಿ ಶುಚಿತ್ವ, ಪರಿಸರ ಶುಚಿತ್ವ ಪಾಲಿಸಿದರೆ ರೋಗಗಳಿಂದ ದೂರವಿರಬಹುದು.

**ಸಾಮಗ್ರಿಗಳು** : ವಿವಿಧ ಬಣ್ಣದಲ್ಲಿರುವ ಕಾಗದಗಳು (ಮಾಸಿಕಗಳು, ಪತ್ರಿಕೆಗಳು ಎಂಬಿವುಗಳಿಂದ ಕತ್ತರಿಸಿ ತೆಗೆದದ್ದು) ಅಂಟು, ಎ 4 ಶೀಟು, ಕಟೌಟು, ವರ್ಕ್ ಶೀಟು.

**ಸಂದರ್ಭ** : ಪರಿಸರ ಶುಚೀಕರಣ ಚಟುವಟಿಕೆಗಳ ನಂತರ

**ಪ್ರಕ್ರಿಯೆ** :

**ನಿರ್ಮಾಣ** : ಕೊಲೇಶ್ ನಿರ್ಮಾಣ

: ಕೆಂಪು, ಹಸಿರು, ಹಳದಿ ಎಂಬೀ ಬಣ್ಣಗಳಲ್ಲಿರುವ ಕಾಗದಗಳನ್ನು ಸಣ್ಣ ಸಣ್ಣ ಚೂರುಗಳನ್ನಾಗಿಸಬೇಕು. ಮಕ್ಕಳೇ ತುಂಡು ಮಾಡಲಿ. ಕೈಗಳಿಂದ ಹರಿದರೆ ಸಾಕು. ಅಧ್ಯಾಪಿಕೆ ಮರದ ಕಟೌಟು ಇಟ್ಟು ಎಲ್ಲರಿಗೂ ಔಟ್ ಲೈನ್ ಎಳೆದು ಕೊಡಬೇಕು. ಮರದ ರೂಪರೇಖೆಗಳಲ್ಲಿ ಇಷ್ಟಾನುಸಾರವಾಗಿ ಹಸಿರು, ಹಳದಿ, ಕೆಂಪು ಎಂಬೀ ಬಣ್ಣದ ತುಂಡುಗಳನ್ನು ಅಂಟಿಸಬೇಕು. (ಅಂಟು ಹಚ್ಚಲು ಸಹಾಯ

ಮಾಡಬೇಕು.) ಹಸಿರು ಬಣ್ಣದ ಕಾಗದದ ತುಂಡುಗಳು ಹೆಚ್ಚು ಇರಬೇಕು. ಮರದ ಕಾಂಡಭಾಗಕ್ಕೆ ಬೂದುಬಣ್ಣದ ಕ್ರಯೋನ್ಸ್ ಉಪಯೋಗಿಸಿ ಬಣ್ಣ ಹಚ್ಚಬೇಕು. ನೆಲಭಾಗಕ್ಕೆ ಕಪ್ಪು ಮತ್ತು ಹಸಿರು ತುಂಡುಗಳನ್ನು ಅಂಟಿಸಬೇಕು. ಕೆಂಪು ಬಣ್ಣದ ಬೊಟ್ಟು ಆಕಾಶದಲ್ಲಿ ಅಂಟಿಸಲು ನೀಡಬೇಕು. (ಸೂರ್ಯ)

- ಎಲ್ಲರ ಚಿತ್ರವನ್ನು ಪರಸ್ಪರ ನೋಡಲು ಸಂದರ್ಭ ಒದಗಿಸಬೇಕು. ಕೊಲೇಶ್ ನಿರ್ಮಿಸುವುದರ ಭಾಗವಾಗಿ ಬಣ್ಣದ ಕಾಗದದ ತುಂಡುಗಳು ನೆಲದಲ್ಲಿ ಬಿದ್ದಿರಬಹುದು. ಅವುಗಳನ್ನು ಏನು ಮಾಡಬೇಕು ಎಂದು ಕೇಳಬೇಕು..

- ಕಸಕಡ್ಡಿಗಳನ್ನು ತೆಗೆಯಲಿರುವ ಉಪಕರಣಗಳ ಚಿತ್ರ ಬಿಡಿಸುವುದು. (ಹಿಡಿಸೂಡಿ, ನೆಲಒರಸು, ಕಸಬಾಚಿ)

- ಕಸಕಡ್ಡಿಗಳನ್ನು ವೇಸ್ಟ್ ಬಕೆಟಿನಲ್ಲಿ ಹಾಕುವುದು.

ವರ್ಕ್ ಶೀಟ್ 8.1 – ಏನೆಲ್ಲ? – ನೀಡುವುದು.

**ಚಿತ್ರ ಓದು** **:** ವರ್ಕ್ ಶೀಟಿನ ಚಿತ್ರ ನೋಡುವುದು.

- ಚಿತ್ರದಲ್ಲಿ ಏನೇನಿದೆ?

- ಇವುಗಳಲ್ಲಿ ಪುನಃ ಉಪಯೋಗಿಸಲು ಸಾಧ್ಯವಿರುವವುಗಳು ಯಾವುವು?

- ಇವುಗಳಲ್ಲಿ ಕಸಕಡ್ಡಿಗಳ ಗುಂಪಿನಲ್ಲಿ ಹಾಕಬೇಕಾದ ವಸ್ತುಗಳನ್ನು ಕಂಡುಹಿಡಿದು ಅವುಗಳಿಗೆ ಉರುಟು ಹಾಕಿರಿ.

- ಕಸದ ಬುಟ್ಟಿಯಲ್ಲಿ ಕಸಕಡ್ಡಿ ತುಂಬಿದರೆ ಏನು ಮಾಡಬೇಕು? ಚರ್ಚೆ.

**ಮೌಲ್ಯಮಾಪನ** : ಕಸದ ಬುಟ್ಟಿಗೆ ಹಾಕಬೇಕಾದವುಗಳನ್ನು ಕಂಡುಹಿಡಿಯಲು ಸಾಧ್ಯವಾಗುವುದು.

## ವರ್ಕ್ ಶೀಟ್ 8.2 – ಯಾರು ಸರಿ?

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಆರೋಗ್ಯ ಅಭ್ಯಾಸಗಳು, ಶುಚಿತ್ವ ಅಭ್ಯಾಸಗಳು ಎಂಬಿವುಗಳ ಕುರಿತು ತಿಳಿಯಬಹುದು.(36)

- ಅನ್ವೇಷಣಾ ಚಟುವಟಿಕೆಗಳಲ್ಲಿ ಭಾಗವಹಿಸಲೂ, ಅನುಭವದ ಆಧಾರದಲ್ಲಿ ಮಂಡಿಸಲೂ ಸಾಧ್ಯವಾಗುವುದು.

**ಆಶಯ** : ಉತ್ತಮ ಆರೋಗ್ಯಕ್ಕೆ ಶುಚಿತ್ವ ಅಭ್ಯಾಸಗಳು ಬಹಳ ಪ್ರಧಾನವಾಗಿವೆ.

**ಸಾಮಗ್ರಿಗಳು** : ಸಾಬೂನು, ಕ್ರಯೋನ್ಸ್, ವರ್ಕ್ ಶೀಟು.

**ಸಂದರ್ಭ** : ಆರೋಗ್ಯಾಭ್ಯಾಸಗಳಿಗೆ ಸಂಬಂಧಿಸಿದ ಚರ್ಚೆ.

**ಪ್ರಕ್ರಿಯೆ** :

**ಅಭಿನಯ ಗೀತೆ** :

ಕಾಗೆ ಹಾರುವುದು ಕಂಡಿದ್ದೀರಾ?
ಅದು ಹೀಗೆ.. ಅದು ಹೀಗೆ.. (ಅಭಿನಯ)
ಕಪ್ಪೆ ಜಿಗಿತ ನೋಡಿದ್ದೀರಾ?
ಅದು ಹೀಗೆ.. ಅದು ಹೀಗೆ.. (ಅಭಿನಯ)
ಚೆಂಡು ಆಟ ನೋಡಿದ್ದೀರಾ?
ಅದು ಹೀಗೆ.. ಅದು ಹೀಗೆ.. (ಅಭಿನಯ)
ನೀರು ಸೇದುವುದು ನೋಡಿದ್ದೀರಾ?
ಅದು ಹೀಗೆ.. ಅದು ಹೀಗೆ.. (ಅಭಿನಯ)
ಕೈ ತೊಳೆಯುವುದು ನೋಡಿದ್ದೀರಾ?
ಅದು ಹೀಗೆ.. ಅದು ಹೀಗೆ.. (ಅಭಿನಯ)

**:** ಕೈ ತೊಳೆಯುವುದು ಯಾವಾಗ? ಯಾಕಾಗಿ? ಚರ್ಚೆ. ಕೈ ತೊಳೆಯಲು ತಿಳಿದಿದೆಯೇ? ಹೊರಗೆ ಹೋಗಿ, ಸೋಪು ಹಾಕಿ ಚೆನ್ನಾಗಿ ಕೈ ತೊಳೆಯುವುದು. ಎಲ್ಲಾ ಬೆರಳುಗಳ ಎಡೆಯಲ್ಲೂ, ಎಡೆಯಲ್ಲಿರುವ

ಕೊಳಕುಗಳು ಹೋಗುವ ರೀತಿಯಲ್ಲಿ ಎರಡು ಕೈಗಳ ಬೆರಳುಗಳನ್ನು ಸೇರಿಸಿ ತಿಕ್ಕಿ ತೊಳೆಯುವ ರೀತಿಯನ್ನು ಪರಿಚಯಿಸುವುದು. (ವೈಜ್ಞಾನಿಕ ರೀತಿಯಲ್ಲಿ ಕೈ ತೊಳೆಯುವುದು.)

ವರ್ಕ್ ಶೀಟ್ 8.2 – ಯಾರು ಸರಿ? – ನೀಡುವುದು.

**ಚರ್ಚೆ** : ಚಿತ್ರದಲ್ಲಿ ಕಾಣುವ ಚಟುವಟಿಕೆಯ ಕುರಿತು ಮಾತನಾಡುವುದು.

**ಆಖ್ಯಾನ** : ಸಂಜೆಯಾಯಿತು. ಶಾಮ ಚೆಂಡಿನೊಂದಿಗೆ ಆಟವಾಡಲು ಹೋದನು. ಆಟ ಆಡಿ ಬಂದ ನಂತರ ಅವನು ಟಿ.ವಿ ನೋಡಲು ಕುಳಿತನು. ಆಗ ಅಮ್ಮ ಆಹಾರ ತಿನ್ನಲು ಕರೆದರು. ಅವನು ಆಹಾರ ಸೇವಿಸಿ ನಿದ್ರಿಸಿದನು. (ಮೇಲಿನ ಚಿತ್ರ)

**ಚಿತ್ರ ಓದು** : ಕೆಳಗಿನ ಚಿತ್ರದಲ್ಲಿ ರಾಜುವನ್ನು ನೋಡಿದಿರಲ್ಲವೇ?

- ರಾಜು ಮಾಡಿದ ಕಾರ್ಯಗಳನ್ನು ಅದೇ ರೀತಿಯಲ್ಲಿ ಮಕ್ಕಳು ಹೇಳುವುದು.
- ಮೇಲಿನ ಚಿತ್ರ ಮತ್ತು ಕೆಳಗಿನ ಚಿತ್ರದಲ್ಲಿ ಏನಾದರೂ ವ್ಯತ್ಯಾಸವಿದೆಯೇ?
- ವ್ಯತ್ಯಾಸ ಏನು?
- ಆಟ ಆಡಿ ಬಂದ ನಂತರ ರಾಜು ಸ್ನಾನ ಮಾಡಿದ್ದು ಯಾಕಾಗಿರಬಹುದು?
- ಯಾವ ಚಿತ್ರದ ಮಗು ಸರಿಯಾದ ಆರೋಗ್ಯಾಭ್ಯಾಸ ಪಾಲಿಸಿದೆ?
- ಆ ಚಿತ್ರ ಕಂಡುಹಿಡಿದು ಎಡಭಾಗದಲ್ಲಿರುವ ಮುಖಕ್ಕೆ ಬಣ್ಣ ಹಚ್ಚಿರಿ.

**ಮೌಲ್ಯಮಾಪನ** : ಸರಿಯಾದ ಆರೋಗ್ಯಾಭ್ಯಾಸವನ್ನು ಪಾಲಿಸುವ ಮಗುವಿನ ಚಿತ್ರವನ್ನು ತಿಳಿದು ಗುರುತಿಸಲಾಗಿದೆ.

## ವರ್ಕ್ ಶೀಟ್ 8.3 – ಆಸ್ಪತ್ರೆಗಿರುವ ದಾರಿ

**ವಿಕಾಸ ಮಂಡಲ** : ಶಾರೀರಿಕ ಚಲನಾತ್ಮಕ ವಿಕಾಸ
- ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಲೇಖನ ಪೂರ್ವ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದು.(13)

**ಆಶಯ** : ರೋಗ ಬಂದಾಗ ಚಿಕಿತ್ಸೆ ನೀಡುವ ಸ್ಥಳವೇ ಆಸ್ಪತ್ರೆಯಾಗಿದೆ.
- ಆಸ್ಪತ್ರೆಯಲ್ಲಿ ಡಾಕ್ಟರು ಮತ್ತು ನರ್ಸ್ ಮೊದಲಾದವರಿದ್ದಾರೆ.

**ಸಾಮಗ್ರಿಗಳು** : ವರ್ಕ್ ಶೀಟು

**ಸಂದರ್ಭ** : ಆರೋಗ್ಯ ಪದ್ಯ ಹಾಡಿದ ನಂತರ

**ಪ್ರಕ್ರಿಯೆ** :

**ಪದ್ಯ** : ಆರೋಗ್ಯಕ್ಕೆ ಸಂಬಂಧಿಸಿದ ಪದ್ಯ

ಹೊಟ್ಟೆಯೇ ಶರಣು ಹಾಡುತಲಿರುವ
ಟೊಣ್ಣಪ್ಪನಾತ ಕುಂಞಪ್ಪ
ಸಿಕ್ಕಿದ್ದೆಲ್ಲಾ ತಿನ್ನುತ ನಡೆದನು
ಕೈಯನ್ನು ಬಾಯನ್ನು ತೊಳೆಯದೆ
ಹೊಟ್ಟೆನೋವು ಹಲ್ಲುನೋವು
ನೋವೇ ನೋವು ಎಲ್ಲೆಲ್ಲೂ
ತಿನ್ನಲು ಒಂದೂ ಆಗದೆ ಕೊನೆಗೆ
ಕೂಗಿದನಾತ ಕುಂಞಪ್ಪ
ವೈದ್ಯರು ಬಂದರು, ಡಾಕ್ಟರು ಬಂದರು
ಬೊಬ್ಬೆಯೋ ಬೊಬ್ಬೆ ಅಲ್ಲೆಲ್ಲ
ಆಹಾರಕೆ ಮೊದಲು ನಂತರವೂ
ಕೈ ಬಾಯನ್ನು ತೊಳೆಯಲು ಬೇಕು.

ಶುಚಿತ್ವವನ್ನು ಪಾಲಿಸದಿದ್ದರೆ

ಖಂಡಿತ ಬರುವುದು ರೋಗಗಳು

ವರ್ಕ್ ಶೀಟ್ 8.3 – ಆಸ್ಪತ್ರೆಗಿರುವ ದಾರಿ – ನೀಡುವುದು.

**ಚಿತ್ರ ಓದು** **:** ಚಿತ್ರದಲ್ಲಿ ಯಾರೆಲ್ಲ ಆಸ್ಪತ್ರೆಗೆ ಹೋಗುತ್ತಿದ್ದಾರೆ? ಮಕ್ಕಳ ಪ್ರತಿಕ್ರಿಯೆ.

- ಅವರನ್ನು ದಾರಿ ತಪ್ಪದೇ ಆಸ್ಪತ್ರೆಗೆ ತಲುಪಿಸಬಹುದೇ?
- ಮಕ್ಕಳು ಪ್ರತಿಯೊಬ್ಬರ ದಾರಿಯನ್ನು ಬೆರಳಿನಿಂದ ಎಳೆಯುತ್ತಾರೆ.
- ನಂತರ ಕ್ರಯೋನಿನಿಂದ ಎಳೆಯುವುದು.
- ಪ್ರತಿಯೊಬ್ಬರೂ ಪ್ರತ್ಯೇಕ ಪ್ರತ್ಯೇಕ ಬಣ್ಣ ಉಪಯೋಗಿಸಲು ಹೇಳಬೇಕು.
- ಪ್ರತಿಯೊಬ್ಬರು ದಾರಿ ಎಳೆದು ಆಸ್ಪತ್ರೆಗೆ ತಲುಪಿಸುತ್ತಾರೆ.
- ಆಸ್ಪತ್ರೆ ಅನುಭವಗಳ ಸ್ವತಂತ್ರ ಸಂಭಾಷಣೆ

**ಮೌಲ್ಯಮಾಪನ** : ಡಾಕ್ಟರ್, ನರ್ಸ್, ರೋಗಿ ಎಂಬೀ ಚಿತ್ರಗಳನ್ನು ತಿಳಿದಿರುವರು.

- ಬೇರೆ ಬೇರೆ ಬಣ್ಣದ ಕ್ರಯೋನುಗಳನ್ನುಪಯೋಗಿಸಿ ಮೂರು ದಾರಿಯನ್ನು ಎಳೆದಿದ್ದಾರೆ.
- ಗೆರೆಗಳ ಸೂಕ್ಷ್ಮತೆ
- ಆಸ್ಪತ್ರೆಯಲ್ಲಿ ಉಪಕರಣಗಳಿಗೆ ಮುಂದಿರುವ ವೃತ್ತದಲ್ಲಿ ಸರಿ ಗುರುತು ಹಾಕಿದ್ದಾರೆ.

## ವರ್ಕ್ ಶೀಟ್ 8.4 – ಚಿತ್ರ ನೋಡಿ ಹೇಳುವ

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಕಂಡುಹಿಡಿಯುವ ಚಟುವಟಿಕೆಗಳಲ್ಲಿ ಭಾಗವಹಿಸುವರು ಮತ್ತು ಅನುಭವದ ಆಧಾರದಲ್ಲಿ ನಿಗಮನಗಳನ್ನು ಮಂಡಿಸಲು ಸಾಧ್ಯವಾಗುವುದು.(31)

**ಆಶಯ** : ಆಸ್ಪತ್ರೆಯು ರೋಗ ಬಂದರೆ ಚಿಕಿತ್ಸೆ ನೀಡುವ ಸ್ಥಳವಾಗಿದೆ.

- ಆಸ್ಪತ್ರೆಯಲ್ಲಿ ಡಾಕ್ಟರು, ನರ್ಸ್ ಮೊದಲಾದವರಿದ್ದಾರೆ.

**ಸಾಮಗ್ರಿಗಳು** : ಡಾಕ್ಟರರ ಸೆಟ್, ವರ್ಕ್ ಶೀಟು

**ಸಂದರ್ಭ** : ಅಧ್ಯಾಪಿಕೆ ಹಾಗೂ ಮಕ್ಕಳು ಸೇರಿಕೊಂಡು ಡಾಕ್ಟರ್ ಸೆಟ್ ಉಪಯೋಗಿಸಿಕೊಂಡು ಆಸ್ಪತ್ರೆ ಆಟ ಆಡುವರು. ಮಕ್ಕಳೇ ಸ್ವತಃ ಡಾಕ್ಟರಾಗಿಯೂ ರೋಗಿಯಾಗಿಯೂ ನರ್ಸ್ ಆಗಿಯೂ ಆಟ ಆಡುವುದು. ಉಪಕರಣಗಳನ್ನು ಪ್ರತಿಯೊಬ್ಬರೂ ಉಪಯೋಗಿಸಬೇಕು.

**ಪ್ರಕ್ರಿಯೆ** :

**ಆಸ್ಪತ್ರೆ ಆಟ** : ಸ್ವಲ್ಪ ಮಕ್ಕಳು ರೋಗಿಗಳು. ಒಬ್ಬ ಡಾಕ್ಟರು. ಒಬ್ಬ ನರ್ಸ್. ಮಕ್ಕಳು ಸಾಲಾಗಿ ಬರುವರು. ಡಾಕ್ಟರರು ಪರೀಕ್ಷೆ ಮಾಡುವರು. (ಕಣ್ಣು, ಬಾಯಿ, ತುಟಿ, ನಾಡಿಬಡಿತ..)

- ಮದ್ದು ಬರೆದು ನೀಡುವರು.
- ನರ್ಸ್ ಇಂಜೆಕ್ಷನ್ ನೀಡುವರು. (ಡಾಕ್ಟರು ಪೆಟ್ಟಿಗೆಯಲ್ಲಿರುವ ಉಪಕರಣ ಉಪಯೋಗಿಸುವರು.)

ವರ್ಕ್ ಶೀಟ್ 8.4 – ಚಿತ್ರ ನೋಡಿ ಹೇಳುವ – ನೀಡುವುದು.

**ಚಿತ್ರ ಓದು** **:** ವರ್ಕ್ ಶೀಟಿನ ಚಿತ್ರದಲ್ಲಿ ಏನೇನಿದೆ?

- ಆಟದ ಸ್ಟೆತಸ್ಕೋಪ್ ಇಟ್ಟು ಪರಸ್ಪರ ಹೃದಯ ಬಡಿತ ಕೇಳುವುದು.

**ಚರ್ಚೆ** **:** ಆಟದ ಕುರಿತಾದ ಚರ್ಚೆ

- ಡಾಕ್ಟರಾದದ್ದು ಯಾರು?
- ಡಾಕ್ಟರರ ಕೈಯಲ್ಲಿದ್ದ ಉಪಕರಣ ಏನಾಗಿತ್ತು?
- ಚಿತ್ರದಲ್ಲಿ ಕೆಳಗಿನ ವೃತ್ತದೊಳಗೆ ಏನೇನು ಇದೆ?
- ಮಕ್ಕಳ ಪ್ರತಿಕ್ರಿಯೆ
- ಆದರಲ್ಲಿ ಆಸ್ಪತ್ರೆ ಉಪಕರಣಗಳು ಯಾವುವು?

- ಮಕ್ಕಳ ಪ್ರತಿಕ್ರಿಯೆ

- ಆಸ್ಪತ್ರೆ ಉಪಕರಣಗಳ ಎದುರಿರುವ ವೃತ್ತದೊಳಗೆ ಸರಿ ಗುರುತು ಹಾಕುವುದು.

**ಮೌಲ್ಯಮಾಪನ** : ಆಸ್ಪತ್ರೆಯಲ್ಲಿರುವ ಉಪಕರಣಗಳನ್ನು ತಿಳಿದುಕೊಂಡಿದ್ದಾರೆ.

# ಥೀಂ 9 – ಹೂಗಳು, ಹೂದೋಟ, ಚಿಟ್ಟೆಗಳು

**ಹೂಗಳನ್ನು ತರಗತಿಗೆ ತರುತ್ತಾರೆ ಎಂಬ ಕಾರಣದಿಂದ ಹೂದೋಟ ನಿರೀಕ್ಷಣೆ ಕೈ ಬಿಡಬಾರದು. ಪ್ರಿಸ್ಕೂಲಿನಲ್ಲಿ ಹೂದೋಟ ಅನಿವಾರ್ಯವಾಗಿದೆ. ವರ್ಕ್ ಶೀಟುಗಳನ್ನು ಮಂಡಿಸುವಾಗ ಆಸ್ವಾದನಕರವಾಗುವ ರೀತಿಯಲ್ಲಿ ಸ್ವಂತವಾದ ರೀತಿ ಅನುಸರಿಸಬಹುದು. ಭಾವನಾಲೋಕಕ್ಕೆ ಕೊಂಡೊಯ್ಯುವ ಕೆಲವು ಸಾಧ್ಯತೆಗಳು ಇಲ್ಲಿ ಉಪಯೋಗಿಸಲಾಗಿದೆ. 'ತಾಯಿಗಿಡಗಳನ್ನು ಮುಟ್ಟಿಸುವುದು' ಎಂಬ ಕಾರ್ಡು ಅಧ್ಯಾಪಕರಿಗೆ ಸ್ವತಂತ್ರವಾಗಿ ಉಪಯೋಗಿಸಲಿಕ್ಕಿರುವುದಾಗಿದೆ. ಹಿಂದಿನ ಚಟುವಟಿಕೆಗಳ ತಿಳುವಳಿಕೆಯ ಆಧಾರದಲ್ಲಿ ಚಟುವಟಿಕೆಗಳನ್ನು ಆಯೋಜಿಸಬಹುದು.**

## ಚಟುವಟಿಕಾ ಕ್ರಮ

1. ಆಖ್ಯಾನ

2. ವರ್ಕ್ ಶೀಟು 9.1 - "ರಚಿಸುವ ಬಣ್ಣ ನೀಡುವ" ನೀಡುವುದು

3. ಸ್ವತಂತ್ರವಾಗಿ ಶಾಲೆ, ಹೂದೋಟ ಎಂಬಿವುಗಳನ್ನು ರಚಿಸುವುದು. ಅಂದಗೊಳಿಸುವುದು. (ಕೊಲೇಶ್, ಹ್ಯೊಗೆ, ಮರದ ಹುಡಿ, ಕ್ರಯೋನು, ಬಣ್ಣ ಎಂಬಿವುಗಳನ್ನುಪಯೋಗಿಸಬಹುದು.)

4. ಆಖ್ಯಾನ

5. ಸ್ವಂತ ಹೂದೋಟದ ಟಿಪ್ಪಣಿ ಹೇಳುವುದು (ಮನೆಯಲ್ಲಿ ಬೆಳೆಸುವ ಗಿಡಗಳು..)

6. ಶಾಲೆಯನ್ನು ತಿಳಿಯುವುದು. ವರ್ಕ್ ಶೀಟು 9.2 - "ತಾಯಿ ಗಿಡವನ್ನು ಮುಟ್ಟಿಸುವ"

7. ವರ್ಕ್ ಶೀಟು 9.3 - "ಬಣ್ಣ ನೀಡುವ, ಗುಂಪು ಕಂಡುಹಿಡಿಯುವ" ನೀಡುವುದು.

8. ಪ್ರಕೃತಿ ನಡಿಗೆ (ಬಯಲು ಪ್ರವಾಸ)

9. ನೋಡಿದ ವಿಚಾರಗಳನ್ನು ಹೇಳುವುದು.

10. ಸಂಗ್ರಹಿಸಿದ ಹೂಗಳನ್ನು ಪರಿಮಳ ಇರುವುದು/ಇಲ್ಲದ್ದು, ನಯವಾದದ್ದು/ ದೊರಗಾದದ್ದು ಎಂಬೀ ರೀತಿಯಲ್ಲಿ ವರ್ಗೀಕರಿಸುವುದು.

11. ವರ್ಕ್ ಶೀಟು 9.4 - "ಗೆಳೆಯನನ್ನು ಕಂಡುಹಿಡಿಯುವ" ನೀಡುವುದು.

12. ಹೆಗ್ಗಳಿಕೆ ಹೇಳುವುದು.

13. ವರ್ಕ್ ಶೀಟು 9.5 - "ಬಣ್ಣ ನೀಡುವ, ಹೆಗ್ಗಳಿಕೆ ಹೇಳುವ" ನೀಡುವುದು.

14. ವರ್ಗೀಕರಿಸುವುದು.

15. ಹ್ಯೊಗೆಯಲ್ಲಿ ಹೂಗಳನ್ನು ಇಟ್ಟು ಅಲಂಕರಿಸುವುದು.

16. ಹೂಕುಂಡದಲ್ಲಿ ಹೂಗಳನ್ನು ಕ್ರಮೀಕರಿಸುವುದು.

17. ಮಾಲೆ ಮಾಡುವ - ವರ್ಕ್ ಶೀಟು 9.6 - "ಹೂ ನಿರ್ಮಿಸುವ" ನೀಡುವುದು.

18. ಹೂದೋಟವನ್ನು ಪೋಷಿಸುವುದು.

19. ವರ್ಕ್ ಶೀಟು 9.7 - "ಚಿತ್ರ ಪೂರ್ತಿಗೊಳಿಸುವ" ನೀಡುವುದು.

## ವರ್ಕ್ ಶೀಟ್ 9.1 – "ರಚಿಸುವ ಬಣ್ಣ ನೀಡುವ"

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

- ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ

**ಸಾಮರ್ಥ್ಯ** : ಪ್ರಕೃತಿಯನ್ನು ಆಸ್ವಾದಿಸಲೂ, ಚಿತ್ರದ ಮೂಲಕ ಪ್ರಕಟಪಡಿಸಲೂ ಬಣ್ಣ ಹಚ್ಚಲೂ ಸಾಧ್ಯವಾಗುವುದು. (80)

- ಗಣಿತ ಸಮಸ್ಯೆಗಳನ್ನು ಪರಿಹರಿಸುವುದು. (46)

**ಆಶಯ** : ಹೂಗಳುಂಟಾಗುವ ಗಿಡಗಳಿವೆ.

- ಹಲವು ಬಣ್ಣದ ಹೂಗಳಿವೆ.

- ಹೂಗಳಿಂದ ಜೇನು ಹೀರಲು, ದುಂಬಿ, ಜೇನುನೊಣ, ಚಿಟ್ಟೆಗಳು ಬರುತ್ತವೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್

**ಸಂದರ್ಭ** : ಹೂದೋಟ, ಚಿಟ್ಟೆ ಎಂಬಿವುಗಳ ಕುರಿತಾದ ಪದ್ಯ ಮಂಡಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : "ಅನು.. ಅನು.. ಅನು.." ಅನು ಕಣ್ಣು ಬಿಟ್ಟಳು. ಯಾರು ಕರೆದದ್ದು ? ಆಹಾ.. ನೀನಾ ? ಅವಳನ್ನು ಸ್ಪರ್ಶಿಸುತ್ತಾ ಒಂದು ಚುಕ್ಕಿ ಚಿಟ್ಟೆ ಹಾರಿಹೋಯಿತು.

- ಹೋಯ್.. ಚಿಟ್ಟೆ.. ನಿಂತುಕೋ.. ಅವಳು ಹಿಂದೆಯೇ ಓಡಿದಳು. ಚಿಟ್ಟೆ ಹಾರಿ ಹಾರಿ ಹೂದೋಟಕ್ಕೆ ತಲುಪಿತು. ಅದು ದಾಸವಾಳ ಹೂವಿನಲ್ಲಿ ಕುಳಿತಿತು. ಅವಳು ಮೆಲ್ಲನೆ ಅವಿತವಿತು ಹೋದಳು. ಕೈಗಳನ್ನು ಚಾಚಿ (ಅಭಿನಯ) ಹಿಡಿಯಲು ಪ್ರಯತ್ನಿಸಿದಳು. ಚಿಟ್ಟೆ ಒಮ್ಮೆಲೇ ಹಾರಿತು. ತುಂಬಾ ಚಿಟ್ಟೆಗಳು. ಒಂದಾದರೂ ಹಿಡಿಯಬೇಕು. ಚಿಟ್ಟೆಗಳು ಅನುವನ್ನು ಕಂಡು ಎತ್ತರದಲ್ಲಿ ಹಾರಿದುವು. ಸುತ್ತಲೂ ಹಾರುತ್ತಾ ಅವಳ ಹತ್ತಿರಕ್ಕೆ ಬಂದುವು. ಮತ್ತೆ ಪುನಃ ಹಾರಿ ಒಂದೊಂದೇ ಹೂವಿನ ಮೇಲೆ ಕುಳಿತುಕೊಂಡವು. ಅವಳು ಪುನಃ ಅವಿತವಿತು ಮೆಲ್ಲನೆ ಕೈ ಮುಂದೆ ಚಾಚಿದಳು. (ಅಭಿನಯ) ಚಿಟ್ಟೆ ಒಮ್ಮೆಲೇ ಹಾರಿತು.

- ಈ ಹೂವಿರುವ ಕಾರಣ ಅಲ್ಲವೇ ನಿನಗೆ ಅಹಂಕಾರ. ಅವಳಿಗೆ ಚಿಟ್ಟೆಯ ಮೇಲೆ ಕೋಪ ಬಂತು. ಅವಳು ಹೂಗಳನ್ನು ಕೊಯ್ಯಲು ಗೆಳೆಯರನ್ನು ಕರೆದಳು.

- ಹೂಗಳನ್ನು ಕೊಯ್ಯಲು ಬರುವಿರಾ.. ಬೆಳಗ್ಗೆ ಬೇಗನೆ ಬರುವಿರಾ..

- ಯಾರೂ ಬರಲಿಲ್ಲ. ಅನು ಹೂಗಳನ್ನು ಕೊಯ್ಯಲು ಮಲ್ಲಿಗೆಯ ಬಳಿಗೆ ಬಂದಳು. ಮಲ್ಲಿಗೆ ಬಳ್ಳಿ ಕೂಡಲೇ ಬೆಳೆದು ಹಬ್ಬಿ ಸುತ್ತಿ ಸುತ್ತಿ ಮೇಲೇರಿತು. ಅವಳು ಗುಲಾಬಿ ಗಿಡದ ಬಳಿ ಬಂದಳು. ಗುಲಾಬಿಯೂ ಕೂಡಲೇ ಬೆಳೆದು ಅವಳಿಗಿಂತಲೂ ಎತ್ತರದಲ್ಲಿ ಹೂವನ್ನು ನಿಲ್ಲಿಸಿತು. ದೂರದ ಗೆಲ್ಲಿನಲ್ಲಿ ಕುಳಿತು ಮೈನಾ ನೋಡುತ್ತಾ ಇತ್ತು. ಅದು.. ನಿನ್ನನ್ನು ಯಾರಾದರೂ ಹಿಡಿದು ಕಟ್ಟಿ ಹಾಕಿದರೆ ನಿನಗೆ ಇಷ್ಟವಾದೀತೇ? ಇಲ್ಲ.. ಮತ್ತೆ ಯಾಕೆ ನೀನು ಚಿಟ್ಟೆಯನ್ನು ಹಿಡಿಯಲು ಹೋದದ್ದು? ಆದಕ್ಕೆ ಬೇಸರವಾಗದೇ? ಹೂಗಳನ್ನು ಕೊಯ್ದರೆ ಹೂದೋಟದ ಅಂದ ಹೋಗದೇ? ಹೌದಲ್ಲಾ.. ಅನು ಯೋಚಿಸಿದಳು. ಅವಳು ಕೈ ತಟ್ಟಿ ಚಿಟ್ಟೆಗಳನ್ನು ಕರೆದಳು.

ಬಣ್ಣದ ಉಡುಪಿನ ಸುಂದರಿಯೇ.
ಜೇನನು ಹೀರಲು ಬರುವೆಯ ನೀ
ಹಾರುತ ಓಡುವೆ ಎಲ್ಲಿಗೆ ನೀ
ಓಡುತ ಅಡಗುವೆ ನೀನೆಲ್ಲಿ
ಓಡುತ ಅಡಗುವೆ ನೀನೆಲ್ಲಿ

- ಚಿಟ್ಟೆಗಳೆಲ್ಲಾ ಹಾರಿಬಂದುವು. ಗಿಡಗಳ ಗೆಲ್ಲುಗಳಲ್ಲಿ ಬಾಗಿ ಕುಳಿತು ಅವಳ ಬಳಿಗೆ ಬಂದು ಅವಳನ್ನು ಮುಟ್ಟಿ ನೇವರಿಸಿದುವು. ಎಷ್ಟು

ಸುಂದರವಾಗಿದೆ ಹೂದೋಟ.. ಅನು, ಚಿಟ್ಟೆಗಳು, ಹೂಗಳು ಒಟ್ಟಿಗೆ ಹಾಡಿದುವು. ನಾವೂ ಒಟ್ಟಿಗೆ ಹಾಡೋಣ..

ಹೂಗಳು ನಾವು ಹೂಗಳು
ನಾವು ರೋಸಾ ಹೂಗಳು
ಕೆಂಪು ಬಣ್ಣದ ಹೂಗಳು
ಹೂಗಳು ನಾವು ಹೂಗಳು
ಹೂಗಳು ನಾವು ಹೂಗಳು
ಚಂದದ ಚಂದದ ಹೂಗಳು
ಹಲವು ಬಣ್ಣದ ಹೂಗಳು
ಹಲವು ವಿಧದ ಹೂಗಳು
ವಿವಿಧ ಪರಿಮಳದ ಹೂಗಳು
.............................

- ಗೆರೆಗಳನ್ನು ಸೇರಿಸಿ ಹಾಡುವರು.
- ಅನುವಿನ ಹೂದೋಟವನ್ನು ನಿಮಗೆ ನೋಡಬೇಡವೇ ?

ವರ್ಕ್ ಶೀಟ್ 9.1 – "ರಚಿಸುವ ಬಣ್ಣ ನೀಡುವ" – ನೀಡುವುದು.

**ಚಿತ್ರ ಓದು** **:** ಚಿತ್ರದಲ್ಲಿ ಏನೇನು? ಸ್ವತಂತ್ರ ಪ್ರತಿಕ್ರಿಯೆ

- ಒಂದು ತಾಯಿ ಗಿಡವೇನು ಬೇಸರದಲ್ಲಿ ನಿಂತಿರುವುದು? ಹೂವಿಲ್ಲದ ಕಾರಣದಿಂದಲೇ?
- ಹೂ ರಚಿಸಿ ಸೇರಿಸಬಹುದೇ?
- ಹೂಗಳಿಗೆ ಬಣ್ಣ ಹಚ್ಚಬೇಡವೇ?
- ಎಲೆಗಳಿಗೋ? ಚಿಟ್ಟೆಗಳಿಗೋ?

**ಬಣ್ಣ ಹಚ್ಚುವ** **:** ಬಣ್ಣ ಹಚ್ಚುವುದು.

- ಪ್ರತಿಯೊಂದು ಚಿಟ್ಟೆಗೂ ಒಂದೊಂದು ಹೂವಿನಲ್ಲಿ ಕುಳಿತುಕೊಳ್ಳಬೇಕು. ಏನು ಮಾಡೋಣ?

**ಚರ್ಚೆ** **:** ಪ್ರತಿಯೊಂದು ಹೂವಿಗೂ ಒಂದೊಂದು ಚಿಟ್ಟೆ ಬೇಕು. ಏನು ಮಾಡೋಣ?

- ಗೆಳೆಯನನ್ನು ಗೆರೆ ಎಳೆದು ಸೇರಿಸಿರಿ.
- ಎಷ್ಟು ದುಂಬಿಗಳಿವೆ?
- ಚಿಟ್ಟೆಗಳ ಸಂಖ್ಯೆಗಳಿಗೆ ಸಮಾನವಾಗಲು ಎಷ್ಟು ದುಂಬಿಗಳು ಬೇಕು?
  (ಒಂದಕ್ಕೊಂದು ಹೊಂದಿಸಿಕೊಳ್ಳಬೇಕು.)
- ಚಿಟ್ಟೆಗೆ ಗೆಳೆಯನನ್ನು ಗೆರೆ ಎಳೆದು ಜತೆಗೊಳಿಸಿರಿ.
- ಪೂರ್ತಿಗೊಳಿಸಿದ ವರ್ಕ್ ಶೀಟು ಪ್ರದರ್ಶಿಸುವುದು. ಮಕ್ಕಳಿಗೆ ನೋಡಲು ಸಂದರ್ಭ ಒದಗಿಸುವುದು.

**ಮೌಲ್ಯಮಾಪನ** : ಗಣಿತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದು.

- ಅಂದವಾಗಿ ಬಣ್ಣ ಹಚ್ಚಲಾಗಿದೆ.
- ಚಿತ್ರ ರಚಿಸಿ ಹೊಂದಿಸಲು ಸಾಧ್ಯವಾಗುವುದು. (ಹೂ ಮತ್ತು ದುಂಬಿ)

## ವರ್ಕ್ ಶೀಟ್ 9.3 – "ಬಣ್ಣ ನೀಡುವ, ಗುಂಪು ಕಂಡುಹಿಡಿಯುವ"

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ವಸ್ತುಗಳನ್ನು ಹೋಲಿಸಲು ಗಣಿತ ಭಾಷೆ ಉಪಯೋಗಿಸುವುದು(36)

**ಆಶಯ** : ಹಲವು ಬಣ್ಣದ ಹೂಗಳಿವೆ.

- ಅಲಂಕಾರಕ್ಕೆ ಹೂಗಳನ್ನುಪಯೋಗಿಸುತ್ತಾರೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್

**ಸಂದರ್ಭ** : ಅಧ್ಯಾಪಿಕೆ ಪ್ರದರ್ಶಿಸಿದ ಹೂಗಳನ್ನು ಗುಂಪುಗಳನ್ನಾಗಿಸುವುದು. ದೊಡ್ಡ ಗುಂಪು, ಸಣ್ಣ ಗುಂಪು ಮಕ್ಕಳು ಕಂಡುಕೊಳ್ಳುವುದು.

**ಪ್ರಕ್ರಿಯೆ** :

**ಆಖ್ಯಾನ** : ಇಂದು ಅನುವಿನ ಹುಟ್ಟುಹಬ್ಬವಾಗಿದೆ. ಏನು ಕೊಡೋಣ ? ಆಮಿ ಯೋಚಿಸಿದಳು. ಹೂಗಳು ಅವಳಿಗೆ ಹೆಚ್ಚು ಇಷ್ಟ. ಆಮಿ ಹೂದೋಟದಿಂದ ಹೂಗಳನ್ನು ಕೊಯ್ದಳು. ಅಮ್ಮ ನನಗೊಂದು ಹೂಗುಚ್ಛ ನಿರ್ಮಿಸಿ ಕೊಡಬಹುದೇ ? ಅನುವಿಗೆ ಕೊಡಲಿರುವ ಹುಟ್ಟುಹಬ್ಬದ ಉಡುಗೊರೆ. ಅಮ್ಮ ಎರಡು ಹೂಗುಚ್ಛಗಳನ್ನು ತಯಾರಿಸಿದರು. ಒಂದು ಆಮಿಗೂ ಒಂದು ಅನುವಿಗೂ. ಉಳಿದ ಹೂಗಳಿಂದ ಒಂದು ಮಾಲೆಯನ್ನು ಮಾಡಿದರು. ಆಮಿಯ ತಾಯಿ ಮಾಡಿದ ಹೂಗುಚ್ಛ ಮತ್ತು ಮಾಲೆಯನ್ನು ನೋಡಿರಿ.

ವರ್ಕ್ ಶೀಟ್ 9.3 – ಬಣ್ಣ ನೀಡುವ, ಗುಂಪು ಕಂಡುಹಿಡಿಯುವ – ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಏನೇನು ಇದೆ?

- ಹೆಚ್ಚು ಹೂಗಳಿರುವ ಹೂಗುಚ್ಛ ಯಾವುದು?

**ಬಣ್ಣ ಹಚ್ಚುವ** : ಹೆಚ್ಚು ಹೂಗಳಿರುವ ಹೂಗುಚ್ಛಕ್ಕೆ ಹಳದಿ ಬಣ್ಣವನ್ನೂ ಎಲೆಗಳಿಗೆ ಹಸಿರು ಬಣ್ಣವನ್ನೂ ನೀಡಿರಿ.

**ಪದ್ಯ** : ಅಧ್ಯಾಪಿಕೆ ಪದ್ಯ ಮಂಡಿಸುವರು. ಮಕ್ಕಳು ಹಾಡುವರು.

- ಮಾಲೆ ಚಂದದ ಮಾಲೆ
ನಾವು ಮಾಡಿದ ಮಾಲೆ
ಒಳ್ಳೆಯ ಮಾಲೆ
ಚಂದವಿರುವ ಮಾಲೆ

- ವರ್ಕ್ ಶೀಟಿನಲ್ಲಿ ಹೆಚ್ಚು ಹೂಗಳಿರುವ ಮಾಲೆ ಕಂಡುಹಿಡಿಯುವುದು.
- ಹೆಚ್ಚು ಹೂಗಳಿರುವ ದೊಡ್ಡ ಗುಂಪು ಕಂಡುಹಿಡಿದು ಮಾಲೆಗೆ ಬಣ್ಣ ಹಚ್ಚುವುದು.

**ಮೌಲ್ಯಮಾಪನ** : ದೊಡ್ಡ ಗುಂಪು ಕಂಡುಹಿಡಿಯಲು ಸಾಧ್ಯವಾಗಿದೆ.

- ಹೂಗಳಿಂದ ನಿರ್ಮಿಸುವ ಅಲಂಕಾರ ವಸ್ತುಗಳನ್ನು ತಿಳಿದಿರುವರು.

## ವರ್ಕ್ ಶೀಟ್ 9.4 – ಗೆಳೆಯನನ್ನು ಹುಡುಕುವ

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಬಣ್ಣ, ಆಕೃತಿ, ಗಾತ್ರ ಮೊದಲಾದ ಒಂದಕ್ಕಿಂತ ಹೆಚ್ಚು ಮಾನದಂಡಗಳನ್ನು ಪರಿಗಣಿಸಿ ವಸ್ತುಗಳನ್ನು ವರ್ಗೀಕರಿಸಿ ಕ್ರಮೀಕರಿಸಲು ಸಾಧ್ಯವಾಗುವುದು.(41)

**ಆಶಯ** : ಹಲವು ಬಣ್ಣದ ಹೂಗಳಿವೆ.

- ಪರಿಮಳವಿರುವ ಹೂಗಳು, ಪರಿಮಳವಿಲ್ಲದ ಹೂಗಳು ಇವೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್

**ಸಂದರ್ಭ** : ತರಗತಿಗೆ ಹೂಗಳನ್ನು ತರುವುದು.

- ಒಂದೇ ರೀತಿಯಲ್ಲಿರುವವುಗಳನ್ನು ವರ್ಗೀಕರಿಸುವುದು.
- ದಳಗಳು, ಬಣ್ಣ ನೋಡಿ ಹೇಳುವುದು. (ಪರಿಮಳ ಇದೆ / ಇಲ್ಲ)
- 'ಆಟಿಕೆ' ಪುಸ್ತಕದ ಪುಟ 206 ರ ಪದ್ಯಗಳನ್ನು ಮಂಡಿಸುವುದು.
- ಬಿಳಿಯಾದ ಹೂ ಮಲ್ಲಿಗೆ ಹೂ.
ಪರಿಮಳ ಇದೆ, ಪರಿಮಳ ಇದೆ.

**ಪ್ರಕ್ರಿಯೆ** :

**ಪ್ರಕೃತಿ ನಡಿಗೆ** : ನಾವಿನ್ನು ಶಾಲೆಯ ಹೂದೋಟಕ್ಕೆ ಹೋದರೋ? ಅಧ್ಯಾಪಿಕೆ ಮಕ್ಕಳೊಂದಿಗೆ ಪ್ರಕೃತಿ ನಡಿಗೆ. (ಬಯಲು ಪ್ರವಾಸ)

- ಗಿಡಗಳು, ಹೂಗಳು, ಜೀವಿಗಳು ಮೊದಲಾದುವುಗಳನ್ನು ನಿರೀಕ್ಷಿಸುವುದು.
- ಆವರಿಗಿಷ್ಟವಾದುದನ್ನು ಸಂಗ್ರಹಿಸುವರು.
- ತರಗತಿಗೆ ಪುನಃ ಬಂದು ನೋಡಿದ ವಿಚಾರಗಳನ್ನು ಹೇಳುವರು.
- ಸಂಗ್ರಹಿಸಿದ ಹೂಗಳಲ್ಲಿ ಒಂದೇ ರೀತಿಯಲ್ಲಿರುವವುಗಳನ್ನು ವರ್ಗೀಕರಿಸುವುದು.

- ವರ್ಗೀಕರಿಸಿದ ಆಧಾರದಲ್ಲಿ ಹೇಳುವುದು.

ವರ್ಕ್ ಶೀಟ್ 9.4 – ಗೆಳೆಯನನ್ನು ಕಂಡುಹಿಡಿಯುವ – ನೀಡುವುದು.

**:** ಆಕೃತಿ ನೋಡಿ ನೆರಳು ಚಿತ್ರ ಕಂಡುಹಿಡಿಯಲು ಹೇಳುವುದು.

- ಹೊಂದಿಸಿ ಬರೆಯುವುದು.

- ಹೂವಿನ ಬಣ್ಣ ತಿಳಿಯುವುದು. ಅದೇ ಬಣ್ಣ ನೆರಳು ಚಿತ್ರಕ್ಕೆ ನೀಡುವುದು.

**ಮೌಲ್ಯಮಾಪನ** : ನೆರಳು ಚಿತ್ರವನ್ನು ಕಂಡುಹಿಡಿಯಲಾಗಿದೆ.

- ಸರಿಯಾದ ಬಣ್ಣ ನೀಡಲಾಗಿದೆ.

## ವರ್ಕ್ ಶೀಟ್ 9.5 – ಬಣ್ಣ ಕೊಡುವ, ಹೆಗ್ಗಳಿಕೆ ಹೇಳುವ

**ವಿಕಾಸ ಮಂಡಲ** : ಶಾರೀರಿಕ ಚಲನಾತ್ಮಕ ವಿಕಾಸ

- ಭಾಷಾ ವಿಕಾಸ

- ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ

**ಸಾಮರ್ಥ್ಯ** : ಕಾಗದ, ಬಟ್ಟೆ ಮೊದಲಾದುವುಗಳನ್ನು ಮಡಚುವುದು, ಕತ್ತರಿಸುವುದು ಮತ್ತು ಅಂಟಿಸಲೂ ಸಾಧ್ಯವಾಗುವುದು.(6)

- ಕತ್ತರಿ ಉಪಯೋಗಿಸಿ ಕತ್ತರಿಸಲು ಸಾಧ್ಯವಾಗುವುದು.(7)

**ಆಶಯ** : ಹಲವು ಬಣ್ಣದ ಹೂಗಳಿವೆ.

- ಅಲಂಕಾರಕ್ಕೆ ಹೂಗಳನ್ನು ಉಪಯೋಗಿಸುತ್ತಾರೆ.

**ಸಾಮಗ್ರಿಗಳು** : ವರ್ಕ್ ಶೀಟು, ಸೂರ್ಯಕಾಂತಿ ಹೂವಿನ ಮತ್ತು ಚಿತ್ರದ ಪ್ರತಿಗಳು, ಕತ್ತರಿ, ಕ್ರಯೋನ್ಸ್, ಡಿಸ್ ಪ್ಲೇ ಬೋರ್ಡು.

**ಸಂದರ್ಭ** : ಅಧ್ಯಾಪಿಕೆ ಒಂದು ತಾವರೆ ಹೂವಿನ ಕಟೌಟು ತೋರಿಸಿ ಹೆಗ್ಗಳಿಗೆ ಹೇಳುವರು.

**ಪ್ರಕ್ರಿಯೆ** :

**ಹೆಗ್ಗಳಿಕೆ ಹೇಳುವ:** ಅಧ್ಯಾಪಿಕೆ ಒಂದು ತಾವರೆ ಹೂವಿನ ಕಟೌಟು ತೋರಿಸುವರು. ಹೆಗ್ಗಳಿಕೆ ಹೇಳುವರು.

'ನನ್ನ ಬಣ್ಣ ಕೆಂಪು ಆಗಿದೆ
ನಾನು ದೊಡ್ಡದಿದ್ದೇನೆ
ತುಂಬಾ ಎಸಳುಗಳಿವೆ
ನೀರಿನಲ್ಲಿ ಬೆಳೆಯುತ್ತೇನೆ
ಹೇಳಿರಿ ಹೇಳಿರಿ ನಾನ್ಯಾರು ?'

- ಇತರ ಹೂಗಳ ಹೆಗ್ಗಳಿಕೆಗಳನ್ನು ಹೇಳುವುದು.

ವರ್ಕ್ ಶೀಟ್ 9.5 – ಬಣ್ಣ ಕೊಡುವ ಹೆಗ್ಗಳಿಕೆ ಹೇಳುವ – ನೀಡುವುದು.

**ಚಿತ್ರ ಓದು** **:** ಸೂರ್ಯಕಾಂತಿ ಹೂವಿನ ಬಣ್ಣವಿರುವ ಚಿತ್ರವನ್ನು ತೋರಿಸುವುದು.

- ಸೂರ್ಯಕಾಂತಿ ಹೂವಿನ ಹೆಗ್ಗಳಿಕೆ ಹೇಳುವುದು.

- ಸೂರ್ಯಕಾಂತಿಗೆ ಬಣ್ಣ ಹಚ್ಚುವುದು. (ಚಿತ್ರ ಕತ್ತರಿಸಿ ಮಾಡಬೇಕಾದ ಚಟುವಟಿಕೆಯಾದ ಕಾರಣ ಚಿತ್ರದ ಪ್ರತಿಗಳನ್ನು ಮಕ್ಕಳಿಗೆ ನೀಡಿ ಚಟುವಟಿಕೆ ಮಾಡಬೇಕಾಗಿದೆ.)

- ಚಿತ್ರವನ್ನು ಕತ್ತರಿಯಿಂದ ಕತ್ತರಿಸುವುದು.

- ಚಿತ್ರಗಳನ್ನು ಡಿಸ್ ಪ್ಲೇ ಬೋರ್ಡಿನಲ್ಲಿ / ಗೋಡೆಯಲ್ಲಿ ಅಂಟಿಸುವುದು. ಗೋಡೆಯಲ್ಲಿ ಹೂದೋಟ (wall garden) ನಿರ್ಮಿಸುವುದು.

**ಮೌಲ್ಯಮಾಪನ** : ಅಂದವಾಗಿ ಬಣ್ಣ ಹಚ್ಚಲಾಗಿದೆ.

- ಹೂವಿನ ಕುರಿತಾಗಿ ಹೇಳಲು ಸಾಧ್ಯವಾಗುವುದು.

- ಕತ್ತರಿಯ ಸಹಾಯದಿಂದ ಕತ್ತರಿಸಲು ಸಾಧ್ಯವಾಗುವುದು.

## ವರ್ಕ್ ಶೀಟ್ 9.6 – ಹೂ ನಿರ್ಮಿಸುವ

**ವಿಕಾಸ ಮಂಡಲ** : ಶಾರೀರಿಕ ಚಲನಾತ್ಮಕ ವಿಕಾಸ

- ಸಾಮಾಜಿಕ ಭಾವನಾತ್ಮಕ ವಿಕಾಸ

- ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ

**ಸಾಮರ್ಥ್ಯ** : ಕಾಗದ, ಬಟ್ಟೆ ಮೊದಲಾದುವುಗಳನ್ನು ಮಡಚುವುದು, ಕತ್ತರಿಸುವುದು ಮತ್ತು ಅಂಟಿಸಲೂ ಸಾಧ್ಯವಾಗುವುದು.(6)

- ಕತ್ತರಿ ಉಪಯೋಗಿಸಿ ಕತ್ತರಿಸಲು ಸಾಧ್ಯವಾಗುವುದು.(7)

- ನಿರ್ಮಾಣ ಚಟುವಟಿಕೆಗಳಲ್ಲಿ ವೈಯಕ್ತಿಕವಾಗಿಯೂ ಗುಂಪಿನಲ್ಲಿಯೂ ಹಿರಿಯರೊಂದಿಗೆ ಸೇರಿ ಸಹಕಾರ ಮನೋಭಾವದಿಂದ ನೇತೃತ್ವ ಹಾಗೂ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡಲು ಸಾಧ್ಯವಾಗುವುದು.(19)

- ವಸ್ತುಗಳನ್ನು ಹೋಲಿಸಲೂ ಗಣಿತ ಭಾಷೆ ಉಪಯೋಗಿಸಲೂ ಸಾಧ್ಯವಾಗುವುದು..(39)

**ಆಶಯ** : ಹೂಗಳು ಹಲವು ಬಣ್ಣಗಳಲ್ಲಿವೆ.

- ಅಲಂಕಾರಕ್ಕೆ ಹೂಗಳನ್ನು ಉಪಯೋಗಿಸುತ್ತಾರೆ.

**ಸಾಮಗ್ರಿಗಳು** : ವರ್ಕ್ ಶೀಟಿನ ಪ್ರತಿಗಳು, ಕತ್ತರಿ, ಅಂಟು, ಕ್ರಯೋನ್ಸ್.

**ಸಂದರ್ಭ** : ಹೂಗಳ ಉಪಯೋಗಗಳಲ್ಲಿ ಪ್ರಧಾನವಾದುದು ಅಲಂಕಾರ ವಸ್ತುಗಳ ನಿರ್ಮಾಣ, ಮಾಲೆ, ಹೂಗುಚ್ಛ, ಹೂ ಕೊಡೆ ನಿರ್ಮಿಸುವುದು - ಚರ್ಚೆ.

**ಪ್ರಕ್ರಿಯೆ** :

**ಅಲಂಕಾರ** : ಇವತ್ತು ನಾವು ಹೂಗಳಿಂದ ತರಗತಿ ಕೋಣೆಯನ್ನು ಅಲಂಕರಿಸುವ.

ವರ್ಕ್ ಶೀಟ್ 9.6 – ಹೂ ನಿರ್ಮಿಸುವ – ನೀಡುವುದು.

**ಚಿತ್ರ ಓದು** : ಎಲ್ಲಾ ಹೂಗಳ ಗಾತ್ರ ಒಂದೇ ರೀತಿ ಆಗಿದೆಯೇ?

- ಬಣ್ಣವಿಲ್ಲದ ಎಷ್ಟು ಹೂಗಳಿವೆ?

- ಎಷ್ಟು ಎಲೆಗಳಿವೆ?

**ಬಣ್ಣ ನೀಡುವ** : ಹೂಗಳಿಗೆ, ಎಲೆಗಳಿಗೆ ಬೇರೆ ಬೇರೆ ಬಣ್ಣ ನೀಡುವುದು.

- ಮತ್ತಿರುವ ಚಟುವಟಿಕೆಗಳಲ್ಲಿ ಕತ್ತರಿ ಉಪಯೋಗಿಸಿ ಕತ್ತರಿಸಲೂ ಅಂಟಿಸಲೂ ಇರುವುದರಿಂದ ವರ್ಕ್ ಶೀಟಿನ ಪ್ರತಿಗಳನ್ನು ನೀಡಬೇಕಾಗಿದೆ.

- ಚಿತ್ರಗಳನ್ನು ಕತ್ತರಿಯ ಸಹಾಯದಿಂದ ಕತ್ತರಿಸುವುದು.

- ಮಾದರಿ ನೋಡಿ ಕೆಳಭಾಗದಲ್ಲಿ ಬರುವ ರೀತಿಯಲ್ಲಿ ದೊಡ್ಡದರಿಂದ ಸಣ್ಣದರೆಡೆಗೆ ಎಂಬೀ ರೀತಿಯಲ್ಲಿ ಕ್ರಮೀಕರಿಸಿ ಅಂಟಿಸುವುದು.

- ಕೆಳಭಾಗದಲ್ಲಿ ಎಲೆಗಳನ್ನು ಅಂಟಿಸುವುದು.

- ಸ್ವಂತ ಹೂವಿನ ಕುರಿತು ಹೆಗ್ಗಳಿಕೆ ಹೇಳುವುದು.

- ನಿರ್ಮಿಸಿದ ಹೂಗಳ ಪ್ರದರ್ಶನ.

**ಅಧ್ಯಾಪಿಕೆಗೆ** : ನಿರ್ಮಾಣದೆಡೆಯಲ್ಲಿ 'ಅಡಿಭಾಗದಲ್ಲಿ, ಕೆಳಗೆ, ನಡುವಿನಲ್ಲಿ, ಮೇಲೆ' ಮೊದಲಾದ ಪದಗಳನ್ನು ಉದ್ದೇಶಪೂರ್ವಕವಾಗಿ ಉಪಯೋಗಿಸಬೇಕು.

**ಮೌಲ್ಯಮಾಪನ** : ಅಂದವಾಗಿ ಬಣ್ಣ ಕೊಡಲಾಗಿದೆ.

- ಸರಿಯಾಗಿ ಕತ್ತರಿಯಿಂದ ಕತ್ತರಿಸಲಾಗಿದೆ.

- ಕತ್ತರಿಸಿ ಹೂಗಳನ್ನು ನಿರ್ಮಿಸಲು ಸಾಧ್ಯವಾಗುವುದು.

- ನಿರ್ಮಾಣ ಚಟುವಟಿಕೆಯಲ್ಲಿ ಸಹಕಾರ ಮತ್ತು ನೇತೃತ್ವಪರವಾದ ಭಾಗವಹಿಸುವಿಕೆ.

## ವರ್ಕ್ ಶೀಟ್ 9.7 – ಚಿತ್ರ ಪೂರ್ತಿಗೊಳಿಸುವ

**ವಿಕಾಸ ಮಂಡಲ** : ಶಾರೀರಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಕಾಗದ, ಬಟ್ಟೆ ಮೊದಲಾದುವುಗಳನ್ನು ಮಡಚುವುದು, ಕತ್ತರಿಸುವುದು ಮತ್ತು ಅಂಟಿಸಲೂ ಸಾಧ್ಯವಾಗುವುದು.(6)

**ಆಶಯ** : ಹೂವಿನಿಂದ ಜೇನನ್ನು ಹೀರಲು ಚಿಟ್ಟೆ, ದುಂಬಿ, ಜೇನುನೊಣಗಳು ಬರುತ್ತವೆ.

**ಸಾಮಗ್ರಿಗಳು** : ವರ್ಕ್ ಶೀಟು, ಬಣ್ಣಹಚ್ಚಿದ ಹತ್ತಿ, ಪೆನ್ಸಿಲ್, ಬಟ್ಟೆತುಂಡು, ಕಾಗದ.

**ಸಂದರ್ಭ** : ಹೂದೋಟದಲ್ಲಿ ಏನೆಲ್ಲ ಇದೆ? - ಚರ್ಚೆ.

**ಪ್ರಕ್ರಿಯೆ** :

**ಕಥೆ** : ಚಂದದ ಹೂದೋಟ (ಆಟಿಕೆ ಪುಸ್ತಕದ 206 ನೇ ಪುಟ)

- ಹೂದೋಟಕ್ಕೆ ಸಂಬಂಧಿಸಿದ ಕಥೆ, ಸೇಂಡ್ ಟ್ರೇಯ ಸಹಾಯದೊಂದಿಗೆ ಅಥವಾ ಬಿಗ್ ಪಿಕ್ಚರಿನ ಸಹಾಯದಿಂದ ಮಂಡಿಸುವುದು.

**ಆಟ** : ಹೂಗಳ ಹೆಸರು ಹೇಳುವ ಆಟ

- ಮಕ್ಕಳು ವೃತ್ತಾಕಾರದಲ್ಲಿ ನಿಲ್ಲುವುದು.
- ಒಬ್ಬೊಬ್ಬರೇ ಹೂವಿನ ಹೆಸರು ಹೇಳುವುದು.
- ಹೆಸರು ಹೇಳಲು ಸಾಧ್ಯವಾಗದವರು ಕುಳಿತುಕೊಳ್ಳಬೇಕು.

**ಪದ್ಯ ಹಾಡುವ** : ಪದ್ಯವನ್ನು ಒಟ್ಟಾಗಿ ಹಾಡುವುದು.

- ಅಂಗಳದಲ್ಲೊಂದು ಹೂದೋಟ
  ಅಂದವಾದ ಹೂದೋಟ
  (ಆಟಿಕೆ ಪುಸ್ತಕದ ಪುಟ 206)

ವರ್ಕ್ ಶೀಟ್ 9.7 – ಚಿತ್ರ ಪೂರ್ತಿಗೊಳಿಸುವ – ನೀಡುವುದು.

**ಚಿತ್ರ ಓದು** : ಬಣ್ಣ ಹಚ್ಚಿದ ಹತ್ತಿ, ಪೆನ್ಸಿಲ್ ಸ್ಕ್ರೇಪ್, ಬಟ್ಟೆ ತುಂಡುಗಳು, ಕಾಗದ ಎಂಬಿವುಗಳನ್ನು ಕತ್ತರಿಸಿ ಅಂಟಿಸಿ ಹೂದೋಟ ಚಂದ ಮಾಡುವುದು.

- ಪ್ರತಿಯೊಬ್ಬರೂ ಸ್ವಂತ ಹೂದೋಟದ ಕುರಿತು ಹೇಳುವುದು.
- ಎಲ್ಲರ ಚಿತ್ರಗಳನ್ನು ಪ್ರದರ್ಶಿಸುವುದು. / ಆಸ್ವಾದಿಸುವುದು.

**ಮೌಲ್ಯಮಾಪನ** : ಗೆರೆಯ ಒಳಗೆ ಮಾತ್ರ ಅಂಟಿಸಲಾಗಿದೆ.

- ಸೂಕ್ತ ಬಣ್ಣ ನೀಡಲಾಗಿದೆ.
- ಸ್ವಂತ ಚಿತ್ರದ ಕುರಿತು ನಿಸ್ಸಂಕೋಚದಿಂದ ಹೇಳಲು ಸಾಧ್ಯವಾಗುವುದು.

# ಥೀಂ 10 – ಓಣಂ, ರಂಜಾನ್

ಎಲ್ಲಾ ವಿಕಾಸ ಮಂಡಲಗಳಿಗೂ ಪರಿಗಣನೆ ಲಭಿಸಿದೆ ಎಂದು ಖಾತರಿಪಡಿಸಬೇಕು. ಅಧ್ಯಾಪಿಕೆಗೆ ಅನುಯೋಜ್ಯವಾದ ಸೇರಿಸುವಿಕೆ ಮತ್ತು ಉತ್ತಮಪಡಿಸುವಿಕೆಯನ್ನೂ ಮಾಡಬಹುದಾಗಿದೆ.

**ಚಟುವಟಿಕಾ ಕ್ರಮ**

1. ಆಖ್ಯಾನ + ವರ್ಕ್ ಶೀಟು 10.1 - "ಬಣ್ಣ ನೀಡುವ, ಹೇಳುವ" ನೀಡುವುದು.

↓

2. ಸ್ವತಂತ್ರ ಆಟಗಳು

↓

3. ಅಲಂಕರಿಸುವುದು, ಸೂಚನೆ ನೀಡುವುದು.

↓

4. ಹೂದೋಟ ನಿರ್ಮಿಸುವುದು.

↓

5. ವರ್ಕ್ ಶೀಟು 10.2 - "ಪೂವಲಿಗೆ ಬಣ್ಣ ಹಚ್ಚುವ" ನೀಡುವುದು.

↓

6. ಹುಟ್ಟುಹಬ್ಬ ಆಚರಣೆ - ಅನುಭವ ಹಂಚುವುದು.

↓

7. ಆಟದಲ್ಲಿ ಭಾಗವಹಿಸುವುದು.

↓

8. ಅನುಭವಗಳನ್ನು ಹಾಡುವುದು (ರಂಜಾನ್) +ವರ್ಕ್ ಶೀಟು 10.3 - "ಬಣ್ಣ ಹಚ್ಚುವ ಹೇಳುವ" ನೀಡುವುದು.

↓

9. ಮದರಂಗಿ ಹಾಕುವುದು.

↓

10. ಆಹಾರ ಪದ್ಯಗಳು + ವರ್ಕ್ ಶೀಟು 10.4 - "ಓಣಂ ಔತಣ" ನೀಡುವುದು.

## ವರ್ಕ್ ಶೀಟ್ 10.1 – "ಬಣ್ಣ ನೀಡುವ, ಹೇಳುವ"

**ವಿಕಾಸ ಮಂಡಲ** : ಶಾರೀರಿಕ ಚಲನಾತ್ಮಕ ವಿಕಾಸ

- ಸೃಜನಾತ್ಮಕ ವಿಕಾಸ

**ಸಾಮರ್ಥ್ಯ** : ಸ್ವಂತವಾಗಿ ಚಿತ್ರ ರಚಿಸಿ ಬಣ್ಣ ಹಚ್ಚುವುದು. (5)

- ಪ್ರಕೃತಿಯನ್ನು ಆಸ್ವಾದಿಸಲೂ ಚಿತ್ರದ ಮೂಲಕ ಪ್ರಕಟಪಡಿಸಲೂ ಬಣ್ಣ ಹಚ್ಚಲೂ ಸಾಧ್ಯವಾಗುವುದು. (79)

**ಆಶಯ** : ಓಣಂ, ರಂಜಾನ್ ಮೊದಲಾದ ಹಲವು ತರದ ಹಬ್ಬಗಳಿವೆ.

- ಪ್ರತಿಯೊಂದಕ್ಕೂ ಅದರದ್ದೇ ಆದ ಪ್ರತ್ಯೇಕತೆಗಳಿವೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್

**ಸಂದರ್ಭ** : ಓಣಂ ಹಬ್ಬಕ್ಕೆ ಸಂಬಂಧಿಸಿ ಅನುಭವಗಳನ್ನು ಹೇಳುವುದು. ತರಗತಿಯಲ್ಲಿ ಹೂವಿನ ರಂಗೋಲಿ ನಿರ್ಮಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಸುರೇಶ ಗಿಡಗಳನ್ನು ನೆಟ್ಟನು. ನೀರೆರೆದನು. ಗಿಡಗಳು ಬೆಳೆದವು. ಆದರೆ ಹೂ ಬಿಡಲಿಲ್ಲ. ಪ್ರತಿದಿನ ಹೋಗಿ ನೋಡುತ್ತಾನೆ. ಒಂದು ಗಿಡವೂ ಹೂ ಬಿಡಲಿಲ್ಲ. 'ನಾಳೆ ನೀನು ಹೂ ಬಿಡಬೇಕು' ಅವನು ಪ್ರತಿಯೊಂದು ಗಿಡದ ಬಳಿ ಹೋಗಿ ಗುಟ್ಟಿನಲ್ಲಿ ಹೇಳಿದನು. ಗಿಡಗಳು ತಲೆ ಅಲ್ಲಾಡಿಸಿದವು. ಆದರೆ ಮರುದಿನ ಹೋಗುವಾಗ ಎಲ್ಲವೂ ಹಿಂದಿನಂತೆ. ಒಂದು ದಿನ ಅವನು ಕಿಟಿಕಿಯಲ್ಲಿ ನೋಡುವಾಗ ಒಬ್ಬ ಗಿಡಗಳೆಡೆಯಲ್ಲಿ ನಿಂತಿರುವುದನ್ನು ಕಂಡನು. ವಿಶೇಷ ರೀತಿಯ ಕೊಡೆಯನ್ನು ಹಿಡಿದು ನಿಂತಿದ್ದರು. ಕೊಡೆಯಲ್ಲಿ ಹಲವು ಬಣ್ಣಗಳು.. ಸುರೇಶ ಸೂಕ್ಷ್ಮವಾಗಿ ನೋಡಿದನು. ಅದೆಲ್ಲ ಚಿಟ್ಟೆಗಳಾಗಿತ್ತು. 'ಚಿಟ್ಟೆ

ಕೊಡೆ' ಆ ಕೊಡೆಯವನು ಪ್ರತಿಯೊಂದು ಗಿಡದ ಬಳಿಗೆ ಹೋಗಿ ಗಿಡಗಳನ್ನು ಮುಟ್ಟಿ ನೇವರಿಸಿದನು. ಅದ್ಭುತ! ಆಗ ಗಿಡಗಳು ಹೂ ಬಿಡಲು ಆರಂಭಿಸಿದವು. ಎಲ್ಲಾ ಗಿಡಗಳು ಹೂವಿನಿಂದ ತುಂಬಿಕೊಂಡವು. ಚಿಟ್ಟೆಗಳು ಕೊಡೆಯಿಂದ ಹೂಗಳಿಗೆ ಹಾರಿದುವು. ಅದೊಂದು ಮಡಲಿನ ಕೊಡೆಯೆಂದು ಆಗಲೇ ಅವನಿಗೆ ತಿಳಿದದ್ದು. ಯಾರು ಅದು ? ಸುರೇಶ ಗಿಳಿಯೊಡನೆ ಕೇಳಿದನು. ಗಿಳಿ ಒಂದು ಪದ್ಯ ಹಾಡಿತು.

ಓಣಂ ಬಂತು ಓಣಂ ಬಂತು ಓಣಂ ಬಂತು
ಮಹಾಬಲಿ ಬಂದಾಗ ಓಣಂ ಬಂತು
ಹೂವು ಅರಳಿತು ಚಿಟ್ಟೆ ಬಂದಿತು
ಹೂಗಳ ಹಾಕಿ ರಂಗೋಲಿ ಮಾಡಿ
(ತಾಳ ಹಾಕಿ ಪದ್ಯ ಹಾಡುವುದು)

- ಯಾರಾಗಿರಬಹುದು? ಈಗ ತಿಳಿಯಿತೇ?
- ಹೂದೋಟದಲ್ಲಿ ಮಹಾಬಲಿ ನಿಂತಿರುವ ಚಿತ್ರ.

ವರ್ಕ್ ಶೀಟ್ 10.1 – "ಬಣ್ಣ ನೀಡುವ, ಹೇಳುವ" – ನೀಡುವುದು.

**ಹೂ ಪದ್ಯ** : ಮುಂದುವರಿಸಿ ಹೂ ಪದ್ಯ ಹಾಡುವುದು.
- ಚಿತ್ರದಲ್ಲಿ ಕಾಣುವುದನ್ನು ಹೇಳುವುದು.
- ಸೂಚನೆಗನುಸರಿಸಿ ಹೂಗಳಿಗೆ ಬಣ್ಣ ನೀಡುವುದು.
- ಪರಸ್ಪರ ಮೌಲ್ಯಮಾಪನ ಮಾಡುವುದು.
- ಚಿತ್ರದಲ್ಲಿ ಏನೇನು? ಹೇಳಲು ಅವಕಾಶ ನೀಡುವುದು.
- ಎಡಭಾಗದ ಮೇಲ್ಭಾಗದಲ್ಲಿರುವ ಹೂವಿನ ಬಣ್ಣ ಯಾವುದು?
- ಅದೇ ರೀತಿಯ ಹೂವು ಚಿತ್ರದಲ್ಲಿ ಎಲ್ಲಿ ಕಾಣುವುದು?
- ಅದಕ್ಕೆ ಅದೇ ನೀಲಿ ಬಣ್ಣವನ್ನು ನೀಡಬೇಕು.
- ಇದೇ ರೀತಿ ಇತರ ಹೂಗಳನ್ನು ಕಂಡುಹಿಡಿದು ಸರಿಯಾದ ಬಣ್ಣ ಹಚ್ಚುವುದು.
- ಎಲೆಗಳಿಗೆ ಸೂಕ್ತವಾದ ಬಣ್ಣ ನೀಡುವುದು.
- ಉಳಿದ ಚಿತ್ರಗಳಿಗೆ ಸೂಕ್ತವಾದ ಬಣ್ಣ ನೀಡಿ ಅಂದಗೊಳಿಸುವುದು.

**ಮೌಲ್ಯಮಾಪನ** : ಸೂಚನೆಗನುಸರಿಸಿ ಬಣ್ಣ ನೀಡಲಾಗಿದೆ.
- ಬಣ್ಣ ಹಚ್ಚುವಿಕೆಯಲ್ಲಿರುವ ಸೂಕ್ಷ್ಮತೆ / ಹಿರಿಮೆ.

## ವರ್ಕ್ ಶೀಟ್ 10.2 - "ಪೂವಲಿಗೆ ಬಣ್ಣ ಹಚ್ಚುವ"

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಗಣಿತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದು. (46)

**ಆಶಯ** : ಓಣಂ, ರಂಜಾನ್ ಮೊದಲಾದ ಹಬ್ಬಗಳಿವೆ.
- ಪ್ರತಿಯೊಂದಕ್ಕೂ ಅದರದ್ದೇ ಆದ ಪ್ರತ್ಯೇಕತೆಗಳಿವೆ.

**ಸಾಮಗ್ರಿಗಳು** : ವರ್ಕ್ ಶೀಟು, ಕಾಗದ, ಬೊಟ್ಟು.

**ಸಂದರ್ಭ** : ಓಣಂ ಹಬ್ಬಕ್ಕೆ ಸಂಬಂಧಿಸಿದ ಕಥೆ ಕೇಳಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಮಾಯಾಳಿಗೆ ತುಂಬಾ ಜ್ವರ. ಮುಟ್ಟಿದರೆ ಸುಡುವಷ್ಟು ಬಿಸಿ. ಅವಳು ಮಲಗಿದ್ದಾಳೆ. ಹೊರಗೆ ಮಕ್ಕಳ ಗಲಾಟೆ. 'ಹೂ ಕೊಯ್ಯಲು ಬರುವಿರಾ ?' ಮಕ್ಕಳು ಹಾಡಿ ನಲಿಯುತ್ತಾರೆ. ಮಾಯಾಳಿಗೆ ಪೂವಲಿ ಹಾಕಬೇಕೆಂಬ ಆಸೆಯಿದೆ. ಅವಳು ಎದ್ದಳು. ತುಂಬಾ ಆಯಾಸ.. ಅವಳು ಪುನಃ ಮಲಗಿದಳು. ಪಾಪ.. ನಿದ್ದೆ ಬಂತು. ಆಗ ಬಾಗಿಲಿನಿಂದ ಒಬ್ಬೊಬ್ಬರೇ ಬರಲಾರಂಭಿಸಿದರು. ಕೋಣೆಗೆ ಒಳ್ಳೆಯ ಪರಿಮಳ ಬರಲಾರಂಭಿಸಿತು. ಎಲ್ಲಾ ಹೂಗಳು ಬಂದುವು. (ಪ್ರತಿಯೊಂದು ಹೂವಿನ ಹೆಸರು ಹೇಳಬೇಕು.) ಗುಲಾಬಿ ಹೂ ಬಂತು.. ಎಂದು

ಹೇಳುವಾಗ ಹಾಯ್ ಒಳ್ಳೆಯ ಪರಿಮಳ ಎಂದು ಆಸ್ವಾದಿಸಿ ಮಕ್ಕಳು ಹೇಳಬೇಕು.

ಮೇಜಿನ ಮೇಲೆ ಇದ್ದ ಚೋಕು ನೆಲಕ್ಕೆ ಹಾರಿತು.ಅದು ಒಂದು ದೊಡ್ಡ ವೃತ್ತವನ್ನು ಎಳೆಯಿತು. 'ನಾನು ಮಧ್ಯದಲ್ಲಿ ಕುಳಿತುಕೊಳ್ಳುತ್ತೇನೆ.' ಗುಲಾಬಿ ಹೇಳಿತು. ಮಾಯಾಳಿಗೆ ಎಚ್ಚರವಾದಾಗ ಮೊದಲು ನನ್ನನ್ನು ನೋಡುತ್ತಾಳೆ. 'ನಾನು ಹತ್ತಿರ ಕುಳಿತುಕೊಳ್ಳಬಹುದೇ?' ಮಲ್ಲಿಗೆ ಕೇಳಿತು. 'ನನ್ನ ಪರಿಮಳ ಮೊದಲು ಸಿಗಬಹುದಲ್ಲವೇ?' ದಾಸವಾಳ ಹೂವು ಮಲ್ಲಿಗೆ ಮತ್ತು ಸೇವಂತಿಗೆಯೊಡನೆ ಪರಿಮಳವನ್ನು ಸಾಲ ಕೇಳಿತು. ಅವರ್ಯಾರೂ ಕೊಡಲಿಲ್ಲ. 'ಪರಿಮಳವಿಲ್ಲದಿದ್ದರೂ ಅಂದವಾಗಿದ್ದೇನಲ್ಲ..' ದಾಸವಾಳ ಎರಡನೇ ಸಾಲಿನಲ್ಲಿ ಕುಳಿತಿತು. 'ನಾನು ದೊಡ್ಡದಿದ್ದೇನೆ. ನನ್ನನ್ನು ಬೇಗನೆ ಕಾಣಬಹುದು.' ಪ್ರತಿಯೊಂದು ಹೂವು ಒಂದೊಂದು ಕಡೆ ಕುಳಿತಿತು. ಮಾಯಾ ಎದ್ದಳು. ನೆಲದೆಡೆಗೆ ನೋಡಿದಳು. 'ಹಾಯ್! ಎಷ್ಟು ಚಂದದ ಪೂವಲಿ..' ಆಗ ಒಂದು ಅಳುವ ಶಬ್ದ ಕೇಳಿಸಿತು. ಬುಗುಡಿ ಹೂವಿಗೆ ಕುಳಿತುಕೊಳ್ಳಲು ಯಾರೂ ಸ್ಥಳ ನೀಡಲಿಲ್ಲ. ಮಾಯಾ ಅವುಗಳನ್ನು ತೆಗೆದು ಸುತ್ತಲೂ ಇರಿಸಿದಳು. ಎಲ್ಲರಿಗೂ ಸಂತೋಷವಾಯಿತು. ಮಾಯಾ ಮೊಬೈಲಿನಲ್ಲಿ ಪೂವಲಿಯ ಫೋಟೊ ತೆಗೆದಳು. ಫೋಟೊ ನೋಡಿ ಬಣ್ಣ ಹಚ್ಚಿರಿ.

ವರ್ಕ್ ಶೀಟ್ 10.2 - "ಪೂವಲಿಗೆ ಬಣ್ಣ ಹಚ್ಚುವ" – ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಏನೇನಿದೆ? - ಹೇಳಲು ಅವಕಾಶ ನೀಡುವುದು.

- ಹೂಗಳಿಗೆ ಸೂಕ್ತವಾದ ಬಣ್ಣ ನೀಡುವುದು.
- ಬಣ್ಣ ನೀಡಿದ ಚಿತ್ರವನ್ನು ಪ್ರದರ್ಶಿಸುವುದು.
- ಗಣಿತ ಸಾಧ್ಯತೆ (ಸಂಖ್ಯೆ, ಹೆಚ್ಚು, ಕಡಿಮೆ) ಉಪಯೋಗಿಸುವುದು.

**ಮೌಲ್ಯಮಾಪನ** : ಆಕರ್ಷಕವಾಗಿ ಬಣ್ಣ ಹಚ್ಚಲಾಗಿದೆ.

- ಗುಲಾಬಿ, ದಾಸವಾಳ, ಸೇವಂತಿಗೆ ಮೊದಲಾದ ಹೂಗಳ ಸಂಖ್ಯೆ ಹೇಳಲು ಸಾಧ್ಯವಾಗುವುದು.

## ವರ್ಕ್ ಶೀಟ್ 10.3 - "ಬಣ್ಣ ಹಚ್ಚುವ, ಹೇಳುವ"

**ವಿಕಾಸ ಮಂಡಲ** : ಭಾಷಾ ವಿಕಾಸ

- ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ
- ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ವಸ್ತುಗಳ ಮತ್ತು ಘಟನೆಯ ಚಿತ್ರಗಳನ್ನು ನಿರೀಕ್ಷಿಸಿ ವಿವರಿಸಲು ಮತ್ತು ಕಂಡುಕೊಂಡ ವಿಚಾರಗಳನ್ನು ಮಂಡಿಸಲು ಸಾಧ್ಯವಾಗುವುದು. (21)

- ಪ್ರಕೃತಿಯನ್ನು ಆಸ್ವಾದಿಸಲೂ ಚಿತ್ರಗಳಿಗೆ ಬಣ್ಣ ಹಚ್ಚಲೂ ಸಾಧ್ಯವಾಗುವುದು.(79)
- ಸಂಖ್ಯೆಗಳು ಮತ್ತು ವಸ್ತುಗಳನ್ನು ಪರಸ್ಪರ ಹೊಂದಿಸಲು ಸಾಧ್ಯವಾಗುವುದು.(44)

**ಆಶಯ** : ಪ್ರತಿಯೊಂದು ಹಬ್ಬಕ್ಕೂ ಅದರದ್ದೇ ಆದ ಪ್ರತ್ಯೇಕತೆಗಳಿವೆ.

**ಸಾಮಗ್ರಿಗಳು** : ವರ್ಕ್ ಶೀಟು

**ಸಂದರ್ಭ** : ಆಟಿಕೆ ಪುಸ್ತಕದ ಪುಟ 207 ರಲ್ಲಿರುವ ಓಣಂ ಹಾಡುಗಳು / ರಂಜಾನ್ ಹಾಡುಗಳು. ನಂತರ ವರ್ಕ್ ಶೀಟುಗಳನ್ನು ನೀಡುವುದು.

**ಪ್ರಕ್ರಿಯೆ** :

**ಆಖ್ಯಾನ** : ಆಮೀನಳಿಗೆ ಅವಳ ಉಮ್ಮ ಹಬ್ಬದ ಉಡುಗೊರೆ ಕೊಟ್ಟರು. ಅದನ್ನು ಬಿಡಿಸಿ, 'ಇದು ಕಿವಿಗೆ, ಇದು ಕೊರಳಿಗೆ, ಇದು ಕೈಗಳಿಗೆ' ಎಂದರು. ಆ ಉಡುಗೊರೆಯ ಕಟ್ಟಿನಲ್ಲಿ ಏನಾಗಿರಬಹುದು ?

- 'ಉಮ್ಮಾ..' 'ಏನು ಮಗಳೇ..' 'ಈ ಬಳೆಗಳನ್ನು ಎರಡು ಕೈಗಳಿಗೆ ಸಮಾನವಾಗಿ ಹಾಕಿ ಕೊಡುತ್ತೀಯಾ ?' (ಎಲ್ಲರೂ ಬಳೆ ಹಾಕುವುದನ್ನು

ಅಭಿನಯಿಸುವುದು.) ಎಡಕೈಗೆ ಬಳೆ ಹಾಕಿದಳು. (ಎಡ / ಬಲದ ತಿಳುವಳಿಕೆ - ಅಭಿನಯಿಸುವುದು.) ಒಂದು ಬಳೆ ಜಾಸ್ತಿಯಿದೆ. ಆಮೀನ ಗಟ್ಟಿಯಾಗಿ ಹೇಳಿದಳು. ಎರಡೂ ಕೈಗಳಿಗೂ ಮೂರು ಮೂರು ಬಳೆಗಳು. (ಸರಿಯಾಗಿದೆಯೇ? ಚಿತ್ರ ನೋಡಿ. ಮುಟ್ಟಿ ನೋಡಿ ಎಣಿಸುವುದು.) ಅವಳು ಓಲೆಗಳನ್ನು ತೆಗೆದು ಕಿವಿಗೆ ಹಾಕಿದಳು. (ಅಭಿನಯ) ಕೂಗಿ ಹೇಳಿದಳು. ಎರಡು ಕಿವಿಗಳಿಗೆ ಎರಡು ಓಲೆಗಳು. (ಸರಿಯೇ?)

ವರ್ಕ್ ಶೀಟ್ 10.3 - "ಬಣ್ಣ ಹಚ್ಚುವ, ಹೇಳುವ" – ನೀಡುವುದು.

**ಚಿತ್ರ ಓದು** : ಚಿತ್ರ ನೋಡಿ. ಮುಟ್ಟಿ ಎಣಿಸಿ. (ಕಿವಿಯಲ್ಲಿ ಓಲೆಗಳನ್ನು ಹಾಕುವ ಅಭಿನಯ) ಎಷ್ಟು ಮಾಲೆಗಳಿವೆ? ಎಣಿಸಿ ಹೇಳಿರಿ. ಅವಳು ಎಣಿಸಿದಳು. ಒಬ್ಬರಿಗೆ ಒಂದು ಮಾಲೆ ಸಾಕು. ಅವಳು ಹೇಳಿದಳು. ಆಮೀನ ಒಂದು ಮಾಲೆಯನ್ನು ಮತ್ತು ಒಂದು ಬಳೆಯನ್ನು ಉಮ್ಮನಿಗೆ ಕೊಟ್ಟಳು. ಆಗ ಉಮ್ಮ ಅವಳಿಗೆ ಇನ್ನೊಂದು ಉಡುಗೊರೆ ಕೊಟ್ಟರು. ಏನಾಗಿರಬಹುದು? ಆಹಾ.. ಪ್ರೀತಿಯ ಉಮ್ಮ.. (ಇನ್ನು ಆಮೀನಳ ಉಡುಪಿಗೆ ಬಣ್ಣ ಕೊಡುವ. ಮೂರು ಬಣ್ಣಗಳಿರುವ ಉಡುಪು.. ಬಣ್ಣ ನೀಡುವುದು.)

**ಮೌಲ್ಯಮಾಪನ** : ಚಿತ್ರದಲ್ಲಿರುವ ವಸ್ತುಗಳನ್ನು ಎಣಿಸಿ ಹೇಳಲು ಸಾಧ್ಯವಾಗುವುದು.
- ಸೂಕ್ತವಾದ ಬಣ್ಣವನ್ನು ಕೊಡಲಾಗಿದೆ.
- ಬಣ್ಣ ಹಚ್ಚಿದುದರಲ್ಲಿನ ಸೂಕ್ಷ್ಮತೆ / ಹಿರಿಮೆ.

## ವರ್ಕ್ ಶೀಟ್ 10.4 – ಓಣಂ ಔತಣ

**ವಿಕಾಸ ಮಂಡಲ** : ಭಾಷಾ ವಿಕಾಸ
- ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ

**ಸಾಮರ್ಥ್ಯ** : ವಸ್ತುಗಳ ಮತ್ತು ಘಟನೆಗಳ ಚಿತ್ರಗಳನ್ನು ನಿರೀಕ್ಷಿಸಿ ವಿವರಗಳನ್ನು ಮತ್ತು ಕಂಡುಕೊಂಡ ವಿಚಾರಗಳನ್ನು ಮಂಡಿಸಲು ಸಾಧ್ಯವಾಗುವುದು. (21)
- ಪ್ರಕೃತಿಯನ್ನು ಆಸ್ವಾದಿಸಲೂ ಚಿತ್ರಗಳಿಗೆ ಬಣ್ಣ ಹಚ್ಚಲೂ ಸಾಧ್ಯವಾಗುವುದು.(79)

**ಆಶಯ** : ಓಣಂ, ರಂಜಾನ್ ಮೊದಲಾದ ಹಲವಾರು ಹಬ್ಬಗಳಿವೆ. ಪ್ರತಿಯೊಂದಕ್ಕೂ ಅದರದ್ದೇ ಆದ ಪ್ರತ್ಯೇಕತೆಗಳಿವೆ. ಕೆಲವೊಂದನ್ನು ಶಾಲೆಯಲ್ಲಿ ಆಚರಿಸುತ್ತೇವೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್, ಓಣಂ ಔತಣ

**ಸಂದರ್ಭ** : ಹಬ್ಬಗಳಿಗೆ ಸಂಬಂಧಿಸಿದ ಅನುಭವಗಳನ್ನು ಹೇಳುವುದು.

**ಪ್ರಕ್ರಿಯೆ** :

**ಆಖ್ಯಾನ** : ಪದ್ಯವನ್ನು ಗುಂಪಾಗಿ ಹಾಡುವುದು.

ಓಣಂ ಔತಣ ಮಾಡೋಣ
ಸಿಹಿರುಚಿ ಊಟವ ಸವಿಯೋಣ
ರುಚಿ ರುಚಿಯಾದ ಸಾಂಬಾರು
ಅನ್ನದ ಜೊತೆಯಲಿ ಸಾಂಬಾರು
ಖಾರಕೆ ಜೊತೆಯಲಿ ಉಪ್ಪಿನಕಾಯಿ
ಪಲ್ಯಕೆ ಹಾಕಿದೆ ಬಾಳೆಕಾಯಿ
ಪಾಯಸ, ಜಿಲೇಬಿ ಹೋಳಿಗೆ ಎಲ್ಲ
ಖಾರದ ಭರವ ಮರೆಯಿಸಿತಲ್ಲ
ಎಲ್ಲರು ಜತೆಯಲಿ ಸವಿಯೋಣ
ಹಬ್ಬದ ಖುಷಿಯನು ಪಡೆಯೋಣ

ವರ್ಕ್ ಶೀಟ್ 10.4 – ಓಣಂ ಔತಣ – ನೀಡುವುದು.

**ಚಿತ್ರ ಓದು** **:** ಪ್ರತಿಯೊಂದು ಗೆರೆಯನ್ನು ಹಾಡುವಾಗಲೂ ಆ ವಸ್ತುವನ್ನು ಎಲೆಯಲ್ಲಿ ಚಿತ್ರ ಮಾಡಿ ತೋರಿಸುವುದು. ಅಲ್ಲದಿದ್ದರೆ ತಾಯಂದಿರ ಸಹಾಯದಿಂದ ಮೊದಲೇ ಇಷ್ಟು ವಸ್ತುಗಳನ್ನು ಸಂಗ್ರಹಿಸಬೇಕು. ಪದ್ಯ ಹಾಡಿ ಚಿತ್ರ ಮಾಡಿದ ನಂತ ಔತಣ.

- ಎಲ್ಲರಿಗೂ ಔತಣದ ವಸ್ತುಗಳನ್ನು ಬಡಿಸುವಾಗಲೂ ಪದ್ಯ ಹಾಡಿ ಖುಷಿ ಪಡಬೇಕು.

**ಮೌಲ್ಯಮಾಪನ** : ಸೂಚನೆಗನುಸರಿಸಿ ಬಣ್ಣ ಹಚ್ಚಲು ಸಾಧ್ಯವಾಗುವುದು.

- ಬಣ್ಣ ಹಚ್ಚುವಿಕೆಯಲ್ಲಿನ ಆಕರ್ಷಣೆ
- ಚಿತ್ರ ನಿರೀಕ್ಷಿಸಿ ವಿಷಯಗಳನ್ನು ಹೇಳಲು ಸಾಧ್ಯವಾಗುವುದು.